ಸಂಸ್ಕಾರವಲ್ಲರೀ

(ಷೋಡಶ ಸಂಸ್ಕಾರಗಳ ವಿವೇಚನೆ)

: ಲೇಖಕರು / ಪ್ರಕಾಶಕರು:

ವೇ. ಮೂ. ವಿಶ್ವೇಶ್ವರ ಪರಮೇಶ್ವರ ಭಟ್ಟ, ಕೆರೇಕೈ

ಸಂಸ್ಕಾರವಲ್ಲರೀ (ಷೋಡಶ ಸಂಸ್ಕಾರಗಳ ವಿವೇಚನೆ)
ಲೇಖಕರು : **ವೇ. ಮೂ. ವಿಶ್ವೇಶ್ವರ ಪರಮೇಶ್ವರ ಭಟ್ಟ, ಕೆರೇಕೈ** , ಅಂಚೆ : **ಚಿಪಗಿ,**
ತಾ. : **ಶಿರಸಿ** (ಉ. ಕ.)

ಹಕ್ಕುಗಳು : **ಲೇಖಕರದ್ದು**

ಪ್ರತಿಗಳು : **೫೦೦**

ಪುಟಗಳು : iv + **೪೮**

ಬೆಲೆ : **ರೂ. ೧೫/-**

ಪ್ರಕಟಣೆ : **೨೦೦೮**

ಮುದ್ರಣ : **ದಿ ಚೇತನಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಶಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ಶಿರಸಿ**
ಸಿ. ಪಿ. ಬಝಾರ್, **ಶಿರಸಿ** - ೫೮೧ ೪೦೧
ಫೋನ್ : ೦೮೩೮೪- **೨೨೬೦೦೨**

ಮುನ್ನುಡಿ

ಶ್ರೀಯುತ ವಿಶ್ವೇಶ್ವರ ಭಟ್ಟರ ಬದುಕು ಹಾಗೂ ಬರವಣಿಗೆ ಎರಡರಲ್ಲೂ ರೂಢಿಸಿಕೊಂಡಿದ್ದು ಸರಳ ಶೈಲಿಯನ್ನು. ಇವರು ಯಾರ ಜೊತೆಗೂ ಚೆನ್ನಾಗಿ ಬೆರೆಯಬಲ್ಲರು. ಯಾವ ವಿಷಯದ ಕುರಿತೂ ತಿಳಿಯುವಂತೆ ಬರೆಯಬಲ್ಲರು. ತಿಳಿದಿದ್ದನ್ನು ಬರೆಯುವವರೇ ಹೊರತು ತಿಳಿದಿದೆ ಎಂದೇ ಬರೆಯುವವರಲ್ಲ. ಹಾಗಾಗಿ ನಾನು ಅವರಲ್ಲಿ ಕಂಡದ್ದು ತನಗೆ ತಿಳಿದಿದೇ ಎಂಬ ಅಹಂಕಾರವನ್ನಲ್ಲ; ಎಲ್ಲರಿಗೂ ತಿಳಿಯಲಿ ಎಂಬ ಅನುಕಂಪವನ್ನು ಮಾತ್ರ. ಹಲವರಂತೆ ಕಾಲ ಬಂದಾಗ ಬರೆಯುವವರಲ್ಲ. ಕಾಲವಿದ್ದಾಗ ಬರೆದವರೂ ಅಲ್ಲ. ಮೊದಲಿನಿಂದ ಬರೆಯುತ್ತಲೇ ಈ ಕಾಲದವರೆಗೆ ಬಂದವರು. ಅವರ ಬರಹಕ್ಕಿನ್ನೂ ಬಂದಿಲ್ಲ ಬರಗಾಲ. ಯಾರ ತಾರುಣ್ಯವನ್ನೂ ನಾಚಿಸುವ ಅವರ ಕ್ರಿಯಾಶೀಲತೆಯನ್ನು ಕಂಡೇ ಸಕಾಲದಲ್ಲೇ ಬಂದ ವಾರ್ಧಕ್ಯವೂ ತಾರುಣ್ಯವನ್ನೇ ತೋರಿಸಿದೆ. ಒಂದು ರೀತಿಯಲ್ಲಿ ಅವರೀಗ ತರುಣ ಮುದುಕರು.

ಅವರ ಪ್ರಾಕೃತ ಸಂಸ್ಕಾರವಲ್ಲರೀ (ಷೋಡಶ ಸಂಸ್ಕಾರಗಳ ವಿವೇಚನೆ) ಎಂಬೀ ಕೃತಿ ಅವರಂತೆ ಆಕೃತಿಯಲ್ಲಿ ಚಿಕ್ಕದು. ಆದರೂ ವಿಚಾರ ಗಾಂಭೀರ್ಯದಿಂದಾಗಿ ಇದು ಯಾರೂ ತಲೆತೂಗುವ, ತಲೆಬಾಗುವ ಕೃತಿಯೇ ಸರಿ. ಹಾಗಾಗಿ ಅವರಂತೆ ಇದು ದೀರ್ಘಕಾಲ ಬಾಳುವುದರಲ್ಲಿ ಸಂಶಯವಿಲ್ಲ. ಬದುಕು ಬೆಳಗಲು, ಬದುಕಿನಿಂದಾಗಿ ಬೆಳೆಯಲು ನಮಗೆ ಸಂಸ್ಕಾರಗಳು ಅನಿವಾರ್ಯ. ಬದುಕು ಸಾರ್ಥಕವಾಗಲು ವ್ಯರ್ಥವಾದದ್ದು ಕಳೆಯಬೇಕು. ಯೋಗ್ಯವಾದದ್ದು ಬೆಳೆಯಬೇಕು. ಅದಕ್ಕೆ ನಮ್ಮ ಪ್ರಾಚೀನ ಋಷಿಗಳು ತಿಳಿಸಿದ ಸಂಸ್ಕಾರಗಳೆಂಬ ಕೃಷಿಕರ್ಮ ಅತ್ಯಗತ್ಯ. ಇದರಿಂದಾಗಿ ಬದುಕಿನ ಶುದ್ಧಿ ಅಂತಿಮವಾಗಿ ಸಿದ್ಧಿ. ಇದೇ ಪೂರ್ಣತೆ. ಹದಿನಾರು ಪೂರ್ಣತೆಯ ಸಂಕೇತ ತಾನೇ (ಶ್ಲೋಕ) "**ಸಂಸ್ಕಾರಾ ನಿಯತಾ ಏತೇ ಬ್ರಾಮ್ಹಣಸ್ಯ ವಿಶೇಷತಃ ॥ ಸಂಸ್ಕಾರ ರಹಿತಾ ಯೇ ತು ತೇಷಾಂ ಜನ್ಮ ನಿರರ್ಥಕಮ್॥**'' ಎಂಬಿತ್ಯಾದಿ ವಚನಗಳೂ ಈ ಹಿನ್ನೆಲೆಯಿಂದಲೇ ಹೊರಟಿವೆ. ಸಂಸ್ಕಾರಗಳ ಕ್ರಿಯಾಕಲಾಪಗಳನ್ನು ತಿಳಿಸುವ ಪ್ರಯೋಗ ಗ್ರಂಥಗಳು ನಮ್ಮ ಎಣುಕಿಗೆ ಸಿಗದಷ್ಟು ಇವೆ. ಅವುಗಳ ಮಹತ್ವವನ್ನು ಪರಿಣಾಮಗಳ ಪರಿಚಯವನ್ನೂ ವಿವರಿಸುವ ಈ ರೀತಿಯ ಪುಸ್ತಕಗಳು ಬೆರಳೆಣಿಕೆಯಷ್ಟೇ. ಹಾಗಾಗಿ ಕೆರೇಕೈನ ಈ ಲೇಖನೀಯ ಕಾರ್ಯ ನಿಜಕ್ಕೂ ಬೆರಳೆಣಿಕೆಯಲ್ಲಿ ಬರುವಂತಹದ್ದೇ ಸರಿ. ವೇದ ಮಂತ್ರಗಳ ಹಾಗೂ ಅನೇಕ ಶಾಸ್ತ್ರವಚನಗಳ ಹಿನ್ನೆಲೆಯೊಂದಿಗೆ ರಚಿತವಾದ ಈ ಕೃತಿ ಶ್ರೀಯುತರು ಋಷಿ ಕೃತಿಗಳೊಂದಿಗೆ ನಿರಂತರ ನಡೆಸುತ್ತಿರುವ ಅಧ್ಯಯನ ಅನುಸಂಧಾನ ಅನುಷ್ಠಾನಗಳೆಂಬ ಕೃಷಿ ಕರ್ಮಕ್ಕೆ ಜ್ವಲಂತ ನಿದರ್ಶನ.

ಈ ಕೃತಿಯ ಓದಿನಿಂದ ಅಜ್ಞಾನದಿಂದಾಗಿಯೋ ಅನ್ಯಥಾ ಜ್ಞಾನದಿಂದಾಗಿಯೋ ಅಥವಾ ಇನ್ನಿತರ ಆಡಂಬರದಿಂದಾಗಿಯೋ ಸಂಸ್ಕಾರ ಕರ್ಮಗಳ ಆಚರಣೆಯಲ್ಲಿ ಉಂಟಾಗಿರುವ ಬದಲಾವಣೆಯು ಸುಧಾರಣೆಯನ್ನು ಕಂಡು ಮತ್ತೆ ಮೂಲ ರೂಪಕ್ಕೆ ಬರುವಂತಹದಾದರೆ ಶ್ರೀಯುತರ ಈ ಪರಿಶ್ರಮ ಸಾರ್ಥಕ. ಆಚಾರಕ್ಕೆ ಬಾರದ ವಿಚಾರದಂತೆ ವಿಚಾರವಿಲ್ಲದೇ ನಡೆಸುವ ಆಚಾರವೂ ವ್ಯರ್ಥ ತಾನೇ. ಸಂಸ್ಕಾರಗಳ ಕುರಿತು ವಿಚಾರವನ್ನು ಹೆಚ್ಚಿಸುವಲ್ಲಿ ಈ ಕೃತಿ ಉಪಕರಿಸುವಂತಾಗಲೀ.

ಮಾತನ್ನು ಗೌರವಿಸುವ, ಮಂತ್ರವನ್ನು ಚೆನ್ನಾಗಿ ಪ್ರೀತಿಸುವ, ಆಗಾಗ ಮೌನವ್ರತವನ್ನು ಆಶ್ರಯಿಸುವ ವಿಶಿಷ್ಟ ಜೀವನ ವಿಧಾನವನ್ನು ರೂಢಿಸಿಕೊಂಡಿರುವ ಶ್ರೀಯುತರಿಗೆ ವೇದಮಾತೆಯ ಅನುಗ್ರಹವು ಸದಾ ಇರಲೆಂದು ಪ್ರಾರ್ಥಿಸುವ,

ಸರ್ವಧಾರಿ ಸಂವತ್ಸರದ
ಚೈತ್ರ ಶುದ್ಧ ತ್ರಯೋದಶಿ ಶುಕ್ರವಾರ
ತಾ.: ೧೮-೦೪-೨೦೦೮

- ವೇದಮೂರ್ತಿ ವಿದ್ವಾನ್ ಗಣಪತಿ ಭಟ್ಟ, ಕಿಬ್ಬಳ್ಳಿ

ವಿವೇಚನೆ

ನಾವು ನಮ್ಮ ಸುಖಮಯ ಜೀವನ ಮತ್ತು ಆತ್ಮೋನ್ನತಿಯನ್ನು ಸಂಪಾದಿಸಿಕೊಳ್ಳ ಬೇಕಾದರೆ ನಮ್ಮಲ್ಲಿರುವ ಅಜ್ಞಾನ, ದುರ್ವಿಚಾರ, ದುರ್ವ್ಯವಹಾರಗಳಿಂದ ದೂರಾಗಲೇಬೇಕು. ಅನ್ಯಥಾ ಮಾರ್ಗವೇ ಇಲ್ಲ. ನಮ್ಮ ಬದುಕಿನಲ್ಲಿ ಅನೇಕ ಎಡರು ತೊಡರುಗಳು ಪ್ರಾಪ್ತವಾಗಿ ದುಃಖಮಯ ಜೀವನವನ್ನು ಅನುಭವಿಸುತ್ತಿರಬೇಕಾಗುತ್ತದೆ. ಇದಕ್ಕೆ ಕಾರಣ ನಮ್ಮಲ್ಲಿ ಉತ್ಪನ್ನವಾಗುತ್ತಿರುವ ಕುಬುದ್ಧಿ (ಮಾಯೆ). ಈ ಜೀವಾತ್ಮನು ಮಾಯಾ ಬಂಧನಕ್ಕೆ ಸಿಕ್ಕು ಜನನ ಮರಣ ಚಕ್ರಕ್ಕೆ ಸಿಲುಕಬೇಕಾಗುತ್ತದೆ. ಇದರಿಂದ ಪಾರಾಗಲು ಅರ್ಥ ಜ್ಞಾನ ಪೂರ್ವಕ ವೇದಾಧ್ಯಯನ ವೇದೋಕ್ತ ಕರ್ಮಾನುಷ್ಠಾನ ಮೂಲಕ ಸಾಧ್ಯ. ಇದು ಋಷಿ ಪರಂಪರಾಗತವಾಗಿ ನಡೆದುಬಂದ ಸತ್ಯವಿಚಾರ. ಮಾನವ ಸಮಾಜವು ಆತ್ಮೋನ್ನತಿಯನ್ನು ಸಾಧಿಸಿಕೊಳ್ಳಲು, ಅಮೃತತ್ವವನ್ನು ಪಡೆಯಲು ಅನುಕೂಲವಾಗುತ್ತದೆ. ನಮ್ಮ ಪೂರ್ವಜರು ಈ ಮೊದಲು ಹೇಳಿದ ಆಚರಣೆಗಳ ಮೂಲಕ ಈ ಜಗತ್ತಿನಲ್ಲಿ ಶಾಶ್ವತ ಕೀರ್ತಿಯನ್ನು ಸಂಪಾದಿಸಿ ಆತ್ಮಜ್ಞಾನ ಮೂಲಕ ಅಮರರೆಂದೆನಿಸಿ ಕೊಂಡಿರುತ್ತಾರೆ.

ಷೋಡಶ ಸಂಸ್ಕಾರ ಎನ್ನುವ ಈ ಪುಸ್ತಕಕ್ಕೆ ಮುನ್ನುಡಿ ಬರೆದವರು ವೇ. ವಿದ್ವಾನ್ ...ಪತೀ ಭಟ್ಟ, ಕಿಬ್ಬಳ್ಳಿ ಇವರು. ಸಕಾಲದಲ್ಲಿ ಬರೆದುಕೊಟ್ಟ ಇವರಿಗೆ ನನ್ನ ...ತೆಯನ್ನು ಸಮರ್ಪಿಸುತ್ತೇನೆ. ಓದಲಿಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಈ ...ನ್ನು ಸಮಯಕ್ಕೆ ಅಂದವಾಗಿ ಮುದ್ರಿಸಿಕೊಟ್ಟ ಶಿರಸಿಯ ಚೇತನಾ ಸಹಕಾರಿ ...ದವರಿಗೂ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

- ವೇ. ಮೂ. ವಿಶ್ವೇಶ್ವರ ಪರಮೇಶ್ವರ ಭಟ್ಟ, ಕೆರೇಕೈ

ಭಾಗ – ೧

ಸ್ತುತಿ

''ಅಂತರ್ಯಾಮಿನ್ ಮಮೈವಾತ್ಮನ್ ಸೂರ್ಯಕೋಟಿ ಸಮಪ್ರಭ ॥
ನಿರ್ವಿಘ್ನಂ ಕುರುಮೇ ದೇವ ಸರ್ವಕಾರ್ಯೇಷು ಸರ್ವದಾ ॥''

ನನ್ನ ಆತ್ಮ ಸ್ವರೂಪನಾದ ಅಂತರ್ಯಾಮಿಯೇ ನೀನು ಕೋಟಿ ಸೂರ್ಯರ ಸಮಾನ ಪ್ರಕಾಶವುಳ್ಳವನಿರುತ್ತಿ. ಆದ ಕಾರಣ ನಮ್ಮ ಎಲ್ಲಾ ಸತ್ಕಾರ್ಯಗಳಿಗೂ ಯಾವ ವಿಧದ ವಿಘ್ನಗಳೂ ಬಾರದಂತೆ ಸದಾ ಸಂರಕ್ಷಿಸು.

''ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥''

ಜಗತ್ತಿನ ಮನುಷ್ಯಾದಿ ಎಲ್ಲಾ ಜೀವ ಕೋಟಿಗಳನ್ನೂ ನಿರಂತರ ಸಂರಕ್ಷಿಸುತ್ತಿರುವ ವಿಶ್ವದ ತಾಯಿ ತಂದೆಯರಾದ ಪಾರ್ವತೀ ಪರಮೇಶ್ವರರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.

ಗುರುವಂದನೆ

ಸಾಕ್ಷಾತ್ ಈಶ್ವರಾವತಾರಿಗಳೆಂದು ಪ್ರಸಿದ್ಧಿಪಡೆದ ಶಂಕರ ಭಗವತ್ಪಾದರಿಗೂ ಮತ್ತು ವೈದಿಕ ಧರ್ಮ ಕರ್ಮಗಳ ಸಂರಕ್ಷಣೆಗಾಗಿ ಅವರಿಂದಲೇ ಸ್ಥಾಪಿಸಲ್ಪಟ್ಟ ಎಲ್ಲಾಮಠಾಧಿಪತಿಗಳಿಗೂ ನನ್ನ ಅನಂತ ವಂದನೆಗಳು.

ಪ್ರಸ್ತಾವನೆ

ವಿಶ್ವೋತ್ಪಾದಕನೂ ವಿಶ್ವ ಸಂರಕ್ಷಿಸುವವನೂ ಅಖಂಡ ತೇಜೋಮಯನೂ ಆದ ಜಗದೀಶ್ವರನು ಈ ಕರ್ಮ ಭೂಮಿಯಲ್ಲಿ ಜನಿಸಿರುವ ಮತ್ತು ಜನಿಸುತ್ತಿರುವ ಮನುಷ್ಯಾದಿ ಎಲ್ಲಾ ಜೀವಿಗಳ ಸುಖ ಸಮೃದ್ಧಿಗಾಗಿ ಅಖಂಡ ಜ್ಞಾನನಿಧಿಯಾದ ವೇದಗಳನ್ನು ನಿರ್ಮಿಸಿ ವೇದೋಕ್ತ ಅನುಷ್ಠಾನ ಮೂಲಕವಾಗಿಯೇ ಅಭ್ಯುದಯ ನಿಶ್ರೇಯಸ ಸಿದ್ಧಿಯನ್ನು ಸಂಪಾದಿಸಿಕೊಂಡು ಕೃತಾರ್ಥರಾಗಬೇಕೆಂದು ಆಜ್ಞಾಪಿಸಿರುತ್ತಾನೆ. ಯಾಕೆಂದರೆ ಮಾನವನ ಆತ್ಮವು ಸತ್ಯ ಹಾಗೂ ಅಸತ್ಯಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳದ್ದಿರುತ್ತದೆ. ಹಾಗಿದ್ದರೂ ತನ್ನ ಸ್ವಾರ್ಥಸಿದ್ಧಿ, ಹಟ, ದುರಾಗ್ರಹ, ಅವಿದ್ಯಾ ಮೊದಲಾದ ದೋಷಗಳಿಂದಲೂ ಮತ್ತು ಕಾಮಕ್ರೋಧಾದಿ ಷಡ್ವೈರಿಗಳ ಸೆಳೆತಕ್ಕೆ ಸಿಕ್ಕು ವೇದಾಧ್ಯಯನ ವೇದೋಕ್ತ ಆಚರಣೆಯಿಂದ ದೂರಾಗಿ ಅಸತ್ಯ ಅಜ್ಞಾನಜನ್ಯ ಮಾರ್ಗದಲ್ಲಿ ನಿರತರಾಗಿ ತಮ್ಮ ಮನುಷ್ಯ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಾರೆ. ಆದ ಕಾರಣ ತೈತ್ತಿರೀಯೋಪನಿಷತ್ತಿನಲ್ಲಿ .... **''ಯಾನ್ಯನವದ್ಯಾನಿಕರ್ಮಾಣಿ ॥ ತಾನಿ ಸೇವಿತವ್ಯಾನಿ ॥ ನೋ**

ಇತರಾಣಿ॥'' ಅಂದರೆ ಯಾವುದು ವೇದೋಕ್ತ ಧರ್ಮ ಕರ್ಮಗಳಿವೆಯೋ ನೀವು ಆ ಕರ್ಮಗಳನ್ನೇ ಆಚರಿಸಿರಿ. ಅಧರ್ಮಾದಿ ದುಷ್ಕರ್ಮಗಳನ್ನು ಆಚರಿಸಬೇಡಿರಿ ಎಂದು ನಮ್ಮೆಲ್ಲರಿಗೂ ವೇದ ಮಾತೆಯು ಬೋಧಿಸಿರುತ್ತದೆ. (ಶ್ಲೋಕ) **''ಮಹತೋಽಪಿಹಿರಾಷ್ಟ್ರಸ್ಯ ಪರರಾಷ್ಟ್ರಾವಲಂಬನೇ ॥ ರಕ್ಷಣೇ ಭರಣೇ ಜ್ಞಾನೇ ಸಮುತ್ಥಾನಂ ನ ಶಕ್ಯತೇ ॥ ''** ಎಂತಹ ಬಲಿಷ್ಠ ರಾಷ್ಟ್ರವಾದರೂ ರಕ್ಷಣೆ, ಪೋಷಣೆ ಮತ್ತು ಜ್ಞಾನಾರ್ಜನೆ ಈ ವಿಭಾಗದಲ್ಲಿ ಪರರಾಷ್ಟ್ರವನ್ನು ಅವಲಂಬನೆ ಮಾಡಿದರೆ ಅವಲಂಬಿಸಿದ ರಾಷ್ಟ್ರವು ಅಧಃಪತನ ಹೊಂದುತ್ತದೆ. (ಶ್ಲೋಕ) **''ಕರ್ಮಾಧುನಿಕ ವಿಜ್ಞಾನಾತ್ ಜ್ಞಾನಂ ಬ್ರಮ್ಹ ವಿಧೂನನಾತ್ ॥ ಯಾಥಾರ್ಥ್ಯಂ ಸ್ವಾರ್ಥಸಂಧಾನಾತ್ ವ್ಯಸ್ತಂ ಕಿಂ ಧರ್ಮ ಚರ್ಚಯಾ॥''** (ಕರ್ಮಾಧುನಿಕ ವಿಜ್ಞಾನಾತ್) ಭೌತಿಕ ಜ್ಞಾನವೇ ನಮ್ಮ ಸರ್ವಸ್ವವೆಂದು ತಿಳಿದು, ಅಂದರೆ ಆಧುನಿಕ ಸಲಕರಣೆ - ಉಪಕರಣೆಯಿಂದ ವೈದಿಕ ಕರ್ಮಗಳಿಂದ ದೂರಾದ್ದರಿಂದ ವೈದಿಕ ತತ್ವಕ್ಕೆ ಮೊದಲನೇ ಆಘಾತವಾಯಿತು. **(ಜ್ಞಾನಂ ಬ್ರಮ್ಹ ವಿಧೂನನಾತ್)** ಸದ್ಗುರುವಿನ ಆಶ್ರಯದಲ್ಲಿ ಇದ್ದು ಅರ್ಥ ಜ್ಞಾನಪೂರ್ವಕ ವೇದಾಧ್ಯಯನ ವೇದೋಕ್ತ ಕರ್ಮಗಳನ್ನು ಆಚರಿಸದೇ ಇರುವುದರಿಂದ ವೈದಿಕ ತತ್ವಾನುಷ್ಠಾನಕ್ಕೆ ಎರಡನೇ ಆಘಾತವಾಯಿತು. **(ಯಾಥಾರ್ಥ್ಯಂ ಸ್ವಾರ್ಥ ಸಂಧಾನಾತ್)** ಸತ್ಯ ಜ್ಞಾನವನ್ನು ತಿಳಿಸಿ ಹೇಳುವ ಸಾಮರ್ಥ್ಯವಿದ್ದರೂ (ಅನುಭವವಿದ್ದರೂ) ತಮ್ಮ ತಮ್ಮ ಸ್ವಾರ್ಥಕ್ಕಾಗಿ ಸತ್ಯ ಜ್ಞಾನವನ್ನು ಮುಚ್ಚುಮರೆ ಮಾಡಿ ಮನ ಬಂದಂತೆ ಮಾತನಾಡುವ ಮೂಲಕ ಸತ್ಯ ತತ್ವಾನುಷ್ಠಾನಕ್ಕೆ ಮೂರನೇ ಆಘಾತವಾಯಿತು. ಇಂತಹ ಅಸ್ತವ್ಯಸ್ತ ಪರಿಸ್ಥಿತಿಯಲ್ಲಿ ವೈದಿಕ ಧರ್ಮದ ಬಗ್ಗೆ ಯಾಕೆ ಚರ್ಚೆ ಮಾಡುತ್ತೀರಿ? ಆದರೆ ಬಿಡುವಂತಿಲ್ಲ. ಯಾಕೆಂದರೆ ಉಪನಿಷತ್ತಿನಲ್ಲಿ **''ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್ ॥ ''** ಅಂದರೆ ಅರ್ಥ ಜ್ಞಾನಪೂರ್ವಕ ವೇದಾಧ್ಯಯ ವೇದೋಕ್ತ ಕರ್ಮಾನುಷ್ಠಾನ ಮೂಲಕ ಆದ ಅನುಭವವನ್ನು ಸಮಾಜಕ್ಕೆ ತಿಳಿಸಿ ಹೇಳಿ ಕೃತಾರ್ಥನಾಗಬೇಕು. ಇದು ವೇದ ಮಾತೆಯ ಸೇವೆಯೂ ಸಮಾಜ ಸೇವೆಯೂ ಆಗಿರುವುದರಿಂದ ಜ್ಞಾನಿಗಳಿಂದಲೇ ಆಗಬೇಕು. (ವೇದದಲ್ಲಿ) **''ಬ್ರಾಮ್ಹಣೋಸ್ಯ ಮುಖಮಾಸೀತ್।''** ಲೋಕ ಸೇವೆ ಸಮಾಜದ ಉನ್ನತಿ ಮತ್ತು ಶ್ರೇಷ್ಠ ಜ್ಞಾನೋಪದೇಶ ಇವೆಲ್ಲಾ ಜ್ಞಾನಿಗಳ ಕರ್ತವ್ಯ .

ಜಗತ್ತು

ಸಕಲ ಜಗತ್ತೂ ಒಂದೇ ಮೂಲ ವಸ್ತುವಿನಿಂದ ಉತ್ಪನ್ನವಾಗಿರುತ್ತದೆ. ಆ ಮೂಲ ವಸ್ತುವು ಶಾಶ್ವತವೂ, ನಾಶವಿಲ್ಲದ್ದೂ ಇರುತ್ತದೆ. ಈ ವಿಶ್ವ ತತ್ವವನ್ನು ನಮ್ಮ ಪೂರ್ವಜರಾದ ಮಹರ್ಷಿಗಳೂ ಮತ್ತು ಜ್ಞಾನಿಗಳೂ ದಿವ್ಯ ಜ್ಯೋತಿಯೆಂದು ಆರಾಧಿಸಿದರು. ಈ ದಿವ್ಯ ಜ್ಯೋತಿಯ ಸಾಕ್ಷಾತ್ಕಾರವು ಬಾಹ್ಯೇಂದ್ರಿಯಗಳಿಂದಾಗಲೀ ಇಂದ್ರಿಯ ಪ್ರತ್ಯಕ್ಷಕ್ಕೆ ಮಾತ್ರ ಸಹಾಯ ಮಾಡುವ ವಿಜ್ಞಾನದ ಉಪಕರಣಗಳಿಂದಾಗಲೀ ಸಾಧ್ಯವಿಲ್ಲ. ಈ ದಿವ್ಯ ಜ್ಯೋತಿಯ ರೂಪವನ್ನು ಅರಿಯುವ ಮಹದಾಕಾಂಕ್ಷೆಯಿಂದ ಕೂಡಿದ ಅತ್ಯಂತ ಶ್ರೇಷ್ಠವಾದ ಪ್ರತಿಭಾ ಶಕ್ತಿಯನ್ನು ಪಡೆದ ವೈಜ್ಞಾನಿಕರೂ ಸಹ ಈ ವಿಷಯದಲ್ಲಿ ತಮ್ಮ ನಿಃಶಕ್ತಿಯನ್ನು ವ್ಯಕ್ತ ಪಡಿಸಿದ್ದಾರೆ. ಬ್ರಮ್ಹ ತತ್ವ ಪ್ರತಿಪಾದಕವಾದ ಉಪನಿಷತ್ತುಗಳಿಗೆಲ್ಲ ವೇದವೇ ಮೂಲವಾಮದರಿಂದಲೇ ತತ್ವ ಶಾಸ್ತ್ರಕ್ಕೆ ವೇದಾಂತವೆಂಬ ಹೆಸರು

ಪ್ರಸಿದ್ಧವಾಯಿತು. (ಉಪನಿಷತ್) **''ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ ''** ಅಂದರೆ ಉಪನಿಷತ್ತುಗಳಿಗೆಲ್ಲ ವೇದವೇ ಪ್ರತಿಷ್ಠೆಯೆಂದೂ ವೇದಗಳ ಆಧಾರದ ಮೇಲೆಯೇ ಉಪನಿಷತ್ತತ್ವವು ಸ್ಥಾಪಿತವೆಂದು ಉಪನಿಷತ್ತೇ ತಿಳಿಸುತ್ತದೆ. ವೇದವೇ ಅಮೃತ ಉಪನಿಷತ್ತುಗಳು ಈ ದಿವ್ಯಾಮೃತದ ಸಾರ.

ಸೃಷ್ಟಿ

ಸೂಕ್ಷ್ಮ ರೂಪವಾದ ತತ್ವವು ಸ್ಥೂಲರೂಪದಲ್ಲಿ ವಿಸ್ತೃತವಾಗುವುದೇ ಸೃಷ್ಟಿ. ಆದರೆ ಹೊಸ ವಸ್ತುವಿನ ಸೃಷ್ಟಿಯಲ್ಲ(ವೇದ) **''ಪುರುಷ ಏವೇದ ಸರ್ವಮ್''** ಈ ವಾಕ್ಯದಿಂದ ಈಶ್ವರ ಮತ್ತು ಜಗತ್ತಿನ ಸಂಬಂಧವು ವಿಶಾಲವಾಗಿರುತ್ತದೆ. ಜಗತ್ತಿನ ಎಲ್ಲಾ ವ್ಯಾಪಾರಗಳೂ ಈಶ್ವರನ ಲೀಲೆ. ಈಶ್ವರನು ಈ ಜಗತ್ತಿಗಿಂತಲೂ ಅಧಿಕನು. ಅವ್ಯಕ್ತವಾದ ತತ್ವವು ಜಗದ್ರೂಪದಲ್ಲಿ ವ್ಯಕ್ತವಾಗುವುದೇ ಸೃಷ್ಟಿ. ಅವ್ಯಕ್ತ ಮತ್ತು ವ್ಯಕ್ತರೂಪಗಳನ್ನೇ ಸತ್ ಹಾಗೂ ಅಸತ್ ಎಂಬೀ ಪದಗಳಿಂದಲೂ ನಿರ್ದೇಶಿಸಿದೆ. ಅಸತ್ ಎಂದರೆ ಅಭಾವವೆಂದಲ್ಲ. ನಾಮರೂಪ ರಹಿತವೂ ಹಾಗೂ ಅನಿರ್ವಾಚ್ಯವೂ ಆದ ಬ್ರಮ್ಹ ತತ್ವವೆಂದರ್ಥ. **''ಅಸತ್ ಅವ್ಯಾಕೃತಂ ಸತ್ ವ್ಯಾಕೃತಮ್''** ಅಂದರೆ ನಾಮರೂಪರಹಿತವಾದ ಬ್ರಮ್ಹ ತತ್ವವು ನಾಮರೂಪಗಳಿಂದ ಕೂಡಿದ ವ್ಯವಹಾರ ಸ್ಥಿತಿಯಲ್ಲಿ ಪ್ರಸರಿಸುವುದು. ಇದೇ ಸೃಷ್ಟಿ. ವ್ಯಕ್ತ ರೂಪದಲ್ಲಿರುವಾಗ ಯಾವುದಕ್ಕೆ ಪ್ರಕೃತಿ ಎನ್ನುತ್ತೇವೋ ಅದು ಸೃಷ್ಟಿಯ ಪೂರ್ವದಲ್ಲಿ ಅವ್ಯಾಕೃತವಾದ ಪರತತ್ವದಲ್ಲೇ ಅಡಗಿರುತ್ತದೆ. ಆದುದರಿಂದ ಸೃಷ್ಟಿ - ಸ್ಥಿತಿ - ಲಯಗಳಿಗೆಲ್ಲ ಇದೊಂದೇ ಕಾರಣವು . ಋಕ್ ಸಂಹಿತಾ ತತ್ವ ಪ್ರಕಾರ **''ತಸ್ಯ ವಾಮಸ್ಯ ಪಲಿತಸ್ಯಹೋತುಃ''** ಇದರ ವಿವರಣೆಯು ಗಾಯತ್ರೀ ತತ್ವ ವಿವೇಚನೆಯಲ್ಲಿ ಬರೆದಿರುತ್ತೇನೆ. ಜೇಡರ ಹುಳದಿಂದ ತಂತುಗಳು ಹೊರಗೆ ಬಂದು ಬಲೆಯು ನಿರ್ಮಿತವಾಗುವಂತೆ ಈ ಮೂಲಾತ್ಮನಿಂದಲೇ ಸಕಲ ಲೋಕಗಳೂ ದೇವತೆಗಳೂ ಹಾಗೂ ಮನುಷ್ಯಾದಿ ಸಕಲ ಜೀವ ಕೋಟಿಗಳೂ ಉತ್ಪನ್ನರಾಗುತ್ತಾರೆ. ಇವನೇ ಸತ್ಯಕ್ಕೂ ಮೂಲ ಸತ್ಯ. ಸಕಲ ಜಗತ್ ಸೃಷ್ಟಿಗೂ ಈಶ್ವರನ ಸಂಕಲ್ಪವೇ ಮೂಲ ಈಶ್ವರನು (ಇಂದ್ರನು) ತನ್ನ ಅಪಾರಶಕ್ತಿಯಿಂದ ಯಾವ ರೂಪವನ್ನು ಹೊಂದಬೇಕೆಂದು ಇಚ್ಛಿಸುತ್ತಾನೋ ಆಯಾಯಂ ರೂಪಗಳನ್ನು ಧರಿಸುತ್ತಾನೆ. (ಋಗ್ವೇದ) **''ರೂಪಂ ರೂಪಂ ಪ್ರತಿರೂಪೋ ಬಭೂವ ತದಸ್ಯ ರೂಪಂ ಪ್ರತಿ ಚಕ್ಷಣಾಯ ॥ ಇಂದ್ರೋ ಮಾಯಾಭಿಃ ಪುರು ರೂಪ ಈಯತೇ ಯುಕ್ತಾಹ್ಯಸ್ಯ ಹರಯಃ ಶತಾದಶ ॥''** (ಭಾವ) ಇಂದ್ರನೇ ರೂಪ ರೂಪಕ್ಕೂ ಪ್ರತಿರೂಪನು. ಇದನ್ನು ತಿಳಿಯಪಡಿಸುವುದಕ್ಕಾಗಿ ತನ್ನ ಮಾಯೆಯಿಂದ ಪ್ರತಿರೂಪನಾಗಿ ಕಾಣುತ್ತಾನೆ. ಅವನನ್ನು ಹತ್ತು ಸಾವಿರ ಎಂದರೆ ಅಸಂಖ್ಯಾತವಾದ ಅಶ್ವಗಳು ಕೂಡಿಕೊಂಡಿರುತ್ತವೆ. ಇಂದ್ರನೇ ಅಶ್ವಗಳು. ಇವನೇ ಹತ್ತು ಸಾವಿರ ಅಂದರೆ ಅನಂತವಾದ ಅಶ್ವಗಳು. ಇಲ್ಲಿ ಅಶ್ವ ಶಬ್ದಕ್ಕೆ ಸೂರ್ಯ ಕಿರಣವೆಂದರ್ಥ. ವಿಶ್ವರೂಪನೂ ಇವನೇ, ವೈಶ್ವಾನರನೂ ಇವನೇ ಜಾತವೇದನೂ ಇವನೇ . ಸಕಲ ದೇವತೆಗಳೂ ಇವನ ವಿಭೂತಿ ವಿಶೇಷಣಗಳು. ರಥದ ಸಕಲ ಅವಯವಗಳೂ ಅದರ ಅಣಿಯನ್ನು (ಅಚ್ಚು) ಆಶ್ರಯಿಸಿ ನಿಲ್ಲುವಂತೆ ಸಕಲ ದೇವತೆಗಳೂ ಈ ಮೂಲಾತ್ಮನನ್ನು

ಆಶ್ರಯಿಸಿಕೊಂಡಿರುತ್ತಾರೆ. (ಸೃಷ್ಟಿಯ ಉತ್ಪತ್ತಿ ವಿಚಾರಗಳು) (ಗೋಪಥ ಬ್ರಾಮ್ಹಣ) ಅಥರ್ವವೇದ **''ಸಭೂಯೋಽ ಶ್ರಾಮ್ಯತ್ ॥ ಭೂಯೋತಪ್ಯತ್ ॥ ಭೂಯ ಆತ್ಮಾನಂ ಸಮತಪತ್ ॥ ಸ ಆತ್ಮಾನಂ ಏವ ತ್ರೀಲ್ಲೋಕಾ ನಿರಮಿಮತ್ ॥ ಪೃಥಿವೀಂ = ಅಂತರಿಕ್ಷಂ = ದಿ ವ ಮಿತಿ॥ ಸಖಲು ಪಾದಾಭ್ಯಾಮೇವ ಪೃಥಿವೀಂ ನಿರಮಿಮತ್ ॥ ಉದರಾದಂತ ರಿಕ್ಷಂ ಮೂರ್ಧ್ನೋದಿವಂ ॥ ಸತಾಂ ಸ್ತ್ರೀಲ್ಲೋಕಾನ ಭ್ಯತ್ರಾಮ್ಯದಭ್ಯತಪತ್ ಸಮತಪತ್ತೇಭ್ಯಃ ಶ್ರಾಂತೇಭ್ಯಃ ತಪತ್ತೇಭ್ಯಃ ಸಂತಪಸ್ತೇಭ್ಯಃ ತ್ರೀನ್ ದೇವಾ ನಿರಮಿಮತ್ ಅಗ್ನಿಂ = ವಾಯು = ಆದಿತ್ಯಮಿತಿ ॥ ಸಖಲು ಪೃಥಿವ್ಯಾ ಏವಾಗ್ನಿಂ ನಿರಮಿಮತ್ ॥ ಅಂತರಿಕ್ಷಾದ್ವಾಯುಃ ॥ ದಿವ ಆದಿತ್ಯಂ ॥ ಸತಾಂ ಸ್ತ್ರೀನ್ ದೇವಾನ್ ಅಭ್ಯತ್ರಾಮ್ಯ ದಭ್ಯತಪತ್ ॥ ಸಮತಪಸ್ತೇಭ್ಯಃ ಶ್ರಾಂತೇಭ್ಯಃ ತಪ್ತೇಭ್ಯಃ ಸಂತಪ್ತಸ್ತೇಭ್ಯಃ ತ್ರೀನ್ ವೇದಾನ್ ನಿರಮಿಮತ್॥ ಋಗ್ವೇದಂ = ಯಜುರ್ವೇದ ಸಾಮವೇದಮಿತಿ ॥ ಅಗ್ನೇಃ ಋಗ್ವೇದಂ = ವಾಯೋರ್ಯಜುರ್ವೇದಂ ಆದಿತ್ಯಾತ್ ಸಾಮವೇದಮ್''** ಬ್ರಮ್ಹದೇವನು ಸೃಷ್ಟಿಯ ನಿರ್ಮಾಣಕ್ಕಾಗಿ ತಪಸ್ಸು ಮಾಡಿದನು. ಇದರ ಫಲವಾಗಿ ವಿಶ್ವವ್ಯಾಪಿಯಾದ ವಿಷ್ಣುವಿನ ಪಾದದಿಂದ ಭೂಲೋಕವನ್ನೂ, ನಾಭಿಯಿಂದ ಮಧ್ಯಲೋಕವನ್ನೂ, ತಲೆಯಿಂದ ಗ್ಯುಲೋಕವನ್ನೂ ನಿರ್ಮಿಸಿದನು. ಪುರುಷಸೂಕ್ತದಲ್ಲಿ **''ನಾಭ್ಯಾಆಸೀತ್ ಅಂತರಿಕ್ಷಂ = ಶೀರ್ಷ್ಣೋಃ ದ್ಯೌಸಮವರ್ತತ ಪದ್ಭ್ಯಾಂಭೂಮಿಃ''** ನಿರ್ಮಿಸಿದನು. ಪೃಥ್ವಿ = ಅಗ್ನಿ, ಅಂತರಿಕ್ಷ = ವಾಯು, ದ್ಯುಲೋಕ = ಸೂರ್ಯ. ಪುನಹ ಬ್ರಮ್ಹನು ಅಗ್ನಿ = ವಾಯು = ಆದಿತ್ಯರಾದ ಮೂರು ದೇವತೆಗಳಲ್ಲಿ ತಪಸ್ಸು ಮಾಡಿದನು. ಇದರ ಫಲವಾಗಿ ಋಗ್ವೇದ= ಸಾಮವೇದ = ಯಜುರ್ವೇದಗಳ ಉತ್ಪತ್ತಿಯಾಯಿತು. (ಪುರುಷಸೂಕ್ತ) **''ತಸ್ಮಾದ್ಯಜ್ಞಾತ್ ಸರ್ವಹುತಃ ॥ ಋಚಃ ಸಾಮಾನಿಜಜ್ಞಿರೇ ॥ ಛಂದಾಸಿಜಜ್ಞಿರೇ ತಸ್ಮಾತ್॥ ಯಜುಸ್ತಸ್ಮಾದಜಾಯತ ॥''** ಯಜ್ಞಪುರುಷ ಪರಮಾತ್ಮನಿಂದ ಮೊದಲು ಋಗ್ವೇದದ ಉತ್ಪತ್ತಿಯಾಯಿತು. ಅನಂತರ ಸಾಮವೇದ ಉತ್ಪತ್ತಿಯಾಯಿತು. ಅನಂತರ ಅಥರ್ವವೇದ ಉತ್ಪತ್ತಿಯಾಯಿತು. ಅನಂತರ ಯಜುರ್ವೇದ ಉತ್ಪತ್ತಿಯಾಯಿತು. **''ಕಿಂಸ್ವಿತ್ ಸೂರ್ಯ ಸಮಂ ಜ್ಯೋತಿಃ? ''** ಅಂದರೆ ಸೂರ್ಯನಿಗೆ ಸರಿಸಮಾನವಾದ ಎರಡನೇ ಜ್ಯೋತಿ ಯಾವುದು? (ಯಜುರ್ವೇದ) **''ಬ್ರಮ್ಹಸೂರ್ಯ ಸಮಂ ಜ್ಯೋತಿಃ ।''** ಅಂದರೆ ಜ್ಞಾನಮಯ ತಪಸ್ಸಿನಿಂದ ಈ ಜಗತ್ತು ಉತ್ಪನ್ನವಾಗಿರುವುದರಿಂದ ಬ್ರಮ್ಹ ಅಂದರೆ ವೇದಶಕ್ತಿಯೇ ಸೂರ್ಯನಿಗೆ ಸರಿಸಮಾನವಾದ ಎರಡನೇ ಜ್ಯೋತಿ ಇರುತ್ತದೆ. (ಯಜ್ಞ) **''ಯಜುಃ ಕರ್ಮನಾಮ ।''** ಯಜುರ್ವೇದದ ಮಹತ್ವವು ಅತ್ಯಧಿಕವಾಗಿರುತ್ತದೆ. ಯಾಕೆಂದರೆ ಯಜುರ್ವೇದವು ಯಜ್ಞವನ್ನು - ಕರ್ಮವನ್ನು ವಿಧಿಸುತ್ತದೆ. ಎರಡು ಅಣುಗಳ ಪರಸ್ಪರ ಸಂಯೋಗವೇ ಯಜ್ಞ. ಮನಸ್ಸು ಮತ್ತು ಬುದ್ಧಿಯೂ ಸಹ ಯಜ್ಞವಿರುತ್ತದೆ.

ಮನುಷ್ಯ ಸಮಾಜದ ಸರ್ವತೋಮುಖದ ಏಳಿಗೆಗಾಗಿಯೂ ಮತ್ತು ನಿಃಶ್ರೇಯಸ ಸಿದ್ಧಿಗಾಗಿಯೂ ಲೋಕಕಲ್ಯಾಣಕ್ಕಾಗಿಯೂ ಯಜ್ಞವನ್ನು ವಿಧಿಸಿರುತ್ತಾರೆ. ಇಂದ್ರಿಯ ಹಾಗೂ ವಿಷಯಗಳ ಸಂಯೋಗ ಘಟಿಸುವದೂ ಸಹ ಯಜ್ಞವಿರುತ್ತದೆ. **''ಕಸ್ಮೈತ್ವಂ ವಿಮುಂಚತಿ। ತಸ್ಮೈತ್ವಂ ವಿಮುಂಚತಿ ''** (ವೇದ) ಯಜುಃ ಯಾವಾತನು ನಿರಂತರ ಸತ್ಕರ್ಮಗಳನ್ನು ಆಚರಿಸುತ್ತಿರುತ್ತಾನೋ ಅವನು ಅಮೃತತ್ವವನ್ನು ಹೊಂದುತ್ತಾನೆ. ಯಾವಾತನು ಸತ್ಕರ್ಮಗಳನ್ನು ಆಚರಿಸುವುದಿಲ್ಲವೋ ಅವನನ್ನು ಪರಮಾತ್ಮನೂ ಸಹ ಕೈಬಿಡುತ್ತಾನೆ.

ವೇದ (ಸಂಸ್ಕೃತ)

''ಯಮ್ಮೃಷಯಸ್ತ್ರಯೀವಿದಾವಿದುಃ॥ಋಚಃಸಾಮಾನಿಯಜೂಷಿ॥ ಸಾಹಿಶ್ರೀರಮೃತಾಸತಾಮ್॥'' ದೇವತೆಗಳನ್ನು ಸ್ತುತಿಸಲಿಕ್ಕೆ ಅತ್ಯಂತ ಸಾಮೀಪ್ಯವಾದ ಭಾಷೆ ಸಂಸ್ಕೃತ. ಇದು ಅಮೃತ ಭಾಷೆ . ಈ ಭಾಷೆಗೆ ನಾಶವೇ ಇಲ್ಲ. ಈ ಮೇಲೆ ಹೇಳಿದ ಮಂತ್ರ ಪ್ರಕಾರ ಋಷಿಗಳಿಗೆ (ಜ್ಞಾನಿಗಳಿಗೆ) ಋಕ್ ಸಾಮ ಯಜುರ್ವೇದಗಳೇ ಸಂಪತ್ತು.

ಸಂಸ್ಕೃತ ಭಾಷಾ ಮಹತ್ವ

(ಶ್ಲೋಕ) **''ಬ್ರಾಮ್ಹೀ ಸುಜ್ಞಾನ ಸಂದಾತ್ರೀ ಸುಸಂಸ್ಕತ್ರೀ ಚ ಯಾಸುಧಾ ॥ ಸ್ವೀಯಾಂ ಸಂಸ್ಕೃತ ವಿದ್ಯಾಂತಾಮಭ್ಯಸೇತ್ ಪ್ರಥಮಂ ದ್ವಿಜಃ ॥''** (ಬ್ರಾಮ್ಹೀ) ಸರ್ವಜ್ಞಳಾದ ಸರಸ್ವತಿಯು (ಸುಜ್ಞಾನ ಸಂದಾತ್ರೀ) ಶ್ರೇಷ್ಠಜ್ಞಾನವನ್ನುಂಟು ಮಾಡುವವಳು. (ಸುಸಂಸ್ಕತ್ರೀ) ಉತ್ತಮ ಸಂಸ್ಕಾರಯುಕ್ತನನ್ನಾಗಿ ಮಾಡುವವಳು (ಯಾಸುಧಾ) ನಾಶವಿಲ್ಲದಂಥಾ ಅಮೃತ ರಸವನ್ನು ಸುರಿಸುವವನು (ಸ್ವಿಯಾಂ) ತನ್ನದೇ ಆದ **''ತಾಂ ಸಂಸ್ಕೃತ ವಿದ್ಯಾಮ್''** ಆ ಸಂಸ್ಕೃತ ವಿದ್ಯೆಯನ್ನು (ದ್ವಿಜಃ) ಶ್ರೇಷ್ಠ ಜನರು (ಪ್ರಥಮಂ) ಮೊಟ್ಟಮೊದಲು (ಅಭ್ಯಸೇತ್) ಅಭ್ಯಾಸ ಮಾಡತಕ್ಕದ್ದು. (ಭಾವ) ಭಾರತೀಯರ ಭಾಷೆಯೂ ಅಮೃತ ಭಾಷೆಯೂ ಶ್ರೇಷ್ಠ ಜ್ಞಾನವನ್ನುಂಟು ಮಾಡುವಂತಹದೂ ಮತ್ತು ಉತ್ತಮ ಸಂಸ್ಕಾರವನ್ನು ಉಂಟು ಮಾಡುವಂತ ಸಂಸ್ಕೃತ ಭಾಷೆಯನ್ನು ಶ್ರೇಷ್ಠರೂ ಆದ ಜನರು ಮೊಟ್ಟ ಮೊದಲು ಕಲಿಯಲೇಬೇಕು. (ಭಾವ) ಶ್ರೇಷ್ಠ ಜ್ಞಾನವನ್ನುಂಟು ಮಾಡುವಂಥ ಸರ್ವಜ್ಞಳಾದ ಸರಸ್ವತೀ ದೇವಿಯು ಉತ್ತಮ ಸಂಸ್ಕಾರವನ್ನುಂಟು ಮಾಡುವವಳು ಮತ್ತು ಅಮೃತ ರಸದಿಂದ ನಮ್ಮನ್ನು ತೃಪ್ತಿ ಪಡಿಸುವವಳು ಇರುತ್ತಾಳೆ. ಆದ ಕಾರಣ ಶ್ರೇಷ್ಠ ಜ್ಞಾನಾಭಿವೃದ್ಧಿಗಾಗಿ ದ್ವಿಜರು (ಬ್ರಾಮ್ಹಣರು) ಮೊಟ್ಟಮೊದಲು ಸಂಸ್ಕೃತ ವಿದ್ಯೆಯನ್ನು ಕಲಿಯಲೇಬೇಕು. (ಶ್ಲೋಕ) **''ಯಾನಾಶ್ರಿತ್ಯಸ್ಥಿತಾ ವಿದ್ಯಾ ಸಂಸ್ಕೃತಾಖ್ಯಾ ಗುಣೋಜ್ವಲಾ॥ ಬ್ರಾಮ್ಹಣೈರ್ಯದಿ ಸಾತ್ಯಕ್ತಾ ತಸ್ಯಾಃ ಕಾನುಗತಿಸ್ತದಾ ॥ ಗುಣೋಜ್ವಲಾ॥''** ಅನೇಕ ಸದ್ಗುಣಗಳಿಂದ ಉಜ್ವಲವಾದ (ಸಂಸ್ಕೃತಾಖ್ಯಾವಿದ್ಯಾ) ಸಂಸ್ಕೃತವೆಂಬ ಹೆಸರಿನ ವಿದ್ಯೆಯು (ಯಾನಾಶ್ರಿತ್ಯಸ್ಥಿತಾ) ಯಾರನ್ನಾಶ್ರಯಿಸಿಕೊಂಡಿರುವಳೋ (ತೈಃ ಬ್ರಾಮ್ಹಣೈಃ) ಆ ಬ್ರಾಮ್ಹಣರಿಂದ (ಯದಿ) ಒಂದು ವೇಳೆ (ಸಾತ್ಯಕ್ತಾ) ಅವಳು ಬಿಡುವವಳಾದರೆ ''ತದಾತಸ್ಯಾಃ ಕಾನುಗತಿಃ''ಆಗ ಅವಳ ಸ್ಥಿತಿ ಗತಿಗಳೇನು? (ಭಾವ) ಅನೇಕ ಸದ್ಗುಣಗಳಿಂದ ಶೋಭಾಯಮಾನವಾದ ಸಂಸ್ಕೃತವೆಂಬ ಹೆಸರಿನ ವಿದ್ಯೆಯು ಯಾರನ್ನಾಶ್ರಯಿಸಿಕೊಂಡಿರುವಳೋ ಆ ಬ್ರಾಮ್ಹಣರೇ ಒಂದು ವೇಳೆ ಅವಳನ್ನು (ಆಜ್ಞಾನ ವಿದ್ಯೆಯನ್ನು) ಕಲಿಯದೇ ಹೋದರೆ ಆಗ ಆ ದ್ವಿಜರ ಗತಿಯೇನು? (ಶ್ಲೋಕ) **''ಅಸ್ಯಾಃ ಸಂಸ್ಕೃತ ಭಾಷಾಯಾಃ ವಿಶ್ವಕಲ್ಯಾಣಹೇತವೇ ॥ ಪ್ರಚಾರೋ ವರ್ಧತಾಂ ನಿತ್ಯಂ ಗೇಹೇಗೇಹೇ ಜನೇಜನೇ ॥''** (ಭಾವ) ಜಗತ್ತಿನಲ್ಲಿರುವ ಮನುಷ್ಯ ಜೀವಿಗಳ ಅಭ್ಯುದಯ ನಿಶ್ರೇಯಸ ಸಿದ್ಧಿಗಾಗಿ ಈ ಸಂಸ್ಕೃತ ಭಾಷೆಯು ನಿರಂತರ ಪ್ರತಿಮನೆಗಳಲ್ಲಿಯೂ ಮತ್ತು ಪ್ರತಿ ಜನರಲ್ಲಿಯೂ ಪ್ರಚಾರವಾಗುತ್ತಿರಬೇಕು.

ವೈದಿಕ ರಾಷ್ಟ್ರಗೀತೆ

''ಆ ಬ್ರಮ್ಹನ್ ಬ್ರಾಮ್ಹಣೋ ಬ್ರಮ್ಹವರ್ಚಸೀ ಜಾಯತಾಂ ಆಸ್ಮಿನ್ ರಾಷ್ಟ್ರೇ ರಾಜನ್ಯ ಇಷವ್ಯಃ ಶೂರೋ ಮಹಾರಥೋ ಜಾಯತಾಂ ದೋಗ್ಧ್ರೀಧೇನುಃ ವೋಢಾ ನಡ್ವಾನ್ ಆಶುಃ ಸಪ್ತಿಃ ಪುರಂಧಿರ್ಯೋಷಾ ಜಿಷ್ಣೂರಥೇಷ್ಠಾಃ ಸಭೇಯೋ ಯುವಾಸ್ಯ ಯಜಮಾನಸ್ಯ ವೀರೋಜಾಯತಾಂ ನಿಕಾಮೇನಿನಃ ಕಾಮೇನಃ ಪರ್ಜ್ಯನ್ಯೋ ವರ್ಷತು ಫಲಿನ್ಯೋನ ಓಷಧಯಃ ಪಚ್ಯಂತಾಂ ಯೋಗಕ್ಷೇಮೋನಃ ಕಲ್ಪತಾಮ್ ॥'' (ಹೇ ಬ್ರಮ್ಹನ್) ಎಲೈ ಬ್ರಹ್ಮದೇವನೇ (ಆಸ್ಮಿನ್ ರಾಷ್ಟ್ರೇ) ನಮ್ಮ ರಾಷ್ಟ್ರದಲ್ಲಿ (ಬ್ರಾಮ್ಹಣಃ) ಜ್ಞಾನಿಯು (ಬ್ರಮ್ಹವರ್ಚಸೀ) ಬ್ರಮ್ಹವರ್ಚಸ್ಸುಳ್ಳವನು (ಆಜಾಯತಾಂ) ಹುಟ್ಟಲೀ (ಆಸಮಂತಾತ್) ಎಲ್ಲ ಕಡೆಗಳಲ್ಲಿ (ಆಸ್ಮಿನ್ ರಾಷ್ಟ್ರೇ) ಇದನ್ನು ಎಲ್ಲ ಕಡೆಗಳಲ್ಲೂ ಯೋಜಿಸಿಕೊಳ್ಳಬೇಕು. (ರಾಜನ್ಯಃ) ಬ್ರಮ್ಹದೇವನೇ ನಮ್ಮ ರಾಷ್ಟ್ರದಲ್ಲಿ ರಾಷ್ಟ್ರ ರಕ್ಷಣೆಗಾಗಿ ಶೂರಕ್ಷತ್ರಿಯರನ್ನು ನಿರ್ಮಾಣ ಮಾಡು (ಇಷವ್ಯಃ ಶೂರಃ) ಶೌರ್ಯಯುಕ್ತರೂ ಬಾಣಯುದ್ಧಕುಶಲರನ್ನೂ ನಿರ್ಮಾಣ ಮಾಡು (ಹುಟ್ಟಿಸು) (ಮಹಾರಥೋಜಾಯತಾಂ) ರಥವನ್ನೇರಿ ಸೇನಾ ಮೂಲಕ ಶತೃಗಳ ಮೇಲೆ ಮುನ್ನುಗ್ಗಿ ಯುದ್ಧಮಾಡುವವರನ್ನು ಬ್ರಮ್ಹದೇವನೇ ನಿರ್ಮಾಣ ಮಾಡು. (ಮಹಾರಥವೆಂದರೆ ರಥ = ಹಡಗು = ಆನೆ = ಕುದುರೆ ಕಾಲಾಳುಗಳು) ಮೊದಲಾದವುಗಳ ಅವಶ್ಯಕತೆ ಇರುತ್ತದೆ. ಇವೆಲ್ಲವೂ ರಾಷ್ಟ್ರ ರಕ್ಷಣೆಗೆ ಬೇಕಾಗುತ್ತದೆ. (ದೋಗ್ಧ್ರೀಧೇನುಃ) ಬ್ರಮ್ಹದೇವನೇ ನಮ್ಮ ರಾಷ್ಟ್ರದಲ್ಲಿ ಬಹಳ ಹಾಲು ಕೊಡುವ ಆಕಳುಗಳನ್ನು ನಿರ್ಮಾಣ ಮಾಡು. (ವೋಢಾ ನಡ್ವಾನ್) ಹೆಚ್ಚು ಭಾರಗಳನ್ನು ಎಳೆಯುವಂತಹ ಎತ್ತುಗಳನ್ನು ನಿರ್ಮಾಣ ಮಾಡು. (ಆಶುಃ ಸಪ್ತಿಃ) ಅತಿವೇಗದಿಂದ ಹೋಗುವ ಕುದುರೆಗಳನ್ನು ನಿರ್ಮಾಣ ಮಾಡು . (ಪುರಂಧಿರ್ಯೋಷಾ) ವಿದ್ಯಾವತಿಯೂ ಶ್ರೇಷ್ಠ ಜ್ಞಾನಿಯೂ ವೈದಿಕ ಧರ್ಮ ಪರಾಯಣಳೂ ನಮ್ಮ ರಾಷ್ಟ್ರದಲ್ಲಿ ಜನಿಸಬೇಕು. ಬ್ರಮ್ಹದೇವನೇ ನಮ್ಮ ರಾಷ್ಟ್ರದಲ್ಲಿ ಶ್ರೇಷ್ಠ ಸ್ತ್ರೀಯರನ್ನು ಹುಟ್ಟಿಸು. (ಜಿಷ್ಣೂರಥೇಷ್ಠಾಃ) ಜಿ=ಜಯ= ಗೆಲ್ಲುವಿಕೆ. ಅಂದರೆ ರಥದಲ್ಲಿ ಕುಳಿತು ಯುದ್ಧ ಮಾಡುವವರು ಶೂರರೂ ಯುದ್ಧ ಕುಶಲರೂ ಜಯಶೀಲರೂ ಆಗಿರಬೇಕು. ಬ್ರಮ್ಹದೇವನೇ ನಮ್ಮ ರಾಷ್ಟ್ರಕ್ಕೆ ಇಂತಹ ಪ್ರಜೆಗಳನ್ನು ಕೊಡು. (ಸಭೇಯೋಯುವಾ) **''ಯುವಾಯಜಮಾನಃ ಸಭೇಯಃ''** ತರುಣ ಯಜಮಾನನು ಜ್ಞಾನಿಗಳ ಸಭೆಗೆ ಪ್ರಿಯನಾಗಿರಬೇಕು. ಅಂದರೆ ವಿದ್ಯಾವಂತನೂ ಸದಾಚಾರಿಯೂ ಮತು ಜ್ಞಾನಿಗಳ ಸಂಗಡ ಪರಸ್ಪರ ಸದ್ವಿಚಾರ ವಿನಿಮಯ ಮಾಡಿಕೊಳ್ಳುವವನಿರಬೇಕು. ಬ್ರಮ್ಹದೇವನೇ ನಮ್ಮ ರಾಷ್ಟ್ರಕ್ಕೆ ಇಂತಹ ಪ್ರಜೆಗಳನ್ನು ಕೊಡು. (ಯಜಮಾನಃ) ಯಜ್ಞಕರ್ತನಾದ ಯಜಮಾನನು ರಾಷ್ಟ್ರದ ಸರ್ವತೋವಿಧದ ಏಳಿಗೆಗೂ ಸಂಪದಭಿವೃದ್ಧಿಗೂ ಪ್ರತಿನಿತ್ಯ ಪಂಚಮಹಾಯಜ್ಞಗಳನ್ನೂ ಮತ್ತು ಅನೇಕ ಸತ್ಕರ್ಮಗಳನ್ನೂ ಮಾಡುತ್ತಿರಬೇಕು. ಬ್ರಮ್ಹದೇವನೇ ನಮ್ಮ ರಾಷ್ಟ್ರದಲ್ಲಿ ಇಂತಹ ಸತ್ಪ್ರಜೆಗಳನ್ನು ಉತ್ಪನ್ನ ಮಾಡು. (ವೀರೋಜಾಯತಾಂ) ಬ್ರಮ್ಹದೇವನೇ ನಮ್ಮ ರಾಷ್ಟ್ರದ ರಕ್ಷಣೆಗಾಗಿ ಶೂರರನ್ನು ನಿರ್ಮಾಣ ಮಾಡು. **''ನಿಕಾಮೇನಿಕಾಮೇನಃ ಪರ್ಜನ್ಯೋ ವರ್ಷತು''** ಬ್ರಮ್ಹದೇವನೇ ನಮ್ಮ ರಾಷ್ಟ್ರದಲ್ಲಿ ಸಕಾಲ ಮಳೆಯಾಗಿ ಸಸ್ಯಾದಿಗಳೂ ವನಸ್ಪತಿಗಳೂ ಧಾನ್ಯಗಳೂ ಹಣ್ಣುಗಳೂ ಅಭಿವೃದ್ಧಿಯಾಗುವಂತೆ ಮಾಡು.

''ಫಲಿನ್ಯೋ ನ ಓಷಧಯಃ ಪಚ್ಯಂತಾಂ'' ಬ್ರಮ್ಹದೇವನೇ ನಮ್ಮ ರಾಷ್ಟ್ರದಲ್ಲಿ ಜೀವಿಗಳು ತಿನ್ನುವ ಆಹಾರ ವಸ್ತುಗಳೂ ನಮ್ಮ ಆರೋಗ್ಯಾಭಿವೃದ್ಧಿಗೂ ಬೇಕಾಗುವಂತಹ ಎಲ್ಲಾ ವಿಧದ ವನಸ್ಪತಿಗಳನ್ನೂ ಉತ್ಪನ್ನ ಮಾಡು. **''ಯೋಗಕ್ಷೇಮೋನಃ ಕಲ್ಪತಾಂ''** ಎಲೈ ಬ್ರಮ್ಹದೇವನೇ ನೀನು ಸರ್ವಜ್ಞನಿರುವ ಕಾರಣ ನಮ್ಮೆಲ್ಲರ ಸಂಪೂರ್ಣ ಯೋಗ ಕ್ಷೇಮವನ್ನು ನೀನೇ ಮಾಡು (ವಿವೇಚನೆ).

೧) ಈ ಮಂತ್ರದ ಮುಖ್ಯಾಂಶ - ನಮ್ಮ ಪೂರ್ವಜರು ಬ್ರಮ್ಹನಲ್ಲಿ ಪ್ರಾರ್ಥನೆ ಮಾಡಿರುತ್ತಾರೆ. ಎಲೈ ಬ್ರಮ್ಹದೇವನೇ ನಮ್ಮ ರಾಷ್ಟ್ರದಲ್ಲಿ ವೇದವೇತ್ತರೂ ವೇದತತ್ವ ಪ್ರಚಾರಕರೂ ಬ್ರಮ್ಹವರ್ಚಸ್ಸನ್ನು ಸಂಪಾದಿಸುವವರೂ ತೇಜಸ್ವಿಗಳೂ ಹುಟ್ಟುವಂತೆ ಅನುಗ್ರಹ ಮಾಡು. ಯಾಕೆಂದರೆ ನಮ್ಮ ರಾಷ್ಟ್ರದ ಸರ್ವತೋ ವಿಧದ ಏಳಿಗೆಗಾಗಿ ಋಷಿಗಳೂ ಶ್ರೇಷ್ಠ ಜ್ಞಾನಿಗಳೂ ಜನ್ಮವೆತ್ತುತ್ತಿರಬೇಕು. ರಾಷ್ಟ್ರವನ್ನು ವ್ಯವಸ್ಥಿತ ರೀತಿಯಿಂದ ಇಟ್ಟುಕೊಳ್ಳಲಿಕ್ಕೆ ಜ್ಞಾನಿಗಳನ್ನು ಸಂರಕ್ಷಿಸಿಕೊಳ್ಳಬೇಕು. ಬ್ರಮ್ಹಬಲ = ಜ್ಞಾನಬಲ .

೨) ಎಲೈ ದೇವನೇ ನಮ್ಮ ರಾಷ್ಟ್ರ ರಕ್ಷಣೆಗಾಗಿ ಶೂರ ಕ್ಷತ್ರಿಯರನ್ನು ಹುಟ್ಟಿಸು ಸುಜ್ಞಾನಿಗಳ ಆದೇಶಾನುಸಾರ ರಾಜ ದಂಡವನ್ನು ಹಿಡಿದು ರಾಷ್ಟ್ರ ರಕ್ಷಿಸುವ ಕ್ಷಾತ್ರಬಲವುಳ್ಳ ಶೂರ ಕ್ಷತ್ರಿಯರ ಅವಶ್ಯಕತೆ ಇರುವುದರಿಂದ ಅಂಥ ವೀರರನ್ನು ಹುಟ್ಟಿಸು. ಹಾಗೂ ಅವರು ಮಹಾರಥವನ್ನೇರಿ ಸೇನಾ ಮೂಲಕ ಶತ್ರುಸೇನೆಯ ಮೇಲೆ ಮುನ್ನುಗ್ಗಿ ಯುದ್ಧಮಾಡುವ ಶೂರರೂ ಯುದ್ಧಕುಶಲರೂ ಆಗಿ ಜಯಶೀಲರಾಗಬೇಕು.

೩) (ಮಹಾರಥಃ) ಭೂದಳ=ವಾಯುದಳ = ಆನೆ = ಕುದುರೆ = ರಥ = ಯುದ್ಧಸಾಮಗ್ರಿಗಳು = ಸಂಪತ್ತುಗಳು (ಹಣಕಾಸಿನ) ಅವಶ್ಯಕತೆ ಇರುವುದರಿಂದ ದೇವನೇ ರಾಷ್ಟ್ರ ರಕ್ಷಣೆಗಾಗಿ ಈ ಎಲ್ಲಾ ಸಂಪತ್ತುಗಳನ್ನು ಕೊಡು.

೪) ಬ್ರಮ್ಹದೇವನೇ ನಮ್ಮ ರಾಷ್ಟ್ರದ ಸರ್ವತೊ ವಿಧದ ಅಭಿವೃದ್ಧಿಗೂ ಮತ್ತು ಯಜ್ಞಾದಿ ಅನೇಕ ಸತ್ಕಾರ್ಯಗಳಿಗೂ ನಮ್ಮ ಆರೋಗ್ಯಾಭಿವೃದ್ಧಿಗೂ ಗೋ ಸಂಪತ್ತನ್ನು ಕೊಡು. ವಿಪುಲ ಹಾಲು ಕೊಡುವ ಗೋವುಗಳನ್ನು ನಾವು ನಿನ್ನಿಂದ ಬೇಡುತ್ತೇವೆ. ಯಾಕೆಂದರೆ ಹೆಚ್ಚು ಹಾಲು ಕೊಡುವ ಗೋವುಗಳಿಲ್ಲದಿದ್ದರೆ ಬಲಹೀನ ರಾಷ್ಟ್ರವೆಂದು ಎಣಿಸಲ್ಪಡುತ್ತದೆ. ಮತ್ತು ಹೆಚ್ಚು ಭಾರ ಎಳೆಯುವ ಎತ್ತುಗಳೂ, ತಳಿ ಸುಧಾರಣೆಗೆ ಸುಧಾರಿಸಿದ ಹೋರಿಯೂ ಬೇಕು. ಈ ಮೂಲಕ ಉತ್ತಮ ಕರುಗಳು ಜನಿಸುತ್ತವೆ. ರಾಷ್ಟ್ರ ಹಿತವು ಆಗುತ್ತದೆ.

೫) ವೇಗದಿಂದ ಹೋಗುವ ಕುದುರೆಗಳನ್ನು ನಮ್ಮ ರಾಷ್ಟ್ರದಲ್ಲಿ ಹುಟ್ಟಿಸು.

೬) ಪುರುಷ ಸಮಾಜದ ಆಧಾರಕ್ಕಾಗಿ ಸ್ತ್ರೀ ಸಮಾಜವೂ ಕ್ಷೇತ್ರ ಯೋಗ್ಯತೆ ತಾರತಮ್ಯದ ಮೇಲೆ ಬೀಜದ ಯೋಗ್ಯತೆಯ ತಾರತಮ್ಯವು ವ್ಯವಸ್ಥಿತವಾಗಿರುತ್ತದೆ. ರಾಷ್ಟ್ರವು ಬ್ರಮ್ಹವರ್ಚಸೀ ಬ್ರಾಮ್ಹಣರನ್ನು ಶಾರೀರಿಕ ಬಲವುಳ್ಳ ಕ್ಷತ್ರಿಯರನ್ನೂ ಕುಶಲ ವ್ಯಾಪಾರಿಗಳನ್ನೂ ಕರ್ಮಚಾರಿಗಳನ್ನೂ ಉತ್ಪನ್ನ ಮಾಡಲು ಇಚ್ಛಿಸುವಾಗ ಸ್ತ್ರೀ ಶಕ್ತಿಯನ್ನೂ ಸುರಕ್ಷಿತವಾಗಿ ರಕ್ಷಿಸಿಕೊಳ್ಳಬೇಕು. ಸ್ತ್ರೀ ಜಾತಿ ಅಭ್ಯುತ್ಥಾನವೇ ರಾಷ್ಟ್ರಾಭಿವೃದ್ಧಿಯ ಮೂಲ. ಶಕ್ತಿ ಹೀನರಾದ ಸ್ತ್ರೀಯರಿಂದ ಜನಿಸಿದ ಮಕ್ಕಳು ಅಶಕ್ತರೂ ರೋಗಗ್ರಸ್ತರೂ ಆಗಿ ಬಾಳುತ್ತಾರೆ. ಸ್ತ್ರೀಯರು ಸುಜ್ಞಾನಿಗಳೂ ವಿದ್ಯಾವಂತರೂ

ಸದ್ಧರ್ಮಾಚರಣೆ ನಿರತರೂ -ವೈದಿಕ ಧರ್ಮಕಾರ್ಯಗಳಲ್ಲಿ ಆಸಕ್ತಿಯಿಂದ ಆಚರಿಸುವವರೂ ನಮ್ಮ ರಾಷ್ಟ್ರದಲ್ಲಿ ಜನಿಸುತ್ತಿರಬೇಕೆನ್ನುವುದೇ ನಮ್ಮ ಪೂರ್ವಜರ ಉದ್ದೇಶ. ಇದಕ್ಕೆ ಉತ್ಪತ್ತಿಕಾರಕನಾದ ಬ್ರಮ್ಹನ ಅನುಗ್ರಹವೇ ಬೇಕು.

೭) ತರುಣ ಯಜಮಾನನು ಎಲ್ಲಿಯವರೆಗೆ ಜ್ಞಾನಿಗಳ ಸಭೆಗೆ ಪ್ರಿಯನಾಗುವುದಿಲ್ಲವೋ ಅಲ್ಲಿಯವರೆಗೆ ಜನಪ್ರಿಯನಾಗುವುದಿಲ್ಲ. ಜನಪ್ರಿಯನಾದ ಹೊರತು ಯಾವ ಪ್ರಯೋಜನವೂ ಇಲ್ಲ. ಯಶಸ್ಸೂ ಸಿಗುವುದಿಲ್ಲ. ಅಂದರೆ ಸಭಾಪ್ರಿಯನೂ, ಸುಜ್ಞಾನಿಯೂ, ಸತ್ಕರ್ಮಿಯೂ, ಕೀರ್ತಿಶಾಲಿಯೂ ಆಗಬೇಕೆನ್ನುವುದೇ ಋಷಿಗಳ ಇಚ್ಛೆ. ಆದುದರಿಂದ ನಮ್ಮ ರಾಷ್ಟ್ರಕ್ಕೆ ಸುಪುತ್ರರನ್ನು ಕೊಡು. ಇಲ್ಲಿ (ಯಜಮಾನಃ) ಎನ್ನುವ ಶಬ್ದವಿದೆ. ಯಜ್ಞಕರ್ಮವನ್ನು ರಾಷ್ಟ್ರದ ಏಳಿಗೆಗೂ ಐಶ್ವರ್ಯಗಳ ಅಭಿವೃದ್ಧಿಗೂ ಆರೋಗ್ಯಾಭಿವೃದ್ಧಿಗೂ ಯಜಮಾನನು ಯಜ್ಞವನ್ನು ಮಾಡುತ್ತಿರಬೇಕು. ಗೃಹಸ್ಥ ಧರ್ಮ ಪ್ರಕಾರ ಯಜಮಾನನು ಪ್ರತಿನಿತ್ಯವೂ ಆಚರಿಸಬೇಕೆಂದು ಸ್ಮೃತಿಕಾರರು ಹೇಳಿರುತ್ತಾರೆ.

೮) ಸಕಾಲ ವೃಷ್ಟಿಯಾಗಿ ಸಸ್ಯಾದಿ ವನಸ್ಪತಿಗಳೂ ಮತ್ತು ಆಹಾರ ಧಾನ್ಯ ಹಣ್ಣುಗಳೂ ಸಮೃದ್ಧವಾಗಿ ರಾಷ್ಟ್ರಕ್ಕೆ ಕ್ಷೇಮವಾಗಬೇಕೆನ್ನುವುದೇ ಋಷಿಮುನಿಗಳ ಇಚ್ಛೆ. ಯಾಕೆಂದರೆ ಇವುಗಳ ಅಭಿವೃದ್ಧಿಯಾಗದಿದ್ದರೆ ಅನ್ನ ನೀರಿನ ಅಭಾವದಿಂದ ಎಲ್ಲಾ ಜೀವಿಗಳೂ ಮೃತ್ಯು ಮುಖಕ್ಕೆ ಗುರಿಯಾಗುತ್ತಾರೆ. ಈ ಕಠಿಣ ಪರಿಸ್ಥಿತಿಯಲ್ಲಿ ರಾಷ್ಟ್ರ ರಕ್ಷಿಸುವ ಮುಂದಾಳುಗಳೂ ಪ್ರಜೆಗಳೂ ತಮ್ಮ ಕರ್ತವ್ಯ ವಿರುದ್ಧ ಕರ್ಮಗಳನ್ನು ಆಚರಿಸುವ ಪರಿಸ್ಥಿತಿ ಬರುತ್ತದೆ. ಆದ ಕಾರಣ ಬ್ರಮ್ಹ ದೇವನೇ ಎಲ್ಲಾ ವಿಧದ ಅಭಿವೃದ್ಧಿಯನ್ನು ಮಾಡಿ ನಮ್ಮನ್ನು ಸಂರಕ್ಷಿಸು.

೯) ಎಲೈ ಬ್ರಮ್ಹ ದೇವನೇ ನಮ್ಮ ಸಂಪೂರ್ಣ ಯೋಗ ಕ್ಷೇಮದ ಭಾರವು ನಿನ್ನ ಮೇಲೇ ಇದೆ. ಆದ ಕಾರಣ ನಮ್ಮೆಲ್ಲರಿಗೂ ಸುಯೋಗವನ್ನೂ ಮತ್ತು ಕ್ಷೇಮವನ್ನುಂಟು ಮಾಡು. ಅಧರ್ಮಾಚರಣೆಯು ನಮ್ಮ ಮನಸ್ಸು - ಬುದ್ಧಿ - ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ಅಧೋಗತಿಗೆ ಎಳೆದು ನಮ್ಮ ಮನುಷ್ಯ ಜೀವನದ ಧ್ಯೇಯವನ್ನು ಹಾಳು ಮಾಡಿ ಪುನಃ ಪುನಃ ಜನನ ಮರಣ ಚಕ್ರಕ್ಕೆ ಸಿಕ್ಕು ಅನೇಕ ಜನ್ಮದಲ್ಲಿ ಜನಿಸಿ ಅಪಾರ ದುಃಖಗಳನ್ನು ಅನುಭವಿಸಬೇಕಾಗುತ್ತದೆ. ಆದ ಕಾರಣ ನಿರಂತರ ದೇವತಾ ಉಪಾಸನೆಯನ್ನು ನಮ್ಮ ಪೂರ್ವಜರು ವಿಧಿಸಿರುತ್ತಾರೆ. ನಮ್ಮ ಭಾರತ ದೇಶದಲ್ಲಿ ಬ್ರಿಟೀಶರೇ ಮೊದಲಾದ ಅನೇಕ ಜನರ ಆಡಳಿತ ಬಂದು ನಮ್ಮ ಭಾರತ ಸಂಸ್ಕೃತಿ ಮತ್ತು ಸಂಸ್ಕಾರಗಳು ನಶಿಸಿ ಹೋಗುವ ಸ್ಥಿತಿಗೆ ಬಂದಾಗ ವೈದಿಕ ಧರ್ಮದ ಪುನರುಜ್ಜೀವನಕ್ಕಾಗಿ ಶಂಕರ ಭಗವತ್ಪಾದರು ಅವತರಿಸಿ ವೈದಿಕ ಧರ್ಮ ಪ್ರಚಾರಕ್ಕಾಗಿ ಮಠಗಳನ್ನು ಸ್ಥಾಪಿಸಿ ಆ ಮೂಲಕ ಧರ್ಮ ಜಾಗ್ರತೆಯನ್ನು ಮಾಡಿದರು. ಇದು ನಮ್ಮ ಭಾರತೀಯರ ಸೌಭಾಗ್ಯ. ಇದನ್ನು ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ.

ವೇದ : "**ನಾವೇದವಿನ್ಮನು ತೇತಂಬೃಹಂತಂ**" ವೇದ ಜ್ಞಾನವಿಲ್ಲದವನು ಆ ಪರಮಾತ್ಮನನ್ನು ತಿಳಿಯನು. ಕಾಣುವ ವಸ್ತುವನ್ನು ಕಾಣಲು ಕಣ್ಣಿನಂತಹ ಬೇರೆ ಯಾವ ಸಾಧನವೂ ಇಲ್ಲ. ಅಂತೆಯೇ "**ದೇವಪಿತೃ ಮನುಷ್ಯಾಣಾಂ ವೇದಶ್ಚಕ್ಷುಃ ಸನಾತನಮ್ ||**" ಬರೇ ಮಾನವರಿಗಷ್ಟೇ ಅಲ್ಲ, ದೇವಪಿತೃಗಳಿಗೂ ಸಹ ವೇದವೇ ಕಣ್ಣು. ವೇದದಿಂದಲೇ ದೇವ ಪಿತೃಗಳು ತಮ್ಮ ಅಭ್ಯುದಯ ಮಾರ್ಗವನ್ನು ಹಾಗೂ ನಿಶ್ರೇಯಸ ಸ್ಥಾನವನ್ನು ಕಂಡುಹಿಡಿದಿರುವರು ಎಂದು ಮನುಸ್ಮೃತಿಯಲ್ಲಿ ಹೇಳಿರುವರು. ಸೃಷ್ಟಿಯನ್ನು ಸೃಜಿಸುವ ಜ್ಞಾನವೇ ವೇದವು ಜಗತ್ತಿನ ಉತ್ಪತ್ತಿ = ಪಾಲನೆ = ನಾಶ = ಇವೆಲ್ಲವೂ ಆ ಪರಮಾತ್ಮನಿಂದಲೇ ಸಾಧ್ಯ. ಆತನಿಂದಲೇ ವೇದದ ಉತ್ಪತ್ತಿ = ವೇದದಿಂದಲೇ ಈ ಜಗತ್ತಿನ ಉತ್ಪತ್ತಿ. "**ಸನೋದೇವಃ ಶುಭಯಾಃ ಸ್ಮೃತ್ಯಾಃ ಸಂಯುನಕ್ತು**" ಈ ದೇವನು ನಮ್ಮನ್ನು ಶುಭವಾದ ಸ್ವರೂಪದ ಸ್ಮೃತಿಯಿಂದ ಯಾವಾಗಲೂ ಕೂಡಿರುವಂತೆ ಮಾಡಲಿ. "**ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇऽಸ್ತಂ ಗಚ್ಛಂತಿ ನಾಮರೂಪೇವಿಹಾಯ ತಥಾ ವಿದ್ವಾನಾಮ ರೂಪಾ ದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್ ||**" ಯಾವ ಪ್ರಕಾರ ನದಿಗಳು ಸಮುದ್ರವನ್ನು ಸೇರಿ ತಮ್ಮ ಹೆಸರುಗಳನ್ನು ಮತ್ತು ರೂಪಗಳನ್ನು ಬಿಡುವಂತೆ ಪರಮಾತ್ಮನ ಧ್ಯಾನಾಸಕ್ತನಾದ ಶ್ರೇಷ್ಠ ಜ್ಞಾನಿಯು ತನ್ನ ನಾಮ ರೂಪಗಳಿಂದ ಮುಕ್ತನಾಗಿ ನಿಜಪ್ರಭೆಯಿಂದ ಬೆಳಗುತ್ತಿರುವ ಸರ್ವಾತಿ ಶ್ರೇಷ್ಠನಾದ ಆ ದೇವನ ಸ್ವರೂಪದಲ್ಲಿ ಒಂದಾಗಿ ಹೋಗುವವನು ಎಂಬುದಾಗಿ ವೇದವು ಬೋಧಿಸುತ್ತದೆ. "**ಯತಃ ಪ್ರಸೂತಾ ಜಗತಃ ಪ್ರಸೂತಿಃ**" ಯಾವಾತನಿಂದ ಈ ಜಗತ್ತು ಉತ್ಪತ್ತಿಯಾಗಿರುವುದೋ "**ಯತ್ರವಿಶ್ವಂ ಭವತ್ಯೇಕ ನೀಳಮ್**" ಎಲ್ಲಿ ವಿಶ್ವವು ನೆಲೆಯಾಗಿ ನಿಲ್ಲುವುದೋ "**ತತ್ ಸೃಷ್ಟ್ವಾತ ದೇವಾನುಪ್ರಾವಿಶತ್**" ಯಾವಾತನು ಇವೆಲ್ಲವನ್ನೂ ಉತ್ಪನ್ನ ಮಾಡಿ ಈ ಎಲ್ಲದರಲ್ಲೂ ವ್ಯಾಪಿಸಿಕೊಂಡಿರುತ್ತಾನೋ "**ನತಸ್ಯೇಶೇಕಶ್ಚನ ತಸ್ಯನಾಮ ಮಹದ್ಯಶಃ**" ಅವನನ್ನು ಯಾವಾತನೂ ಆಳನು. ಯಾಕೆಂದರೆ ಅವನ ಕೀರ್ತಿ = ಪರಾಕ್ರಮ= ಬಲ = ಇವೆಲ್ಲವೂ ಎಲ್ಲಕ್ಕಿಂತಲೂ ಅತಿ ಹೆಚ್ಚಿನದಿರುತ್ತದೆ. ಆದ ಕಾರಣ ಈತನು "**ಆತ್ಮಾನಾತ್ಮಾನಮಭಿಸಂಬಭೂವ**" ತನ್ನಿಂದ ತಾನೇ ರೂಪುಗೊಂಡಿದವನು. ಇವನಿಗೆ "ಸ್ವಯಂಭೂಃ" ಎನ್ನುವರು. "ಸ್ವಯಿ ಮುದ್ಭವೌ" ತನ್ನಿಂದ ತಾನೇ ರೂಪುಗೊಂಡಿರುವವನು. "**ತೇನಕೋಽರ್ಹತಿಸ್ಪರ್ಧಿತುಮ್**"ಅವನ ಸಂಗಡ ಸ್ಪರ್ಧೆ ಮಾಡಿ ಜಯಿಸತಕ್ಕವರಾರು? "**ಏಷಭೂತಾನಾ ಮಧಿಪತಿಃ**" ಇವನು ಮನುಷ್ಯಾದಿ ಜೀವಿಗಳಿಗೂ ಅಧಿಪತಿ ಇರುತ್ತಾನೆ. "**ಯ ಈಶೇ ಅಸ್ಯ ದ್ವಿಪದೇ ಚತುಷ್ಪದೇ**" ಮನುಷ್ಯರಿಗೂ ಮನುಷ್ಯೇತರ ಜೀವಿಗಳಿಗೂ ಸ್ವಾಮಿ ಇರುತ್ತಾನೆ. ಈ ಜಗತ್ತು ನಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಆಕಾಶ = ಗಾಳಿ = ಬೆಂಕಿ = ನೀರು = ನೆಲ ಒಂದರಲ್ಲೊಂದು ಇರುವುದನ್ನು ನೋಡಿದರೆ ಒಂದಕ್ಕಿಂತ ಮತ್ತೊಂದು ಆಶ್ಚರ್ಯ. ಯಾಕೆಂದರೆ ಬಹಳ ಭಾರವುಳ್ಳ ಭೂಮಿಯು ನೀರಿನಲ್ಲಿ ನಿಂತಿರುತ್ತದೆ. "**ಸರ್ವಾಶ್ಚರ್ಯಮಯಂ ನಭಃ**" ಆಕಾಶದ ಪೊಳ್ಳು ಭಾಗದಲ್ಲಿ ಕಂಡಬರುವ ಸೂರ್ಯ- ಚಂದ್ರ ಅಪಾರ ನಕ್ಷತ್ರಗಳು, ಸೂರ್ಯನ ಉದಯಾಸ್ತ ಕಾಲಗಳಲ್ಲಿ ಆಕಾಶದ ಬಣ್ಣಗಳು. ಇವು ನಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತವೆ. ಮತ್ತು ವಿಶಾಲವಾದ ಸಮುದ್ರವು ನಮಗೆ ಬೆರಗನ್ನುಂಟು ಮಾಡುತ್ತದೆ. ಸೂರ್ಯ ಚಂದ್ರರಲ್ಲಿರುವ ಪ್ರಕಾಶ ನಮ್ಮ ಕಣ್ಣುಗಳಲ್ಲಿ ನೋಡುವ ಶಕ್ತಿ, ಶರೀರದೊಳಗೆ ಎಲ್ಲೂ ಕಾಣದ ಮನಸ್ಸು ಆಲೋಚಿಸುವ ವಿಚಾರಗಳು ಅದಕ್ಕಾಗುವ ದೃಶ್ಯ ಪರಿಜ್ಞಾನಗಳನ್ನು ಭಾವಿಸಿದರೆ ಎಷ್ಟು ಆಶ್ಚರ್ಯ.

ವಿವಿಧ ಸತ್ಯ ವಿಚಾರಗಳು

''ಇಷ್ಟಪ್ರಾಪ್ತ್ಯನಿಷ್ಟ ಪರಿಹಾರಯೋರಲೌಕಿಕ ಉಪಾಯಂ ಯೋಗ್ರಂಥೋವೇ ದಯತಿ ಸವೇದಃ॥'' ಅಂದರೆ ನಮ್ಮೆಲ್ಲರ ಸದಿಚ್ಛಾಪೂರ್ತಿಗೂ ಮತ್ತು **''ನಿಃಶ್ರೇಯಸಕರಾಣಿ ಕರ್ಮಾಣ್ಯಾವೇದಯಂತಿ ವೇದಾಃ॥ ''** (ಸೂತ್ರ) ನಮ್ಮ ಜೀವನದಲ್ಲಿ ಸರ್ವತೋವಿಧದ ಏಳಿಗೆಯನ್ನೂ ಮತ್ತು ದೇಹಾಂತ್ಯದಲ್ಲಿ ಅಮೃತತ್ವ ಪ್ರಾಪ್ತಿಯನ್ನೂ ಯಾವ ಕರ್ಮಾಚರಣೆಗಳು ಅತ್ಯವಶ್ಯವೋ ವೇದವು ಅದನ್ನೇ ತಿಳಿಸಿಕೊಡುತ್ತದೆ.

ನಾವು ದೇವತೆಗಳನ್ನು ಯಾಕೆ ಪೂಜಿಸಬೇಕು?

ದೇವತೆಗಳು ನಮಗೆ ಜ್ಞಾನೇಂದ್ರಿಯ = ಕರ್ಮೇಂದ್ರಿಯ = ಮನಸ್ಸು = ಬುದ್ಧಿ = ಅಂತಃಕರಣಗಳನ್ನು ಕೊಟ್ಟಿರುತ್ತಾರೆ. ಮತ್ತು ನಮ್ಮ ಬದುಕಿಗೆ ಬೇಕಾಗುವ ಅನ್ನವನ್ನೂ ರಸಪದಾರ್ಥವನ್ನೂ ಸೃಷ್ಟಿಮಾಡಿರುತ್ತಾರೆ ಮತ್ತು ನಮಗೆ ಬೇಕಾಗುವ ಉಪಭೋಗ ವಸ್ತುಗಳನ್ನೂ ನಿರ್ಮಿಸಿ ಪ್ರತಿಕ್ಷಣಗಳಲ್ಲಿಯೂ ನಮ್ಮನ್ನು ಸಂರಕ್ಷಿಸುತ್ತಿರುತ್ತಾರೆ. ಅವರು ನಿರಂತರ ಮಾಡುತ್ತಿರುವ ಉಪಕಾರಗಳನ್ನು ಸ್ಮರಿಸಿ ಅವರನ್ನು ಆರಾಧಿಸಬೇಕು.

ಕೃತಘ್ನರಾಗಬಾರದು

ಸಂಸ್ಕೃತ ಭಾಷೆಯಿಂದಲೇ ದೇವರನ್ನು ಯಾಕೆ ಪ್ರಾರ್ಥಿಸಬೇಕು? ವೇದ ಮಂತ್ರಗಳು ಸಂಸ್ಕೃತ ಭಾಷೆಯಲ್ಲಿರುವುದರಿಂದ ಕಲಿಯಲಿಕ್ಕೂ ತಿಳಿದುಕೊಳ್ಳಲಿಕ್ಕೂ ಬಹು ಕಷ್ಟ. ಆದರ ಬದಲು ತಿಳಿಯುವ ಯಾವುದಾದರೂ ಭಾಷೆಯಲ್ಲಿ ನಾವು ದೇವರನ್ನು ಯಾಕೆ ಪ್ರಾರ್ಥಿಸಬಾರದು? ಯಾಕೆಂದರೆ ದೇವನು ಸರ್ವಜ್ಞನೂ ಸರ್ವಾಂತರ್ಯಾಮಿಯೂ ಇರುತ್ತಾನೆ. ಆದುದರಿಂದ ಸಂಸ್ಕೃತದಲ್ಲಿರುವ ವೇದ ಮಂತ್ರಗಳಿಂದಲೇ ಯಾಕೆ ಪ್ರಾರ್ಥಿಸಬೇಕು? (ಉತ್ತರ) ನಮ್ಮೆಲ್ಲರ ಮಾತೃಭಾಷೆಯು ಸಂಸ್ಕೃತವಿರುತ್ತದೆ. ನಮ್ಮ ಮಾತೃಭಾಷೆಯಲ್ಲೇ ವೇದ ಮಂತ್ರಗಳಿರುತ್ತವೆ. ಇದಕ್ಕೆ ವೇದವಾಣಿ ಎನ್ನುವರು. (೧)

ವೇದ ಮಂತ್ರಗಳು ಮನುಷ್ಯ ಕೃತಿಯಲ್ಲಿ ಇದು ಈಶ್ವರವಾಣಿಯಾದ್ದರಿಂದ ಅಪೌರುಷೇಯವೆಂದು ಹೇಳಿರುತ್ತಾರೆ. ಆದ ಕಾರಣ ಈಶ್ವರನಿಂದ ಸೃಷ್ಟಿಸಲ್ಪಟ್ಟ ಈ ಭಾಷೆಯಿಂದಲೇ ಹೇಳಬೇಕು. (೨)

ವೇದಗಳ ಉತ್ಪತ್ತಿ ವಿಚಾರಗಳು

ಭೂಮಂಡಲದಿಂದ ಅಗ್ನಿ- ''ಅಗ್ನೇರ್ಋಗ್ವೇದಂ'' = ಆದಿ ವೇದವಾದ ಋಗ್ವೇದವು ಅಗ್ನಿಯಿಂದ ಉತ್ಪತ್ತಿಯಾಗಿರುತ್ತದೆ. (ಅಗ್ನಿಮೀಳೇ ಪುರೋಹಿತಂ) (ವೇದ) **''ವಾಯೋರ್ಯಜುರ್ವೇದಮ್''** ವಾಯುಮಂಡಲದಿಂದ (ಮಧ್ಯಲೋಕ) ದಿಂದ ಯಜುರ್ವೇದದ ಉತ್ಪತ್ತಿ, **''ಇಷೇತ್ವೋರ್ಜೇತ್ವಾವಾಯವಸ್ಥೋಪಾಯುವಸ್ಥ''** **''ಆದಿತ್ಯಾತ್ಸಾಮವೇದಮ್ ''** ಸೂರ್ಯ

ಮಂಡಲದಿಂದ ಸಾಮವೇದದ ಉತ್ಪತ್ತಿ, ಅಗ್ನಿ - ವಾಯು - ಆದಿತ್ಯರಿಂದ ಎಲ್ಲಾ ವೇದಗಳ ಉತ್ಪತ್ತಿಯೂ ಆಗಿರುತ್ತದೆ. ಋಗ್ಭಿಃ - ಸ್ತುವಂತಿ - ದೇವತಾ ಪರಿಚಯ ಮತ್ತು ದೇವತಾ ಸ್ತುತಿಗಳು **''ಯಜುರ್ಭಿಃ ಯಜಂತಿ''** ಯಜುರ್ವೇದವು ಈ ಕರ್ಮ ಭೂಮಿಯಲ್ಲಿ ಹುಟ್ಟಿರುವ ಮನುಷ್ಯರಿಗೆ ಯಥೋಕ್ತ ಕರ್ಮಗಳನ್ನು ವಿಧಿಸುತ್ತದೆ. **''ಯಜುಃ ಕರ್ಮನಾಮ॥''** **''ಸಾಮಭಿಃ ಗಾಯಂತಿ॥''** ಸಾಮವೇದವು ಉಪಸನಾಮೂಲಕ ದೇವತೆಗಳಲ್ಲಿರುವ ದೈವೀಶಕ್ತಿಗಳನ್ನು ಸಾಕ್ಷಾತ್ಕರಿಸಿಕೊಳ್ಳುವುದು (ಗೀತೆ- ವೇದಾನಾಂ ಸಾಮವೇದೋಸ್ಮಿ ಎಂತ ಹೇಳಿದೆ) ಅಥರ್ವ ವೇದವು ವಿಜ್ಞಾನ ಕಾಂಡ, ವಿಜ್ಞಾನವನ್ನು ಬೋಧಿಸುತ್ತದೆ. ಶರೀರ ವಿಜ್ಞಾನ - ವನಸ್ಪತಿ ವಿಜ್ಞಾನ - ಭೌತಿಕ ವಿಜ್ಞಾನ - ಅಸ್ತ್ರ ವಿಜ್ಞಾನ ಈ ಮೊದಲಾದವುಗಳನ್ನು ಬೋಧಿಸುತ್ತದೆ. ಆದ ಕಾರಣ ಅಗ್ನಿಗೆ ಜಾತವೇದ ಎನ್ನುವರು. (ನಿರುಕ್ತ)

''ವಿದ್ಯಾಹವೈ ಬ್ರಾಮ್ಹಣಮಾಜಗಾಮ ಗೋಪಾಯ ಮಾ॥ ಶೇವಧಿಷ್ಟೇऽಹಮಸ್ಮಿ ॥ ಅಸೂಯಕಾಯಾऽನೃಜವೇऽಯತಾಯ ಮಾಬ್ರೂಹಿ ವೀರ್ಯವತೀ ತಥಾಸ್ಯಾಮ್ ॥'' (ವೈ) ನಿಶ್ಚಯವಾಗಿ (ವಿದ್ಯಾ) ಸತ್ಯಾಸತ್ಯ ವಿವೇಕ ವಿಚಾರಗಳನ್ನುಂಟು ಮಾಡುವಂಥಾ ಜ್ಞಾನಾತ್ಮಕ ಸರಸ್ವತಿಯು (ಬ್ರಾಮ್ಹಣಂ) ಬ್ರಾಮ್ಹಣನನ್ನು ಕುರಿತು, ವೈದಿಕ ತತ್ವಗಳನ್ನು ತಿಳಿದು ನಿಷ್ಕಾಮ ಭಾವದಿಂದ ಈಶ್ವರನನ್ನು ಆರಾಧಿಸುತ್ತಿರುವ ಜ್ಞಾನಿಗಳ ಹತ್ತಿರ (ಆಜಗಾಮ) ಬಂದು ಹೇಳಿರುವುದೇನೆಂದರೆ (ಮಾ) ನನ್ನನ್ನು (ಗೋಪಾಯ) ನಾಸ್ತಿಕ ಜನರಿಂದ ರಕ್ಷಿಸು. (ಅಹಂ) ಜ್ಞಾನನಿಧಿಯಾದ ನಾನು (ತೇ) ನಿನ್ನ (ಶೇವಧಿಃ ಅಸ್ಮಿ) ಇಡಗಂಟಾಗಿರುತ್ತೇನೆ. (ಅಖಂಡ ಜ್ಞಾನ ಭಂಡಾರನಿರುತ್ತೇನೆ) (ಅಸೂಯಕಾಯ) ಬ್ರಮ ಜ್ಞಾನವನ್ನು ದ್ವೇಷಿಸುವವರಿಗೂ (ನಾಸ್ತಿಕರಿಗೂ)(ಅಯತಾಯ)ಆಲಸಿಗಳಿಗೂ, ಸ್ವೇಚ್ಛಾಚಾರಿಗಳಿಗೂ ದುರಾಚಾರಿಗಳಿಗೂ (ಅನೃಜವೇ) ಕುಟಿನಾಚರಣೆ) (ಮಾಬ್ರೂಹಿ) ನನ್ನ ಯಥಾರ್ಥ ಜ್ಞಾನವನ್ನು (ನನ್ನ ಮಹತ್ವವನ್ನು) ಹೇಳಬೇಡ ಅಂದರೆ ಸತ್ಪಾತ್ರರಲ್ಲೇ ನನ್ನ ಜ್ಞಾನಾಮೃತವನ್ನುಪದೇಶಮಾಡು (ತಥಾ) ಶ್ರೇಷ್ಠರಿಗೆ ಜ್ಞಾನೋಪದೇಶ ಮಾಡುವುದರಿಂದ (ಅಹಂ) ನಾನು (ವೀರ್ಯವತೀಸ್ಯಾಂ) ಶಕ್ತಿಶಾಲಿಯಾಗುವೆನು. ಜ್ಞಾನಿಗಳಲ್ಲಿಯೂ ಸದಾಚಾರಿಗಳಲ್ಲಿಯೂ ವಾಸಮಾಡಿಕೊಂಡ ನಾನು ಅವರನ್ನು ಶ್ರೇಷ್ಠ ಆದರ್ಶ ಪುರುಷರನ್ನಾಗಿ ಮಾಡುವೆನು. (ಭಾವ) ಸತ್ಯಾಸತ್ಯ ವಿವೇಕ ವಿಚಾರಗಳನ್ನುಂಟು ಮಾಡುವಂಥಾ ವೈದಿಕ ಜ್ಞಾನಾತ್ಮಕ ಸರಸ್ವತಿಯು ವೈದಿಕ ತತ್ವಗಳನ್ನು ತಿಳಿದು ನಿಷ್ಕಾಮ ಭಾವದಿಂದ ಈಶ್ವರನನ್ನು ಆರಾಧಿಸುತ್ತಿರುವ ಜ್ಞಾನಿಗಳ ಹತ್ತಿರ ಹೇಳಿರುವುದೇನೆಂದರೆ ಬ್ರಮ್ಹಜ್ಞಾನವನ್ನು ದ್ವೇಷಿಸುವವರಿಗೂ ಸ್ವೇಚ್ಛಾಚಾರಿಗಳಿಗೂ ದುರಾಚಾರಿಗಳಿಗೂ ಅಸೂಯೆ ಪಡುವವರಿಗೂ ನನ್ನ ಮಹತ್ವವನ್ನು ಹೇಳಬೇಡ. ಸತ್ಪಾತ್ರರಲ್ಲೇ ನನ್ನ ಜ್ಞಾನಾಮೃತವನ್ನು ಉಪದೇಶ ಮಾಡು. ಅಂತವರಿಗೆ ನನ್ನ ಮಹತ್ವವನ್ನು ಹೇಳುವುದರಿಂದ ಶಕ್ತಿಶಾಲಿಯಾದ ನಾನು ಅಂಥವರನ್ನು ಜಗತ್ತಿನ ಶ್ರೇಷ್ಠ ಪುರುಷರನ್ನಾಗಿ ಮಾಡಿ ಎಲ್ಲಾ ವಿಧಗಳಿಂದಲೂ ಸುಖ ಶಾಂತಿಯನ್ನುಂಟು ಮಾಡಿ ಅಮೃತತ್ವಕ್ಕೆ (ದೇಹಾಂತ್ಯದಲ್ಲಿ) ಮುಟ್ಟಿಸುತ್ತೇನೆ. ಮತ್ತು ಜ್ಞಾನ ಸಂಪನ್ನರಾಷ್ಟ್ರವನ್ನಾಗಿಯೂ ಮಾಡುವೆನು.

ಭಾಗ - ೨

ಸಂಸ್ಕಾರ ವಿಚಾರ

(೧. "ಕ್ರತೋಸ್ಮರ ") ಕರ್ಮಶೀಲ ಜೀವವೇ ಸತ್ಕರ್ಮಗಳನ್ನೇ ಆಚರಿಸು -ಸ್ಮರಿಸು, (೨. ಕ್ಲೀಬೇಸ್ಮರ) ಎಲ್ಲೈ ಜೀವಾತ್ಮವೇ ಜಗತ್ತಿನ ಕಲ್ಯಾಣಕ್ಕಾಗಿ ಒಳ್ಳೆಯದನ್ನೇ ಸ್ಮರಿಸು- ಆಚರಿಸು, (೩. ಕೃತಂ ಸ್ಮರ) ಎಲ್ಲೈ ಜೀವಾತ್ಮನೇ ನೀನು ಈ ಮೊದಲು ಮಾಡಿದ್ದನ್ನೂ ಮತ್ತೆ ಮುಂದೆ ಮಾಡಬೇಕಾದುದನ್ನು ಸ್ಮರಿಸು - ಆಚರಿಸು.

೧) ಸಂಸ್ಕಾರ - ಯಾವ ಕರ್ಮಗಳ ದ್ವಾರಾ ಯಾವುದೇ ವಸ್ತುಗಳಲ್ಲಿ ದೋಷವಿಲ್ಲದಿರುವಿಕೆಯನ್ನು ಮಾಡಿ ಪೂರ್ಣತೆಯಿಂದ ಸದುಪಯೋಗಕ್ಕೆ ತರಲ್ಪಡುತ್ತದೆಯೋ ಅದಕ್ಕೆ ಸಂಸ್ಕಾರ ಎನ್ನುವರು.

೨) **"ದೋಷದೂರೀಕರಣ ಗುಣೋತ್ಪಾದನ ॥"** ಸೂಕ್ಷ್ಮಾತಿ ಸೂಕ್ಷ್ಮ ರೀತಿಯಿಂದ ಅಂತಃಕರಣದ ಮೇಲೆ ಬೀಳುವಂತಹ ವಿಷಯ ಸುಖಗಳ ಪ್ರಭಾವವನ್ನು ದೂರೀಕರಿಸುವುದೇ (ಕಾಮ ಕ್ರೋಧಾದಿ ಷಡ್ವೈರಿಗಳ ಪ್ರಭಾವವನ್ನು) ಸಂಸ್ಕಾರ.

೩) ಪಶುತ್ವದಿಂದ ಅಂದರೆ ಪಾಶವಿಕ ವೃತ್ತಿಯಿಂದ ಮನುಷ್ಯತ್ವದ ಕಡೆಗೂ ಮತ್ತು ಮನುಷ್ಯತ್ವದಿಂದ ದೇವತ್ವದ ಕಡೆಗೆ ಒಯ್ಯುವ (ವೈದಿಕ ಕರ್ಮಗಳಿಗೆ) ವಿಧಾನಕ್ಕೆ ಸಂಸ್ಕಾರ ಎನ್ನುವರು.

ಸಂಸ್ಕಾರ ವಿಚಾರಗಳ ವಿವೇಚನೆ

ಮನುಷ್ಯ ಜೀವಿಗಳಿಗೆ (ದ್ವಿಜರಿಗೆ) ಈ ಪೂರ್ವ ಸಂಸ್ಕಾರಗಳು ಬೇಕೋ ಅಥವಾ ಬೇಡವೋ ಎನ್ನುವುದನ್ನು ನಾವು ವಿಚಾರಿಸಿಕೊಳ್ಳುವುದು ಬಹಳ ಒಳ್ಳೇದು. ಈ ವಿಚಾರದಲ್ಲಿ ನಮಗೆ ಯಥಾರ್ಥ ತಿಳುವಳಿಕೆ ಇಲ್ಲದ್ದರಿಂದ ನಾವು ನಾಸ್ತಿಕವಾದವನ್ನು ಸ್ವಲ್ಪ ಮಟ್ಟಿಗೆ ಅನುಸರಿಸುತ್ತಿದ್ದೇವೆ. ನಮ್ಮ ಪೂರ್ವಜರಾದ ಋಷಿ ಮುನಿಗಳು ಅವರಲ್ಲಿರುವ ಅಖಂಡ ಜ್ಞಾನ ಬಲದಿಂದಲೂ ಮತ್ತು ತಮ್ಮ ಆತ್ಮನಲ್ಲಿ ಪರಮಾತ್ಮನ ದರ್ಶನ ಮೂಲಕವಾಗಿಯೂ ನಮ್ಮೆಲ್ಲರಿಗೂ ಸಾಕಷ್ಟು ತಿಳುವಳಿಕೆಯನ್ನು ಕೊಟ್ಟಿರುತ್ತಾರೆ. ಆದ ಪ್ರಯುಕ್ತ ನಾವು ತಿಳಿದುಕೊಳ್ಳುವುದು ಅತ್ಯವಶ್ಯ.

(ನಂ. ೧) (೧) ದೋಷ ದೂರೀಕರಣ ಜೀವಾತ್ಮನಿಂದ ಈ ಮೊದಲು ಸಂಪಾದಿಸಿಕೊಂಡ ಸಮಸ್ತ ಪಾಪಗಳ ನಿವೃತ್ತಿ. (ಗುಣೋತ್ಪಾದನ ೨) ಸದಾಚಾರ - ಸದ್ಗುಣ- ಸತ್ಕರ್ಮ - ಸದ್ವಿದ್ಯಾ ವೇದೋಕ್ತ ಕರ್ಮಗಳ ಮೂಲಕ ಸಂಚಿತ ಪಾಪನಿವೃತ್ತಿಗಾಗಿ ಸಂಸ್ಕಾರಗಳ ಅವಶ್ಯಕತೆ ಇದೆ.

(ನಂ. ೨) ವಿವೇಚನೆ - ಈ ಕರ್ಮಭೂಮಿಯಲ್ಲಿ ಶರೀರವನ್ನು ಧರಿಸಿ ಜೀವಾತ್ಮನು ಹುಟ್ಟಿದಾಗ ಆ ಜೀವಾತ್ಮನಲ್ಲಿ ಪಾಪತ್ವ ಮೂಲಕವೇ ಸಜೀವ ಶರೀರವು ಉತ್ಪನ್ನವಾಗುತ್ತದೆ. ಯಾಕೆಂದರೆ ಪಾಪತ್ವವಿಲ್ಲವಾದರೆ ಕರ್ಮಭೂಮಿಯಲ್ಲಿ ಹುಟ್ಟುವುದೇ ಇಲ್ಲ. ವೇದದಲ್ಲಿ

ನಸಪುನರಾವರ್ತತೇ ಅತ್ಯಂತ ಶ್ರೇಷ್ಠ ಪುಣ್ಯ ಜೀವಿಗಳು ಈ ಕರ್ಮ ಭೂಮಿಯಲ್ಲಿ ಪುನಃ ಹುಟ್ಟುವುದಿಲ್ಲ. (ಅಮೃತತ್ವ ಪ್ರಾಪ್ತಿ) ಉದಾಹರಣೆ ಧಾನ್ಯಗಳನ್ನು ಭೂಮಿಯಲ್ಲಿ ಬಿತ್ತಿದಾಗ ಅವು ಹುಟ್ಟುತ್ತವೆ. ಅದರ ಆವರಣವನ್ನು ತೆಗೆದಾಗ ಹುಟ್ಟುವುದಿಲ್ಲ. (ಮೇಲಿನ ಹೊದಿಕೆ) ವೇದದಲ್ಲಿ ಇದಕ್ಕೆ ಆವರಣವೆನ್ನುತ್ತಾರೆ. ಅಂತೆಯೇ ನಮ್ಮಲ್ಲಿ ಪಾಪದ ಹೊದಿಕೆ ಇದ್ದರೆ ಅದು ಪುನಃ ಹುಟ್ಟುತ್ತದೆ. ಇವುಗಳ ಪರಿಹಾರಕ್ಕೆ ಸಂಸ್ಕಾರಗಳು ಅತ್ಯವಶ್ಯ. **"ಗಾರ್ಭೈಃ ಹೋಮೈಃ ಜಾತಕರ್ಮ ಚೌಲ ಮೌಂಜೀ ನಿಬಂಧನೈಃ ॥ ಬೈಜಿಕಂ ಗಾರ್ಭಿಕಂ ಚೈನೋ ದ್ವಿಜಾನಾಮಪಮೃಜ್ಯತೇ ॥"**

ಜಾತಕರ್ಮ ಚೌಲೋಪನಯನಾದಿ ಕರ್ಮಗಳಿಗೆ ಸಂಬಂಧಪಟ್ಟ ಹೋಮಗಳು ಗಾರ್ಭಿಗಳು ಅಂದರೆ ಗರ್ಭವಾಸದಲ್ಲಿ ಅಶುಚಿಯಾದ ಸ್ಥಿತಿಗಳಲ್ಲಿ ವಾಸಮಾಡುವುದರಿಂದ ಉಂಟಾದ ಪಾಪಗಳನ್ನು ನಿವೃತ್ತಿ ಮಾಡುತ್ತದೆ. (ಬೈಜಿಕಂ) ಶುಕ್ಲಶೋಣಿತ ಇವಕ್ಕೆ ಸಂಬಂಧಪಟ್ಟ ಪುರುಷನ ರೇತಸ್ಸು (ವೀರ್ಯ) ಸ್ತ್ರೀಯರ ರಕ್ತರೇತಸ್ಸು(ವೀರ್ಯ) ಇವುಗಳ ಕೂಡುವಿಕೆಯಿಂದ ಉಂಟಾದ ದೋಷಗಳ ನಿವೃತ್ತಿಗೆ ಈ ಸಂಸ್ಕಾರಗಳು ಬಹುಮುಖ್ಯ. (ಋತುಕಾಲಗಳಲ್ಲಿ ಕೂಡುವಿಕೆ - **"ಏವಮೇವ ಶ್ಯಮಂಯಾತಿ ಬೀಜಗರ್ಭಸಮುದ್ಭವಮ್"** ಅಂದರೆ ಬೀಜ ಮತ್ತು ಗರ್ಭ ಇವಕ್ಕೆ ಸಂಬಂಧಪಟ್ಟ ಪಾಪಗಳು ಜಾತಕರ್ಮಾದಿಗಳಿಂದ (ಸಂಸ್ಕಾರ) ನಿವೃತ್ತಿಯಾಗುತ್ತದೆ. **"ದ್ವಿವಿಧ ಏವ ಸಂಸ್ಕಾರೋಭವತಿ। ಬ್ರಾಹ್ಮೋ ದೈವಶ್ಚ॥ ಗರ್ಭಾಧಾನಾದಿ ಸ್ಮಾರ್ತ ಸಂಸ್ಕಾರೋ ಬ್ರಾಹ್ಮ।"** ಅಂದರೆ ಗರ್ಭಾದಾನಾದಿ ಸಂಸ್ಕಾರಗಳು (ದೈವ) ಪಾಕಯಜ್ಞಾದಿಗಳು ದೈವಗಳು ಅಗ್ನಿಯ ಮೂಲಕ ನಮ್ಮಲ್ಲಿರುವ ಜೀವಾತ್ಮನಿಗೆ ಮಂತ್ರಪುರಸ್ಸರವಾಗಿ ಹವನೀಯ ದ್ರವ್ಯಗಳಿಂದ ಹವನಿಸಿದಾಗ ಜೀವಾತ್ಮನನ್ನು ಪಾಪಮುಕ್ತನನ್ನಾಗಿ ಮಾಡುತ್ತದೆ. ಉದಾಹರಣೆ- ಖನಿಯಿಂದ ತೆಗೆದ ಬಂಗಾರವು ಶೋಭಾಯಮಾನವಾಗುವುದಿಲ್ಲ. ಅಗ್ನಿಯ ಮೂಲಕ ಪುಟ ಹಾಕಿದಾಗ ಅದು ಆಭರಣ ಮೂಲಕ ಧಾರಣ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅಂತೆಯೇ ಜೀವಾತ್ಮನೂ ಅಗ್ನಿ ಮೂಲಕ ಪುಟ ಹಾಕಿದಾಗ (ಹವನೀಯ ದ್ರವ್ಯಗಳಿಂದ ಮಂತ್ರಪುರಸ್ಸರವಾಗಿ ಆಹುತಿ ಕೊಟ್ಟಾಗ) ಈ ಸಂಸ್ಕಾರಗಳು ಜೀವಾತ್ಮನಲ್ಲಿರುವ ಸಕಲ ದೋಷಗಳನ್ನೂ (ಪಾಪ) ನಿವೃತ್ತಿ ಮಾಡಿ ಜೀವಾತ್ಮನನ್ನು ಉನ್ನತಿಗೆ ಒಯ್ಯುತ್ತದೆ. ಪಶುತ್ವದಿಂದ ಮನುಷ್ಯತ್ವದ ಕಡೆಗೂ ಮತ್ತು ಮನುಷ್ಯತ್ವದಿಂದ ದೇವತ್ವದ ಕಡೆಗೆ ಒಯ್ಯುವ ವಿಧಾನಕ್ಕೆ ಸಂಸ್ಕಾರ ಎನ್ನುವರು (ವಿವೇಚನೆ)

೧) ಪಶುತ್ವ - ಪಾಶವಿಕ ವೃತ್ತಿ - ಕೊಲೆ, ಸುಲಿಗೆ, ಅತ್ಯಾಚಾರ, ದುರ್ಜನರ ಸಹವಾಸ, ಅವಿವೇಕತೆ ಈ ಮೊದಲಾದವುಗಳಿಂದ ಜೀವಾತ್ಮನನ್ನು ಮನುಷ್ಯತ್ವಕ್ಕೆ ಸುಸಂಸ್ಕಾರದ ಮೂಲಕ ತರುವುದು.

೨) ಮನುಷ್ಯತ್ವ - ಶ್ರೇಷ್ಠ ಜ್ಞಾನಿಗಳ ಆಶ್ರಯದಲ್ಲಿದ್ದು, ವೇದಾಧ್ಯಯನ ವೇದೋಕ್ತ ಕರ್ಮಾನುಷ್ಠಾನ ಇವು ಮನುಷ್ಯತ್ವದ ಲಕ್ಷಣಗಳು. ಇವುಗಳ ಸಂಪಾದನೆಯ ಮೂಲಕ ಮನುಷ್ಯತ್ವವನ್ನು ಸಂಪಾದಿಸುವುದಕ್ಕೆ ಸುಸಂಸ್ಕಾರಗಳ ಅವಶ್ಯಕತೆ. ಇವುಗಳ ಮೂಲಕ ಜೀವಾತ್ಮನು ಪುನೀತನಾಗುತ್ತಾನೆ. (ದೇವತ್ವ) ವೇದಘೋಷ ಪುರಸ್ಸರವಾಗಿ ಹವನೀಯ ದ್ರವ್ಯಗಳ ಮೂಲಕ ಅಗ್ನಿಯಲ್ಲಿ ಹವನಿಸಿ ಜೀವಾತ್ಮನ ಉನ್ನತಿಗಾಗಿ ಅಂದರೆ ಅಭ್ಯುದಯ ನಿಶ್ರೇಯಸ ಸಿದ್ಧಿಗಾಗಿ ಆಚರಿಸುವ ಸಂಸ್ಕಾರ ಜೀವಾತ್ಮನು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಆಚರಿಸಲೇಬೇಕಾದ ಕರ್ಮಗಳು.

ಇವೆಲ್ಲಕ್ಕೂ ಒಳ್ಳೇ ಸಂಸ್ಕಾರಗಳೇ ಬೇಕು.
ಸ್ತ್ರೀ ಪುರುಷರೀರ್ವರ ರೇತಸ್ಸುಗಳಲ್ಲೂ ಚೈತನ್ಯ ಶಕ್ತಿ ಇರುವುದರಿಂದ ಗರ್ಭದಲ್ಲಿ ಪಿಂಡ
ಪೋಷಣೆ ವ್ಯವಸ್ಥಿತವಾಗಿ ಆಗುತ್ತ ಜ್ಞಾನೇಂದ್ರಿಯ ಕರ್ಮೇಂದ್ರಿಯ ಸಹಿತ ಹುಟ್ಟುತ್ತದೆ.
''ತದಿದಹಿರಣ್ಮಯ ಮಾಂಡಂ ಯಾವತ್ಸಂವತ್ಸರಸ್ಯ ವೇಲಾ ತಾವತ್ ಪರ್ಯಲ್ಪವತ ॥''
ಮನುಷ್ಯನು ಹುಟ್ಟುವ ಒಂದು ವರುಷ ಮೊದಲೇ ತಂದೆ ತಾಯಿಗಳ ಶರೀರದಲ್ಲಿ ಅವರ
ಹೊಟ್ಟೆಎಂಬ ವಿರಾಟ್ ಸಮುದ್ರದಲ್ಲಿ ಈಜುತ್ತಿರುತ್ತಾನೆ. (ವಿವರ) ನಾವು ತಿನ್ನುವ ಅನ್ನದಿಂದ ರಕ್ತ,
ರಕ್ತದಿಂದ ರೇತಸ್ಸು (ವೀರ್ಯ) ತಯಾರಾಗಲಿಕ್ಕೆ ಮೂರು ತಿಂಗಳ ಕಾಲ ಬೇಕಾಗುತ್ತದೆ. ಇದು
ಪುರುಷ ಶರೀರದಲ್ಲಿ. ಸ್ತ್ರೀ ಶರೀರದ ಅರ್ಭದಲ್ಲಿ ರೇತಸ್ಸಿನ ಮೂಲಕ ಗರ್ಭಧಾರಣವಾಗುತ್ತದೆ.
ಒಂಭತ್ತು ತಿಂಗಳ ಕಾಲ ಸ್ತ್ರೀ ಗರ್ಭದಲ್ಲಿ ಶಿಶುವು ಬೆಳೆದು ಆಮೇಲೆ ಈ ಕರ್ಮ ಭೂಮಿಯಲ್ಲಿ
ಹುಟ್ಟುತ್ತದೆ. ಪುರುಷ ಶರೀರದಲ್ಲಿ ಮೂರು ತಿಂಗಳ, ಸ್ತ್ರೀ ಶರೀರದಲ್ಲಿ ಒಂಭತ್ತು ತಿಂಗಳ ಈ ಪ್ರಕಾರ
ಒಂದು ವರ್ಷ ಕಾಲಾವಕಾಶ ಬೇಕಾಗುತ್ತದೆ.

ಆಕಾಶಾದ್ವಾಯುಃ- ಆಕಾಶದಿಂದ ಗಾಳಿ, **ವಾಯೋರಗ್ನಿಃ** - ಗಾಳಿಯಿಂದ ಅಗ್ನಿ, **ಅಗ್ನೇರಾಪಃ**
- ಅಗ್ನಿಯಿಂದ ಜಲ, **ಅದ್ಭಃಪೃಥಿವೀ** - ಜಲ ಮೂಲಕ ಭೂಮಿ, **ಪೃಥಿವ್ಯಾ ಓಷಧಯಃ** - ಭೂಮಿಯಿಂದ
ವನಸ್ಪತಿಗಳು, **ಓಷಧೀಭ್ಯೋನ್ನಮ್** - ವನಸ್ಪತಿಗಳಿಂದ ಅನ್ನ, **ಅನ್ನಾತ್ಪುರುಷಃ** - ಅನ್ನದಿಂದ ರೇತಸ್ಸು,
ಅನ್ನಾದ್ರೇತಃ - ಮನುಷ್ಯಾದಿ ಜೀವಿಗಳ ಉತ್ಪತ್ತಿ ಅನ್ನದಿಂದ (ಪಂಚಭೂತಗಳ ಸಹಾಯ ಅತ್ಯವಶ್ಯ)
ಭೂಮಿ, ನೀರು, ತೇಜಸ್ಸು, ಗಾಳಿ, ಆಕಾಶ ಇವೇ ಪಂಚಭೂತಗಳು. ಗರ್ಭೋತ್ಪತ್ತಿ ಆದ ನಂತರ
ಸ್ತ್ರೀ ಶರೀರದಲ್ಲಿ ಪಿಂಡವು (ಶರೀರವು) ಬೆಳೆಯುವ ಕ್ರಮಗಳು ಈ ರೀತಿ ಇವೆ.

॥ ಗರ್ಭೋಪನಿಷತ್ ॥

೧) **ಸಪ್ತರಾತ್ರೋಷಿತಂ ಬುದ್ಬುದಂ ಭವತಿ** - ಗರ್ಭಧಾರಣಾನಂತರ ಏಳನೇ ದಿವಸ ನೀರಿನ ಗುಳ್ಳೆಯಂತಾಗುತ್ತದೆ. ೨) **ಅರ್ಧಮಾಸಾಭ್ಯಂತರೇ ಪಿಂಡೋಭವತಿ** - ಹದಿನೈದು ದಿವಸಕ್ಕೆ ಪಿಂಡಾಕೃತಿ ಆಗುತ್ತದೆ. ೩) **ಮಾಸಾಭ್ಯಂತರೇ ಕಠಿಣೋ ಭವತಿ** - ಒಂದು ತಿಂಗಳಿಗೆ ಆ ಪಿಂಡವು ಗಟ್ಟಿಯಾಗುತ್ತದೆ. ೪) **ಮಾಸದ್ವಯೇನ ಶಿರಃ ಕುರುತೇ** - ಎರಡು ತಿಂಗಳಿಗೆ ಶರೀರದ ತಲೇ ಭಾಗವಾಗುತ್ತದೆ. ೫) **ಮಾಸತ್ರಯೇಣ ಪಾದಪ್ರದೇಶೋ ಭವತಿ** - ಮೂರು ತಿಂಗಳಿಗೆ ಕಾಲುಗಳು ಉತ್ಪನ್ನವಾಗುತ್ತವೆ. ೬) **ಚತುರ್ಥೇ ಮಾಸೇ ಗುಲ್ಫ- ಜಠರ - ಕಟಿ ಪ್ರದೇಶಾನಿ ಭವಂತಿ** - ನಾಲ್ಕು ತಿಂಗಳಿಗೆ ಪಾದದ ಸಂದು, ಮೊಳಕಾಲು, ಹೊಟ್ಟೆ, ಸೊಂಟ ಇವ್ವು ಉತ್ಪನ್ನವಾಗುತ್ತವೆ. ೭) **ಪಂಚಮೇ ಮಾಸೇ ಪೃಷ್ಠ ವಂಶಾಧಿಕಂ ಭವತಿ** - ಐದು ತಿಂಗಳಿಗೆ ಬೆನ್ನು ಮೂಳೇ ಪೃಷ್ಠಭಾಗ ಉತ್ಪನ್ನವಾಗುತ್ತವೆ. ೮) **ಷಷ್ಠೇ ಮಾಸೇ ಮುಖ ನಾಸಿಕಾಕ್ಷಿ ಶ್ರೋತ್ರಾಣಿ ಭವಂತಿ** - ಆರು ತಿಂಗಳಿಗೆ ಮುಖ, ಬಾಯಿ, ಮೂಗು, ಕಣ್ಣು, ಕಿವಿಗಳು ಉತ್ಪನ್ನವಾಗುತ್ತವೆ. ೧೦) **ಸಪ್ತಮೇ ಮಾಸೇ ಜೀವೇನ ಸಂಮುಕ್ತೋ ಭವತಿ** - ಏಳನೇ ತಿಂಗಳಲ್ಲಿ ಜೀವದಿಂದ ಕೂಡಿದ್ದಾಗಿ ಚಲನಶಕ್ತಿ ಉಂಟಾಗುತ್ತದೆ. ೧೧) **ಅಷ್ಟಮೇ ಮಾಸೇ ಸರ್ವಲಕ್ಷಣ ಸಂಪನ್ನೋ ಭವತಿ** - ಎಂಟನೇ ತಿಂಗಳಲ್ಲಿ ಎಲ್ಲಾ ಲಕ್ಷಣಗಳಿಂದ ಕೂಡಿದ್ದಾಗುತ್ತದೆ. ೧೨) **ನವಮೇ ಮಾಸೇ ಸರ್ವ ಲಕ್ಷಣ ಜ್ಞಾನ ಕರಣ ಸಂಪೂರ್ಣೋಭವ** - ಒಂಭತ್ತು ತಿಂಗಳಲ್ಲಿ ಎಲ್ಲಾ ಲಕ್ಷಣಗಳೂ ಮತ್ತು ಜ್ಞಾನೇಂದ್ರಿಯ ಕರ್ಮೇಂದ್ರಿಯ ಜ್ಞಾನವಾಗುತ್ತದೆ. ಈ ರೀತಿಯಾಗಿ ತಾಯಿಯ ಗರ್ಭದಲ್ಲೇ ಶಿಶುವಿನ ಪೋಷಣೆ ಆಗುತ್ತದೆ.

ಪ್ರಾಣ ರಕ್ಷಣೆ ಎರಡು ಋಷಿಗಳು ನಮ್ಮ ಶರೀರದಲ್ಲೇ ಇರುತ್ತಾರೆ. ೧) **ಸ್ಫೂರ್ತಿ** - ಇವನು ಉತ್ಸಾಹವನ್ನುಂಟು ಮಾಡುತ್ತಾನೆ. ೨) **ಜಾಗೃತಿ** - ಸಾವಧಾನವಾಗಿ ಚೈತನ್ಯ ಶಕ್ತಿಯನ್ನು ಉಂಟುಮಾಡುತ್ತಾನೆ. ಈ ಎರಡೂ ಋಷಿಗಳು (ಶಕ್ತಿಗಳು) ಯಾವಾತನಲ್ಲಿ ಪ್ರಬಲವಾಗಿರುತ್ತವೆಯೋ ಅಷ್ಟು ಯೋಗ್ಯತಾವಂತನಾಗುತ್ತಾನೆ.

ಸಂಸ್ಕಾರಗಳ ವಿಚಾರ

ಜೀವಿಸಿಕೊಂಡಿರುವಾಗ ಮಾಡುವ ಸಂಸ್ಕಾರಕ್ಕೆ ಪೂರ್ವ ಸಂಸ್ಕಾರವೆಂದು , ಸತ್ತನಂತರ ಆಚರಿಸುವ ಸಂಸ್ಕಾರಕ್ಕೆ ಅಪರ ಸಂಸ್ಕಾರವೆನ್ನುವರು.

ಪೂರ್ವ ಸಂಸ್ಕಾರ ವಿಚಾರ (ಮನುಸ್ಮೃತಿ) : **''ಜನ್ಮನಾಜಾಯತೇ ಶೂದ್ರಃ ಸಂಸ್ಕಾರಾದ್ವಿಜ ಉಚ್ಯತೆ॥ ವೇದಾಭ್ಯಾಸೀ ಭವೇದ್ವಿಪ್ರಃ ಬ್ರಮ್ಹಜಾನಾತಿ ಬ್ರಾಮ್ಹಣಃ ॥''** ಪ್ರತಿಯೊಬ್ಬ ಮನುಷ್ಯನೂ ಹುಟ್ಟಿದಾಗ ಶೂದ್ರಾಚರಣೆ (ಅಶುಚಿ)ಯಲ್ಲಿರುತ್ತಾನೆ. ಆದ ಕಾರಣ ಸಂಸ್ಕಾರ ಮೂಲಕ ಶುದ್ಧನಾಗಿ ದ್ವಿಜನೆಂದು ಹೇಳಿಸಿಕೊಳ್ಳುತ್ತಾನೆ. ಅರ್ಥ ಜ್ಞಾನಪೂರ್ವಕ ವೇದಾಧ್ಯಯನ ಮತ್ತು ವೇದೋಕ್ತ ಕರ್ಮಗಳನ್ನಾಚರಿಸುತ್ತಿರುವ ಮೂಲಕ ವಿಪ್ರನೆಂದೆನಿಸಿಕೊಳ್ಳುತ್ತಾನೆ. ಬ್ರಮ್ಹ ಜ್ಞಾನ ಪಡಕೊಂಡಾಗ ಬ್ರಾಮ್ಹಣನೆಂದೆನಿಸಿಕೊಳ್ಳುತ್ತಾನೆ. (ಬ್ರಮ್ಹ ಎಂದರೆ ವೇದ) **''ವೇದಸ್ತತ್ತ್ವಂ ತಪೋಬ್ರಮ್ಹಬ್ರಮ್ಹಾವಿಪ್ರಃ ಪ್ರಜಾಪತಿಃ''** ವೇದಾಧ್ಯಯನ ವೇದೋಕ್ತ ಕರ್ಮಗಳಿಂದುಂಟಾದ ವರ್ಚಸ್ಸೇ ಬ್ರಮ್ಹವರ್ಚಸ್ಸು (ವಿಪ್ರ) ವಿ=ವಿಶೇಷ = ಪ್ರಾ = ಪ್ರಾಜ್ಞ ಶ್ರೇಷ್ಠ ಜ್ಞಾನಿಗೆ ವಿಪ್ರ ಎನ್ನುವರು. **''ಸರ್ವಜ್ಞಾನಮಯೋವೇದಃ''** ಶಂಕರ ಭಗವತ್ಪಾದರ ಉಕ್ತಿಗನುಸಾರವಾಗಿ ವೇದವು ಅಖಂಡ ಜ್ಞಾನಗಳ ಖನಿ. **''ಸಂಸ್ಕಾರೈಃ ಸಂಸ್ಕೃತಂಯದ್ಯನ್ಮೇಧ್ಯ ತದುತ್ತಮಂ ॥ ಅಸಂಸ್ಕೃತಂತು ಯಲ್ಲೋಕೇ ತದಮೇಧ್ಯಂ ಪ್ರಕೀರ್ತ್ಯತೇ॥''** ಯಾವುದು ಸಂಸ್ಕಾರ ಮೂಲಕ ಶುದ್ಧಗೊಳಿಸಲ್ಪಡುತ್ತದೆಯೋ ಅದು ಶ್ರೇಷ್ಠವೂ ಅತ್ಯಂತ ಪವಿತ್ರವೂ ಆದದ್ದಿರುತ್ತದೆ. ಯಾವುದು ಸಂಸ್ಕಾರವನ್ನು ಹೊಂದುವುದಿಲ್ಲವೋ ಅದು ಅಪವಿತ್ರವೆಂದು ಹೇಳಿಸಿಕೊಳ್ಳುತ್ತದೆ. ಸಂಸ್ಕಾರಗಳನ್ನು ಪಡಕೊಳ್ಳದವನು ಪಾಶವಿಕ ಆಚಾರ ವಿಚಾರ ಮೂಲಕ ಪತನ ಹೊಂದುತ್ತಾನೆ. (ಉದಾಹರಣೆ) ಖನಿಯಿಂದ ಬಂಗಾರ ತೆಗೆದಾಗ ಅದು ನಮಗೆ ಶೋಭಾಯಮಾನವಾಗಿ ಕಾಣುವುದಿಲ್ಲ. ಸುಪುಟವನ್ನು (ಅಗ್ನಿಮುಖ) ಕೊಡುವುದರಿಂದ ಅದು ಆಭರಣಕ್ಕೆ ಅನುಕೂಲವಾಗುತ್ತದೆ. ಮತ್ತು ಕಾಂತಿಯುತವಾಗುತ್ತದೆ. ಸಂಸ್ಕಾರ ಮೂಲಕ ಮನುಷ್ಯತ್ವದಿಂದ ದೇವತ್ವದ ಕಡೆಗೆ ತರುವ ಉದ್ದೇಶದಿಂದಲೇ ನಮ್ಮ ಪೂರ್ವಜರು ಸಂಸ್ಕಾರಗಳನ್ನು ವಿಧಿಸಿರುತ್ತಾರೆ. ಯಾವುದು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ್ದಿರುತ್ತದೆಯೋ ಅದೇ ವ್ಯಕ್ತಿಯ ಹಾಗೂ ವ್ಯಕ್ತಿತ್ವದ ಸಮುಚಿತ ರೂಪದಿಂದ ವಿಕಾಸ ಹೊಂದಿ ಅದರ ಪ್ರಯೋಜನದ ತುಲನೆ ಮಾಡಬೇಕಾಗುತ್ತದೆ. (ಉದಾ) ಯಾವ ಪ್ರಕಾರ ಚಿತ್ರ ಬಿಡಿಸುವ ಕರ್ಮದಲ್ಲಿ ಸಫಲತೆಯನ್ನು

ಅವಶ್ಯಕತೆ ಇರುತ್ತದೆಯೋ ಅಂತೆಯೇ ಬ್ರಾಮ್ಹಣತ್ವ ಸಂಪಾದಿಸುವುದಕ್ಕೋಸ್ಕರ ವಿವಿಧ ಬಣ್ಣಗಳ ಅವಶ್ಯಕತೆ ಇರುತ್ತದೆಯೋ ಅಂತೆಯೇ ಬ್ರಾಮ್ಹಣತ್ವ ಸಂಪಾದಿಸುವುದಕ್ಕೋಸ್ಕರ

ಅಥವಾ ಚಾರಿತ್ರ್ಯ ನಿರ್ಮಾಣವು ನಾನಾ ಶುಭ ಸಂಸ್ಕಾರಗಳ ಮೂಲಕ ಆಗುತ್ತದೆ. ಈ ಸಂಸ್ಕಾರವು ಜೀವನದ ಪ್ರತಿಯೊಂದು ಭಾಗಗಳನ್ನೂ ಪೂರ್ಣ ರೂಪದಿಂದ ವ್ಯಾಪಿಸಿ ಮನುಷ್ಯನ ವ್ಯಕ್ತಿತ್ವವನ್ನು ಜೀವನದ ಪ್ರತಿಯೊಂದು ಭಾಗಗಳನ್ನೂ ಪೂರ್ಣ ರೂಪದಿಂದ ವ್ಯಾಪಿಸಿ ಮನುಷ್ಯನ ವ್ಯಕ್ತಿತ್ವವನ್ನು ಅತ್ಯಂತ ಶ್ರೇಷ್ಠಮಾನವನನ್ನಾಗಿ ಮಾಡುತ್ತದೆ. ಮತ್ತು ಈ ಸಂಸ್ಕಾರಗಳು ಮಾನವನ ವಿಕಾಸಗೊಳಿಸಿ ಅತ್ಯಂತ ಶ್ರೇಷ್ಠಮಾನವನನ್ನಾಗಿ ಮಾಡುತ್ತದೆ. ಮತ್ತು ಆದರ್ಶ ಅಭ್ಯುದಯದ ನಿಃಶ್ರೇಯಸ ಸಿದ್ಧಿ ಪಡಕೊಳ್ಳಲು ಅನುಕೂಲವಾಗುತ್ತದೆ. ಮತ್ತು ಆದರ್ಶ ಮಾನವನಾಗುತ್ತಾನೆ.

ನೈತಿಕ ಪ್ರಯೋಜನ

ಕೆಲವು ಜನರು ಸಂಸ್ಕಾರ ಮತ್ತು ಸದಾಚಾರಗಳನ್ನು ಕೇವಲ ಡೊಂಗೆಂದು ತಿಳಿದು ಸ್ವೇಚ್ಛಾಚಾರಿಗಳಾಗಿ ವರ್ತಿಸುತ್ತಿರುತ್ತಾರೆ. ಆದರೆ ಈ ಸಂಸ್ಕಾರ ಹಾಗೂ ಸದಾಚಾರಗಳು ನಮ್ಮ ಪರಂಪರಾಗತವಾಗಿ ನಡೆದುಬಂದ ಸತ್ಯವಿವೇಚನೆ. ಈ ಮೂಲಕವೇ ನಮ್ಮ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು. ಸ್ವೇಚ್ಛಾಚಾರದಿಂದ ತಾನೂ ಪತನ ಹೊಂದಿ ಸಮಾಜವನ್ನೂ ಪತನಗೊಳಿಸಿ ಮನು ಸಮಾಜವನ್ನೇ ದುಃಖಕ್ಕೆ ಗುರಿ ಮಾಡುತ್ತಾನೆ. ಶ್ರೇಷ್ಠ ಜ್ಞಾನಿಗಳು ಒಳ್ಳೇ ಸಂಸ್ಕಾರ= ಸದಾಚಾರಗಳ ಮೂಲಕ ಪಕ್ವಾವಸ್ಥೆಗೆ ಬಂದು ತಮ್ಮ ದೃಢವಾದ ವಿಚಾರ ಹಾಗೂ ಸತ್ಕರ್ಮಾಚರಣೆಯ ಮೂಲಕ ಅಮೃತತ್ವವನ್ನು ಸಂಪಾದಿಸಿಕೊಂಡಿರುತ್ತಾರೆ. (ಮನುಸ್ಮೃತಿ)

ಸಾಂಸ್ಕೃತಿಕ ಪ್ರಯೋಜನ

''ವೈದಿಕೈಃ ಕರ್ಮಭಿಃ ಪುಣ್ಯೈಃ ನಿಷೇಕಾದಿ ದ್ವಿಜನ್ಮನಾಮ್ ॥
ಕಾರ್ಯಃ ಶರೀರ ಸಂಸ್ಕಾರಃ ಪಾವನಃ ಪ್ರೇತ್ಯಚೇಹ ಚ ॥''

ಅತ್ಯಂತ ಶ್ರೇಷ್ಠವಾದ ವೇದೋಕ್ತ ಕರ್ಮಗಳಿಂದ ಗರ್ಭಾಧಾನಾದಿ ಸಂಸ್ಕಾರಗಳನ್ನು ಮಾಡಬೇಕು. ಯಾಕೆಂದರೆ ಈ ಸಂಸ್ಕಾರಗಳು ಶರೀರ ಮನಸ್ಸು ಅಂತಃಕರಣಗಳನ್ನು ಪವಿತ್ರಗೊಳಿಸಿ ಐಹಿಕ ಅಭ್ಯುದಯವನ್ನೂ ಪಾರಮಾರ್ಥಿಕ ಸುಖಗಳನುಂಟುಮಾಡುತ್ತದೆ. ಮೊದಲು ಶರೀರ , ಎರಡನೇದು ಬುದ್ಧಿ, ಮೂರನೇದು ಅಂತಃಕರಣ ಇವುಗಳ ಶುದ್ಧೀಕರಣದಿಂದಾಗಿ ಅಮೃತತ್ವವನ್ನು ಸಂಪಾದಿಸಿಕೊಳ್ಳಲು ಸಾಧ್ಯ. (ಸಂಸ್ಕಾರಗಳಿಂದುಂಟಾಗುವ ಪ್ರಯೋಜನ) **''ಸಂಸ್ಕಾರೈಃ ಸಸ್ಕೃತಃ ಪೂರ್ವೇಃ ಉತ್ತರೈರನು ಸಂಸ್ಕೃತಃ ॥ ನಿತ್ಯಮಷ್ಟಗುಣೈ ರ್ಯುಕ್ತೋ ಬ್ರಾಮ್ಹಣೋ ಬ್ರಮ್ಹ ಲೌಕಿಕಃ॥''** ಪ್ರಾಚೀನ ಕಾಲದಿಂದಲೂ ನಡೆದು ಬಂದ ಸಂಸ್ಕಾರಗಳಿಂದ ಶುದ್ಧಿಕರಿಸಿ ಎಂಟು ಆತ್ಮಗಳಿಂದ ಕೂಡಿದ ವ್ಯಕ್ತಿಯು ಸದ್ಗುಣ ಮತು ಸತ್ಕರ್ಮಗಳ ಮೂಲಕ ಬ್ರಮ್ಹಲೋಕವನ್ನು ಪಡಕೊಳ್ಳುತ್ತಾನೆ. ಅವನು ಪುನಃ ಈ ಕರ್ಮ ಭೂಮಿಯಲ್ಲಿ ಹುಟ್ಟುವುದಿಲ್ಲ. ೧) ದಮ, ೨) ಕ್ಷಮಾ, ೩) ಅಸೂಯೆ ಇಲ್ಲದಿರುವಿಕೆ, ೪) ಶುಚಿತ್ವ, ೫) ಶಮಾ, ೬) ಉಚಿತ ವ್ಯವಹಾರ, ೭) ನಿರ್ಲೋಭಿ, ೮) ನಿರೀಹತ್ಯ.

ವೇದ : **''ಅಂಗಾದಂಗಾತ್ ಸಂಭವಸಿ ಹೃದಯಾದಧಿಜಾಯಸೇ ॥ ಆತ್ಮಾವೈ ಪುತ್ರನಾಮಾಸಿ ಸಜೀವ ಶರದಃ ಶತಮ್ ॥''** (ಪುತ್ರ) ಮಗನೇ (ತ್ವಂ) ನೀನು (ಅಂಗಾದಂಗಾತ್) ನಮ್ಮ ಪ್ರತ್ಯೇಕವಾದ ಅವಯವಗಳುಳ್ಳ ಶರೀರಗಳಿಂದ (ಸಂಭವಸಿ) ಹುಟ್ಟಿರುತ್ತಿ. (ಹೃದಯಾತ್ ಅಧಿಜಾಯಸೇ) ನಮ್ಮ ಅಂತಃಕರಣ ವಿಶೇಷಗಳಿಂದ ಮನಸ್ಸು ಹಾಗೂ ಬುದ್ಧಿ ಸಹಿತವಾಗಿ ಹುಟ್ಟಿರುತ್ತಿ. (ವೈ) ನಿಶ್ಚಯವಾಗಿ (ಆತ್ಮಾಪುತ್ರನಾಮಾಸಿ) ನಮ್ಮ ಜೀವವೇ ಪುತ್ರರೂಪವಾಗಿರುತ್ತದೆ. ಆದ ಕಾರಣ (ಸಜೀವ ಶರದಃ ಶತಂ) ಪುತ್ರರೂಪವಾದ ನಮ್ಮ ಜೀವವು ನೂರು ಶರತ್ಕಾಲಗಳವರೆಗೂ ಬದುಕಿರಲಿ. (ಭಾವ) ಎಲೈ ಮಗನೇ, ನೀನು ನಮ್ಮ ದಾಂಪತ್ಯ ಜೀವನದ ಪ್ರತ್ಯೇಕವಾದ ಅವಯವಗಳುಳ್ಳ ಶರೀರಗಳಿಂದ ಹುಟ್ಟಿರುತ್ತಿ ಮತ್ತು ನಮ್ಮ ಅಂತಃಕರಣ ವಿಶೇಷದಿಂದ ಮನಸ್ಸು ಹಾಗೂ ಬುದ್ಧಿ ಸಹಿತ ಹುಟ್ಟಿರುತ್ತೀ ನಿಶ್ಚಯವಾಗಿ ನಮ್ಮ ಜೀವವೇ ಪುತ್ರರೂಪದಿಂದಿರುತ್ತದೆ. ಪುತ್ರರೂಪವಾದ ನಮ್ಮ ಜೀವವು ನೂರು ಶರತ್ಕಾಲಗಳವರೆಗೂ ಆರೋಗ್ಯದಿಂದ ಬಾಳಲಿ. ಆ ಚಂದ್ರಾರ್ಕವಾಗಿ ಬಾಳಲಿ. **''ಯೇಷಾಮಾತ್ಮನಿ ಗರ್ಭ ಸಂಸ್ಕೃತಿ ಮುಖ್ಯೈಃ ಮೌಂಜೀನಿಬಂಧಾತಿಮ್ಯೈಃ ಪೂತ್ಯೈಃ ಕರ್ಮಭಿರತ್ರಭಾತಿ ವಿಧಿವದ್ಬ್ರಮ್ಹ ಪ್ರತಿಷ್ಠಾಪಿತಮ್ ॥ ಶ್ರೌತಸ್ಮಾರ್ತ ಸಮಸ್ತಕರ್ಮ ಸತತಾನುಷ್ಠಾನ ನಿಷ್ಠಾತ್ಮನಃ ತಾನೇತಾನ್ ಪ್ರಣಮಾಮಿ ಭೂಮಿವಿಬುಧಾ ನಿಷ್ಟಾರ್ಥಕಲ್ಪದ್ರುಮಾನ್ ॥''** (ಯೇಷಾಂ) ಯಾರ (ಆತ್ಮನಿ) ನಮ್ಮ ನಿಮ್ಮ ಆತ್ಮನಲ್ಲಿ (ವಿಧಿವತ್) ವಿಧ್ಯುಕ್ತವಾಗಿ (ಬ್ರಮ್ಹಪ್ರತಿಷ್ಠಾಪಿತಂ) ಬ್ರಮ್ಹಜ್ಞಾನವನ್ನು ಪ್ರತಿಷ್ಠಾಪನೆ ಮಾಡಿರುತ್ತಾರೋ ಅದು (ಗರ್ಭಸಂಸ್ಕೃತಿ ಮುಖ್ಯೈಃ) ಗರ್ಭವಾಸದಿಂದಲೂ ಸಂಸ್ಕಾರದಿಂದ ಕೂಡಿದ್ದಿರುತ್ತದೆ. (ಮೌಂಜೀನಿಬಂಧಾಂತಿವೈಃ) ಮೌಂಜೀಬಂಧನವೇ ಮುಖ್ಯ ಸಂಸ್ಕಾರದಿಂದ ಕೂಡಿರುವುದರಿಂದ (ವಿಧಿವತ್) ವಿಧಿಪೂರ್ವಕವಾಗಿ (ಪೂತ್ಯೈಃ ಕರ್ಮಭಿಃ ಅತ್ರಭಾತಿ) ಪವಿತ್ರವಾದ ಕರ್ಮಗಳಿಂದ ಇಲ್ಲಿ ಪ್ರತಿಭೆಯನ್ನುಂಟು ಮಾಡುತ್ತದೆ. **''ಶ್ರೌತಸ್ಮಾರ್ತ ಸಮಸ್ತಕರ್ಮ ಸತತಾನುಷ್ಠಾನ ನಿತ್ಯಾತ್ಮನಃ''** ವೇದೋಕ್ತ ಹಾಗೂ ಸ್ಮೃತ್ಯುಕ್ತ ಎಲ್ಲಾ ಕರ್ಮಗಳನ್ನು ಸತತವಾಗಿ ನಿಷ್ಠೆಯಿಂದ ಅನುಷ್ಠಾನ ಮಾಡುವ **''ತಾನೇ ತಾನ್ ಭೂಮಿವಿಬುಧಾನ್ ಪ್ರಣಮಾಮಿ''** ಈ ಎಲ್ಲಾ ಭೂಸುರರನ್ನು (ಜ್ಞಾನಿಗಳನ್ನು) ನಮಸ್ಕರಿಸುತ್ತೇನೆ. (ಇಷ್ಟಾರ್ಥ ಕಲ್ಪದ್ರುಮಾನ್) ನಮ್ಮ ಎಲ್ಲಾ ಸಕಲ ಸದಭೀಷ್ಟ ಫಲಗಳನ್ನು ಕೊಡುವಂತಹದಿರುತ್ತದೆ. (ಭಾವ) ಯಾರು ನಮ್ಮ ನಿಮ್ಮ ಆತ್ಮನಲ್ಲಿ ಸಂಸ್ಕಾರಪೂರ್ವಕ ವಿಧಿವತ್ತಾಗಿ ಬ್ರಮ್ಹಜ್ಞಾನವನ್ನು ಪ್ರತಿಷ್ಠಾಪನೆ ಮಾಡಿರುತ್ತಾರೋ ಅದು ಗರ್ಭವಾಸದಿಂದಲೂ ಸಂಸ್ಕಾರದಿಂದ ಕೂಡಿದ್ದಿರುತ್ತದೆ. ಉಪನಯನ ಸಂಸ್ಕಾರವೇ ಮುಖ್ಯ ಸಂಸ್ಕಾರದಿಂದ ಕೂಡಿರುವುದರಿಂದ ವಿಧಿಪೂರ್ವಕವಾಗಿ ಪರಿಶುದ್ಧವಾದ ಈ ಸಂಸ್ಕಾರವೇ ಪ್ರತಿಭೆಯನ್ನುಂಟು ಮಾಡುತ್ತದೆ. ಆದ ಕಾರಣ ವೇದೋಕ್ತ ಹಾಗೂ ಸ್ಮೃತ್ಯುಕ್ತ ಎಲ್ಲಾ ಕರ್ಮಗಳನ್ನು ನಿಷ್ಠೆಯಿಂದ ಅನುಷ್ಠಾನ ಮಾಡುವ ಎಲ್ಲಾ ಭೂದೇವತೆಗಳಿಗೂ (ಬ್ರಾಮ್ಹಣರಿಗೂ) ನಮಸ್ಕಾರ ಮಾಡುತ್ತೇನೆ. ಯಾಕೆಂದರೆ ಈ ಎಲ್ಲಾ ಸತ್ಕರ್ಮಗಳೂ ನಮ್ಮ ಸಕಲ ಮನೋರಥಗಳನ್ನು ಕಲ್ಪವೃಕ್ಷದಂತೆ (ಫಲ ಕೊಡುತ್ತದೆ) ಈಡೇರಿಸಿಕೊಡುತ್ತವೆ.

೧) ಗರ್ಭಾಧಾನ ಸಂಸ್ಕಾರ

ಗರ್ಭಾಧಾನ ಹೋಮದಲ್ಲಿ ಬರುವ ಮಂತ್ರಗಳು - **''ಯಸ್ತ್ವಾಹೃದಾ ಕೀರಿಣಾ ಮನ್ಯಮಾನೋऽಮರ್ತ್ಯಂಮರ್ತ್ಯೋಜೋಹವೀಮಿ ॥ ಜಾತವೇದೋ ಯಶೋ ಅಸ್ಮಾಸುಧೇಹಿ**

ಪ್ರಜಾಭಿರಗ್ನೇ ಅಮೃತತ್ವಮಶ್ಯಾಮ್ ॥ " (ಯಃ ಮರ್ತ್ಯಃ) ಯಾವ ಮರಣಶೀಲನಾದ ನಾನು (ಅಮರ್ತ್ಯಂತ್ವಾಂ) ಅಮರನಾದ ನಿನ್ನಲ್ಲಿ (ಕೀರಿಣಾ ಹೃದಾ ಮನ್ಯಮಾನಃ) ಆನಂದದಿಂದ ಕೂಡಿದ ಅಂತಃಕರಣಪೂರ್ವಕವಾಗಿ ಸ್ತೋತ್ರಮಾಡುತ್ತಾ (ಜೋಹವೀಮಿ) ಆಹ್ವಾನಿಸುತ್ತೇನೆ. ಅಂದರೆ ಕರೆಯುತ್ತೇನೆ. (ಹೇ ಜಾತವೇದಃ) ಸರ್ವಜ್ಞನಾದ ಅಗ್ನಿ ದೇವನೇ (ಅಸ್ಮಾಸು ಯಶಃ ಧೇಹಿ) ನಮ್ಮಲ್ಲಿ ಕೀರ್ತಿಯನ್ನು ಉಂಟು ಮಾಡು (ಸ್ಥಾಪಿಸು) (ಅಗ್ನೇ) ತೇಜೋಮಯ ದೇವನೇ (ಪ್ರಜಾಭಿಃ) ಮಕ್ಕಳನ್ನು ಪಡೆದವರಾಗಿ (ಅಮೃತತ್ವಂ ಅಶ್ಯಾಂ) ನಾವು ಅಮೃತತ್ವವನ್ನು ಪಡಕೊಳ್ಳುವೆವು. (ಭಾವ) ವಿಶ್ವೋತ್ಪಾದಕನೂ ವಿಶ್ವ ಸಂರಕ್ಷಕನೂ ಅಖಂಡ ಪ್ರಕಾಶಮಯನೂ ಆದ ಜಗದೀಶ್ವರನೇ ಮರಣ ಧರ್ಮವುಳ್ಳ ನಾನು ಅಮರನಾದ ನಿನ್ನಲ್ಲಿ ಆನಂದ ಹೃದಯದಿಂದ ಸ್ತೋತ್ರ ಮಾಡುತ್ತೇನೆ. ಸರ್ವಜ್ಞನಾದ ನೀನು ಅತ್ಯಂತ ಶ್ರೇಷ್ಠವಾದ ಜ್ಞಾನವನ್ನೂ ಸುಪುತ್ರರನ್ನೂ ಮತ್ತು ಕೀರ್ತಿಯನ್ನೂ ಕೊಡು. ನಿನ್ನ ಅನುಗ್ರಹದಿಂದ ಸುಪುತ್ರರನ್ನು ಪಡೆದ ನಾವು ಅಮೃತತ್ವವನ್ನು ಪಡಕೊಳ್ಳುತ್ತೇವೆ. ನಿನ್ನ ಆಶೀರ್ವಾದದ ಮೂಲಕ ನಮ್ಮ ಪರಂಪರಾಗತವಾಗಿ ಬಂದ ವೇದಾಧ್ಯಯನ ವೇದೋಕ್ತ ಕರ್ಮಗಳು ಅವ್ಯಾಹತವಾಗಿ ನಡೆಯುತ್ತಿರುವ ಮೂಲಕ ನಾವು ಶಾಶ್ವತ ಕೀರ್ತಿಯನ್ನೂ ಸಂಪಾದಿಸಿ ನಮ್ಮ ಮನುಷ್ಯ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳುತ್ತೇವೆ.

ಮಗುವಿನ ತಾಯಿಗೆ ಈ ಮೊದಲು ಗರ್ಭಾಧಾನ ಸಂಸ್ಕಾರವನ್ನು ವಿಧ್ಯುಕ್ತವಾಗಿ ಮಾಡಿರುತ್ತಾರೆ. ಇದು ಕ್ಷೇತ್ರ ಸಂಸ್ಕಾರ. ಶ್ರೇಷ್ಠ ಜ್ಞಾನವಂತ ಪ್ರಜೆಗಳನ್ನು ಸಂಪಾದಿಸಿಕೊಳ್ಳುವುದಕ್ಕೋಸ್ಕರ ಕ್ಷೇತ್ರ ಶುದ್ಧಿ, ಉದಾ- ನಾವು ಕೃಷಿಯನ್ನು ಮಾಡುವಾಗ ಮೊದಲು ಭೂಮಿಯನ್ನು ಶುದ್ಧಗೊಳಿಸುತ್ತೇವೆ. ಅನಂತರ ಶುದ್ಧವಾದ ಬೀಜವನ್ನು ಜಮೀನಿನಲ್ಲಿ ಬಿತ್ತುತ್ತೇವೆ. ಈ ಮೂಲಕ ಉತ್ತಮ ಫಸಲನ್ನು ಪಡೆಯುತ್ತೇವೆ. ಗರ್ಭಾಧಾನಾದಿ ದಶಸಂಸ್ಕಾರದ ಸಂಕಲ್ಪದಲ್ಲಿ **"ಮಮಕುಮಾರಕಸ್ಯ ಬೀಜಗರ್ಭಸಮುದ್ಭವೇನೋನಿಬರ್ಹಣ ಪುರಸ್ಸರಮಾಯುಶ್ರೀ ಬಲವೃದ್ಧಿದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಗರ್ಭಾಧಾನಪುಂಸವನ ಸೀಮಂತ ವಿಷ್ಣು ಬಲಿ ಜಾತಕರ್ಮನಾಮಕರಣ ಉಪನಿಷ್ಕ್ರಮಣ ಅನ್ನಪ್ರಾಶನ ಕರ್ಣವೇಧನ ಚೌಲಸಂಸ್ಕಾರ ಹೋಮಾನ್ ಮುಖ್ಯಕಾಲಾತಿಪತ್ತಿ ಪ್ರಾಯಶ್ಚಿತ = ಹೋಮಪೂರ್ವಕಂ ಸಮಾನತಂತ್ರೇಣ ಕರಿಷ್ಯೇ "** ಗರ್ಭವಾಸದಲ್ಲಿರುವ ಶಿಶುವಿಗೆ ಅಗ್ನಿ ಪುರಸ್ಸರವಾಗಿ ಆಚರಿಸುವ ಸಂಸ್ಕಾರವೇ ಗರ್ಭಾಧಾನ ಸಂಸ್ಕಾರ.

"ಪ್ರಜಯಾಗ್ನೇಮೃತ ತತ್ವಮಶ್ಯಾಮ್ ॥ ಪ್ರಜಾಭಿರನ್ನೇ ಅಮೃತತ್ವಮಶ್ಯಾಮ್ ॥ ಪ್ರಜಯಾಹಿ ಮನುಷ್ಯಃ ಪೂರ್ಣಃ ಸುಪ್ರಜಾಸ್ತಮಾಶಾಸ್ಸ್ರೇ ॥" ಸುಪ್ರಜೆಗಳನ್ನು ಪಡೆದು ಋಷಿ ಪರಂಪರೆಯನ್ನು ಕಾದುಕೊಳ್ಳಬೇಕು.

"ಯಸ್ಮೈ ತ್ವಂ ಸುಕೃತೇ ಜಾತವೇದ ಉಲೋಕಮಗ್ನೇ ಕೃಣವಸ್ಯೋನಮ್ ॥ ಅಶ್ವಿನಂ ಸಪುತ್ರಿಣಂ ವೀರವಂತಂ ಗೋಮಂತಂ ರಯಿಂ ನಶತೇ ಸ್ವಸ್ತಿ ॥" "ಹೇ ಜಾತ ವೇದಃ" ಸರ್ವಜ್ಞನಾದ ದೇವನೇ (ತ್ವಂ) ನೀನು (ಯಸ್ಮೈ ಸುಕೃತೇ) ಶ್ರೇಷ್ಠ ಕರ್ಮಗಳನ್ನಾಚರಿಸುವ ಉಪಾಸಕರಿಗೋಸ್ಕರ (ಲೋಕಂ ಸ್ಯೋನಂ ಕೃಣವಃ) ಜಗತ್ತನ್ನು ಸುಖಕರವಾಗಿ ಸೃಷ್ಟಿಸಿರುತ್ತೀ (ಸಃ) ಆ ನೀನು (ಅಶ್ವಿನಂ ಪುತ್ರಿಣಂ ವೀರವಂತಂ) ಕುದುರೆಗಳಿಂದಲೂ ಮಕ್ಕಳಿಂದಲೂ ವೀರರಿಂದಲೂ (ಗೋಮಂತಂ ಸ್ವಸ್ತಿರಯಿಂ

ನಶತೇ) ಗೋವು ಮೊದಲಾದ ಎಲ್ಲಾ ವಿಧದ ಐಶ್ವರ್ಯಗಳನ್ನು ನಮಗೆ ಕೊಡು. (ಭಾವ) ಸರ್ವಜ್ಞನಾದ ಅಗ್ನಿ ದೇವನೇ ನೀನು ಶ್ರೇಷ್ಠಕರ್ಮಗಳನ್ನಾಚರಿಸುತ್ತಿರುವ ನಿನ್ನ ಪ್ರಿಯ ಭಕ್ತರಿಗೋಸ್ಕರ ಶಾಶ್ವತ ಸುಖಗಳನ್ನುಂಟು ಮಾಡುವಂತ ಅಮರ ಲೋಕವನ್ನು (ಮೋಕ್ಷ ಸ್ಥಾನವನ್ನು) ನಿರ್ಮಿಸಿರುತ್ತೀ. ಸಂಪತ್ತುಗಳ ಎಣಿಕೆಯಲ್ಲಿ ಬಂದಿರುವಂಥಾ ಕುದುರೆ , ಗೋವು, ಜ್ಞಾನವಂತ ಮಕ್ಕಳು, ವೀರ ಪುತ್ರರು, ಧನಕನಕಾದಿ ಎಲ್ಲಾ ವಿಧದ ಸಂಪತ್ತುಗಳನ್ನೂ ನಮಗೆ ಕೊಡು. ಮತ್ತು ನಮಗೆ ಕೊಟ್ಟ ಸಂಪತ್ತುಗಳನ್ನು ನಾಶವಾಗದಂತೆ ರಕ್ಷಿಸು. (ವಿವೇಚನೆ)

"ಆ ಚಂದ್ರಾರ್ಕ ವಂಶಾಭಿವೃದ್ಧಿರಸ್ತು" ಸೂರ್ಯ ಚಂದ್ರರಿರುವವರೆಗೂ (ಋಷಿ ಪರಂಪರೆ) ಜ್ಞಾನ ಜನಾಂಗದ ಅಭಿವೃದ್ಧಿಯಾಗುತ್ತಲೇ ಇರಬೇಕು. ದೇಶ ಕಲ್ಯಾಣಕ್ಕಾಗಿ ವೇದಾಧ್ಯಯನ ವೇದೋಕ್ತ ಕರ್ಮಗಳು ನಿರಂತರ ನಡೆಯುತ್ತಿರಬೇಕು. ಜ್ಞಾನಿಗಳಿಲ್ಲದ ರಾಷ್ಟ್ರ ಬಲಹೀನ ರಾಷ್ಟ್ರ ಎಂದು ಹೇಳಲ್ಪಡುತ್ತದೆ. **"ಧನಂ ಧಾನ್ಯಂ ಪಶು ಬಹುಪುತ್ರಲಾಭ ಶತಸಂ ವತ್ಸರಂ ದೀರ್ಘಮಾಯುಃ॥ ದಶಾಸ್ಯಾಂ ಪುತ್ರಾನಾ ಧೇಹಿ ಪತಿಮೇಕಾದಶಂಕೃಧಿ।"** ವಿವಾಹ ಹೋಮದಲ್ಲಿ ಬರುವ ಮಂತ್ರ.

ಶಾಸ್ತ್ರೋಕ್ತಿಯ ಪ್ರಕಾರ **"ಸಮೇಷು ಪುತ್ರಃ ವಿಷಮೇಷು ಕನ್ಯಾ ॥"** ಋತುಮತಿಯಾದ ನಂತರ ಸಮ ದಿವಸಗಳಲ್ಲಿ ಗರ್ಭಧಾರಣೆಯಾದರೆ ಪುತ್ರ ಜನನ, ವಿಷಮ ದಿವಸದಲ್ಲಿ ಗರ್ಭೋತ್ಪತ್ತಿಯಾದರೆ ಪುತ್ರಿಯ ಜನ್ಮ. ಗರ್ಭಧಾರಣಾನಂತರ ಎರಡು ಅಥವಾ ಮೂರು ತಿಂಗಳಲ್ಲಿ ಗರ್ಭ ರಕ್ಷಣೆ ಮತ್ತು ಅದರ ವಿಕಾಸಕ್ಕಾಗಿ ಆಚರಿಸುವ ವಿಧಾನವೇ ಪುಂಸವನ ಸಂಸ್ಕಾರ.

೨) ಸೀಮಂತ ಸಂಸ್ಕಾರ

ನಾಲ್ಕು ತಿಂಗಳಿಗೆ ಗರ್ಭಿಣೀ ಸ್ತ್ರೀಯರ ಆರೋಗ್ಯ ಮತ್ತು ಮನಸ್ಸನ್ನು ಸಂತುಷ್ಟವಾಗಿಸುವುದಕ್ಕೋಸ್ಕರ ಹಾಗೂ ಗರ್ಭ ರಕ್ಷಣೆ ಉತ್ತಮವಾಗಿ ಪಿಂಡದ ಪೋಷಣೆ ಆಗುವ ಉದ್ದೇಶದಿಂದ ಈ ಸಂಸ್ಕಾರವನ್ನು ಆಚರಿಸಬೇಕು.

೩) ವಿಷ್ಣು ಬಲಿ

ವಿಷ್ಣುವಿನ ಅನುಗ್ರಹದಿಂದ ಸುಪ್ರಜೆಗಳನ್ನು ಪಡಕೊಂಡು ನಮ್ಮ ಋಷಿ ಪರಂಪರೆಯು ಶಾಶ್ವತವಾಗಿ ಉಳಿಸಿಕೊಳ್ಳುವ ಉದ್ದೇಶದಿಂದ ಹಾಗೂ ವಿಶ್ವ ಕಲ್ಯಾಣಕ್ಕಾಗಿ ವೇದಾಧ್ಯಯನ ವೇದೋಕ್ತ ಕರ್ಮಗಳು ನಿರಂತರ ನಡೆಯುತ್ತಿರಬೇಕೆನ್ನುವ ಮಹದಾಕಾಂಕ್ಷೆಯಿಂದ ಈ ಸಂಸ್ಕಾರವನ್ನು ವಿಧಿಸಿರುತ್ತಾರೆ.

೪) ಜಾತಕರ್ಮ

ಶಿಶುವು ಜನಿಸಿದ ಮೇಲೆ ಶುದ್ಧ ಜಲದಿಂದ ಸ್ನಾನ ಮಾಡಿಸಿ, ಬಂಗಾರದ ಕಡ್ಡಿಯನ್ನು ಜೇನುತುಪ್ಪದಲ್ಲಿ ನೆನೆಸಿ ಆ ಶಿಶುವಿನ ನಾಲಗೆಯ ಮೇಲೆ ಓಂಕಾರವನ್ನು ಬರೆದು ಎರಡೂ ಕಿವಿಗಳಲ್ಲಿ "ವೇದೋಽಸಿ" ಎನ್ನುವ ವೇದವಾಕ್ಯವನ್ನು ಉಚ್ಚರಿಸಬೇಕು. ಇದರ ಉದ್ದೇಶ ಎಲ್ಲೈ

ಮಗುವೇ ನೀನು ವೇದ ವ್ರತವನ್ನು ಅಂದರೆ ವೈದಿಕ ಸ್ತುತಿಗಳ ಅನುಷ್ಠಾನ ಮಾಡುವುದಕ್ಕೋಸ್ಕರ ಋಷಿ ಪರಂಪರೆಯಲ್ಲಿ ಹುಟ್ಟಿರುತ್ತೀ. ವೇದಾಧ್ಯಯನ ವೇದೋಕ್ತ ಕರ್ಮಾನುಷ್ಠಾನ ಮೂಲಕ ಅರೋಗ್ಯವಂತನೂ, ಕೀರ್ತಿಶಾಲಿಯೂ ಆಗಿ ಬಾಳು . ಜ್ಞಾನಿಯೂ ವಿಜ್ಞಾನಿಯೂ ಆಗಬೇಕೆನ್ನುವ ಉದ್ದೇಶದಿಂದ ಈ ಸಂಸ್ಕಾರವನ್ನು ಇಟ್ಟಿರುತ್ತಾರೆ.

೭) ನಾಮಕರಣ

''ಯಥಾ ನಾಮ ತಥಾ ಗುಣಃ'' ಹೆಸರಿಗೆ ತಕ್ಕಂತೆ ಗುಣವಂತನೂ, ಕೀರ್ತಿಶಾಲಿಯೂ ಆಗಿ ಬಹುಕಾಲಗಳವರೆಗೂ ಬದುಕಬೇಕು.

ಈ ನಾಮಕರಣದಲ್ಲಿ ಒಂದು ರಹಸ್ಯವಿದೆ. ಮಗುವಿಗೆ ಹೆಸರಿಡುವಾಗ ಎಲ್ಲಾ ಜನರೂ ಕರೆಯಲಿಕ್ಕೆ ಒಂದು ಹೆಸರನ್ನು ಇಡುವುದಲ್ಲದೇ ತಾಯಿ ತಂದೆಯರು ಗುಪ್ತವಾಗಿ ಅಂದರೆ ಬೇರೆಯವರಿಗೆ ತಿಳಿಯದಂತೇ ಬೇರೇ ಹೆಸರನ್ನು ಇಟ್ಟುಕೊಳ್ಳಬೇಕು. ಯಾಕೆಂದರೆ ಹೆಸರು ಗುಪ್ತವಾಗಿದ್ದರೆ ಮಾಟ ಮೊದಲಾದ ಮಾರಣ ಕ್ರಿಯೆಗಳು ನಾಟುವುದಿಲ್ಲ. ''ಉಪನಿಷ್ಕ್ರಮಣಂ'' ಉಪ = ಸಮೀಪ = ನಿಶ್ಕ್ರಮಣಂ = ಹೊರಡುವುದು. ಶಿಶುವಿಗೆ ನಾಲ್ಕು ತಿಂಗಳು ಕಳೆದ ಮೇಲೆ ಪರಿಶುದ್ಧ ವಾತಾವರಣಕ್ಕೆ ಕರೆದುಕೊಂಡು ಹೋಗಬೇಕು. ಯಾಕೆಂದರೆ ಈ ಮೂಲಕ ಶಿಶುವಿಗೆ ಆರೋಗ್ಯ - ಬುದ್ಧಿವಿಕಾಸವು ಅಭಿವೃದ್ಧಿಯಾಗುತ್ತದೆ. ಶಾರೀರಿಕ, ಮಾನಸಿಕ ಬುದ್ಧಿ ಬೆಳವಣಿಗೆಯ ಮೂಲಕ ಶಿಶುವು ಪುಷ್ಟವಾಗಿ ಬೆಳೆದು ಮುಖದಲ್ಲಿ ಕಾಂತಿಯು ಲಭಿಸುತ್ತದೆ. ಈ ಉಪನಿಷ್ಕ್ರಮಣ ತಂತ್ರದಲ್ಲಿ ಒಂದು ಪ್ರಾರ್ಥನೆ ಇದೆ. **''ಚಂದ್ರಾರ್ಕಯೋರ್ದಿಗೀಶಾನಾಂ ದಿಶಾಂಚ ಗಗನಸ್ಯಚ ॥ ನಿಕ್ಷೇಪಾರ್ಥ ಮಹಂದದ್ಮೇತೆಮೇರಕ್ಷಂತು ಸರ್ವದಾ ॥ ಅಪ್ರಮತ್ತಂ ಪ್ರಮತ್ತಂ ವಾ ದಿವಾ ರಾತ್ರ ಮಥಾಪಿವಾ ॥ ರಕ್ಷಂತು ಸತತಂ ಸರ್ವೇ ದೇವಾಃ ಶಕ್ರಪುರೋಗಮಾಃ॥''** (ಭಾವ) ಚಂದ್ರ ಸೂರ್ಯರು ಈ ಭೂಮಾತೆಯು ಮತ್ತು ಎಲ್ಲಾ ದಿಕ್ಕುಗಳಲ್ಲೂ ವಾಸವಾಗಿರುವ ದೇವತೆಗಳೂ ಹಾಗೂ ಆಕಾಶ ಮಂಡಲ ಇಂದ್ರಾದಿ ಎಲ್ಲಾ ದೇವತೆಗಳೂ ನನ್ನ ಮಗುವು ಜಾಗೃತವಾಗಿರುವಾಗಿಯಾಗಿರಲೀ ಅಥವಾ ನಿದ್ರಿಸುತ್ತಿರುವಾಗಿಯಾಗಲೀ ಅಂದರೆ ಹಗಲೂ ರಾತ್ರಿ ಎಲ್ಲಾ ಸಮಯಗಳಲ್ಲಿಯೂ ಸಂರಕ್ಷಿಸಲಿ.

೮) ಅನ್ನಪ್ರಾಶನ

ಮಗುವು ಹುಟ್ಟಿ ಆರು ತಿಂಗಳಿಗೆ ಅನ್ನಪ್ರಾಶನ ಸಂಸ್ಕಾರ ಹೇಳಿದೆ. ತುಪ್ಪ =ಮೊಸರು =ಜೇನುತುಪ್ಪ ಇವುಗಳನ್ನು ಒಟ್ಟುಗೂಡಿಸಿ ಮಗುವಿಗೆ ಮಂತ್ರ ಪುರಸ್ಸರವಾಗಿ ಮಗುವಿನ ಬಾಯಿಗೆ ಹಾಕಬೇಕು. ಇದರಿಂದ ಶರೀರ , ಬುದ್ಧಿ , ಮನಸ್ಸು ಇವು ವಿಕಾಸ ಹೊಂದಿ ಶರೀರದ ಬೆಳವಣಿಗೆ ಚೆನ್ನಾಗಿ ಆಗುತ್ತದೆ.

೯) ಕರ್ಣವೇಧನ

ಮಗುವಿನ ಎರಡೂ ಕಿವಿಗಳನ್ನು ಬಂಗಾರದ ಕಡ್ಡಿಯಿಂದ ಸುಚ್ಚಿ ಬಂಗಾರವನ್ನು ಹಾಕಬೇಕು. ಯಾಕೆಂದರೆ ಬಂಗಾರದಂತೆ ಕಾಂತಿಯೂ, ಆರೋಗ್ಯವೂ ಅಭಿವೃದ್ಧಿಯಾಗಿ ದೀರ್ಘಜೀವಿಯಾಗಬೇಕೆನ್ನುವ ಉದ್ದೇಶ. ಬಂಗಾರ ಧಾರಣ ಮಾಡುವುದರಿಂದ ಅಂದರೆ ಬಂಗಾರದ ಮೇಲೆ ಬೀಳುವ ಸ್ನಾನದ ನೀರು ಆರೋಗ್ಯವನ್ನು ವೃದ್ಧಿಗೊಳಿಸುತ್ತದೆ.

೧೦) ಚೌಲ ಸಂಸ್ಕಾರ

ಚೂಡಾ ಸಂಸ್ಕಾರ, ಮುಂಡನ ಇವು ಹೆಸರುಗಳು. ಗರ್ಭದಲ್ಲಿ ಉತ್ಪನ್ನವಾದ ತಲೆ ಕೂದಲುಗಳನ್ನು ತೆಗೆದು ಅನಂತರ ಬಂದ ಕೂದಲುಗಳನ್ನು ಭದ್ರವಾಗಿಡಬೇಕು. ಯಾಕೆಂದರೆ ಗರ್ಭವಾಸದಲ್ಲಿರುವಾಗ ಉಂಟಾದ ತಲೆ ಕೂದಲುಗಳು ದೋಷದಿಂದ ಕೂಡಿದ್ದಿರುತ್ತದೆ. ಆದ ಕಾರಣ ಚೂಡಾ ಸಂಸ್ಕಾರವನ್ನು ಮಾಡಬೇಕು.

ಇವು ಒಟ್ಟೂ ದಶ ಸಂಸ್ಕಾರಗಳು.

೧೧) ಉಪನಯನ ಸಂಸ್ಕಾರ

''ಉಪಪೂರ್ವಕ ನೀಧಾತು'' ''ಉಪ=ಸಮೀಪೇ = ನೀನಯತೀತಿ ನಯನಮ್ ॥'' ಸಾಮೀಪ್ಯ ಒಯ್ಯುವಿಕೆ. **''ಆಚಾರ್ಯಸ್ಯ ಉಪಸಮೀಪೇ ಮಾಣವಕಸ್ಯ ನಯನಮ್ ॥ ಉಪನಯನ ಶಬ್ದೇನೋಚ್ಯತೇ ॥''** ಗುರುವಿನ ಹತ್ತಿರ ಕುಮಾರನನ್ನು ವೇದಾಧ್ಯಯನಕ್ಕಾಗಿ ಒಯ್ಯುವುದೇ ಉಪನಯನ. **''ಉಪನಯನಂಚ ವಿಧಿನಾ ಆಚಾರ್ಯ ಸಮೀಪ ನಯನಂ ವಾ ಅಗ್ನಿ ಸಮೀಪ ನಯನಂ ಸಾವಿತ್ರೀ ವಾಚನಂ ವಾ ॥''** ಉಪವೀತಧಾರಣಾ ನಂತರ ಕುಮಾರನನ್ನು ವೇದಾಧ್ಯಯನಕ್ಕಾಗಿ ಗುರುಸಮೀಪ ಒಯ್ಯುವುದು ಮತ್ತು ಅಗ್ನಿ ಉಪಾಸನೆ ಶಾರೀರಿಕ ಮಾನಸಿಕ ಬೌದ್ಧಿಕ ವಿಕಾಸಕ್ಕಾಗಿ ಗಾಯತ್ರೀ ಉಪಾಸನೆಯನ್ನು ಉಪದೇಶ ಮಾಡುವುದೇ ಉಪನಯನ. ಈ ಮೂಲಕ ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆನ್ನುವುದೇ ಈ ಸಂಸ್ಕಾರದ ಮುಖ್ಯ ಉದ್ದೇಶ. **''ಉಪದೇಶೋಪದೇಷ್ಟುತ್ವಾತ್ ತತ್ ಸಿದ್ಧಿಃ ಇತರಾಂಧ ಪರಂಪರಾ ॥''** ಎಲ್ಲಿಯವರೆಗೆ ಸತ್ಯೋಪದೇಶಕರು ಸಮಾಜದಲ್ಲಿರುವರೋ ಅಲ್ಲಿಯವರೆಗೆ ರಾಷ್ಟ್ರ ರಕ್ಷಣೆಯೂ ಧರ್ಮ ಪೋಷಣೆಯೂ ಆಗುವುದು. ಇಲ್ಲವಾದರೆ ಅಧರ್ಮಾದಿ ಪ್ರವೃತ್ತಿಗಳು ಬೆಳೆದು ಸಮಾಜದ ಮತ್ತು ರಾಷ್ಟ್ರದ ಅವನತಿಯು ಆಗುತ್ತದೆ. ಆದ ಕಾರಣ ಗುರುಶಿಷ್ಯ ಪರಂಪರೆಯು ಸದಾ ಅವಶ್ಯವಾದದ್ದು. ಸಂಸ್ಕೃತ ಭಾಷೆಯಲ್ಲಿ ಶಿಷ್ಯನಿಗೆ ಅಂತೇವಾಸಿ ಎಂದು ಹೇಳುತ್ತಾರೆ. ಅಂದರೆ ಗುರು ಸನ್ನಿಧಿಯಲ್ಲಿರುವವ. ಉಪನಯನ ಸಂಸ್ಕಾರವನ್ನು ಪಡೆಯದಿದ್ದರೆ ಯಾವ ಆರ್ಯ ಬಾಲಕನೂ ದ್ವಿಜನಾಗುವುದಿಲ್ಲ. ಉಪನಯನ ವ್ಯಾಖ್ಯೆ - **''ಗೃಹ್ಯೋಕ್ತ ಕರ್ಮಣಾಯೇನ ಸಮೀಪಂ ನೀಯತೇ ಗುರೋಃ ॥ ಬಾಲೋ ವೇದಾಶ್ಚ ತದ್ಯೋಗಾತ್ ಬಾಲಸ್ಯೋಪನಯನಂ ವಿದುಃ ॥''** ಗೃಹ್ಯಸೂತ್ರದಲ್ಲಿ ಹೇಳಿರುವ ಪ್ರಕಾರ ಯಾವ ಕರ್ಮದ್ವಾರಾ ಬಾಲಕನನ್ನು ಅರ್ಥ ಜ್ಞಾನ ಪೂರ್ವಕ

ವೇದಾಧ್ಯಯನಕ್ಕಾಗಿ ಗುರುವಿನ ಹತ್ತಿರ ಒಯ್ಯಲ್ಪಡುತ್ತದೆಯೋ ಅದೇ ಉಪನಯನ ಸಂಸ್ಕಾರ. **“ಧರ್ಮೇಣ ವೇದ ವೇದಾಂಗಾಧ್ಯಾಪನ ಪರಸ್ಯಧಾರ್ಮಿಕಸ್ಯ ವಿದುಷ ಆಚಾರ್ಯಸ್ಯ ಸಮೀಪೇ ಯೇನವಿಧಿನಾ ಯೇ ನ ಲಿಂಗೇನ ಕೃತ್ಯೇನ ಚ ಸಹ ಬಾಲೋನೀಯತೇ ಸಃ ಉಪನಯನ ವಿಧಿಃ ॥”** ಧಾರ್ಮಿಕ ನಿಯಮಾನುಸಾರ ವೇದ ವೇದಾಂಗ ಕಲಿಸುವುದರಲ್ಲಿ ಆಸಕ್ತನಾಗಿ ಧರ್ಮಾತ್ಮನೂ ವಿದ್ಯಾವಂತನೂ ವೇದಜ್ಞನೂ ಆದ ಗುರುವಿನ ಹತ್ತಿರ ಯಾವ ವಿಧಿ (ಯಾವ ಚಿಹ್ನೆ ಧಾರಣಾ) ನಂತರ ವಿಧ್ಯುಕ್ತ ಕ್ರಿಯೆಗಳನ್ನು ಮಾಡಿಸಿ ಬಾಲಕನನ್ನು ವಿಧಿಪೂರ್ವಕ ವೇದಾಧ್ಯಯನ ಮಾಡುವುದಕ್ಕೋಸ್ಕರ ಗುರು ಸನ್ನಿಧಿಯಲ್ಲಿ ಕರೆದುಕೊಂಡು ಹೋಗಲ್ಪಡುತ್ತದೆಯೋ ಆ ಕರ್ಮದ ಹೆಸರು ಉಪನಯನ ಅಥವಾ ಯಜ್ಞೋಪವೀತ ಸಂಸ್ಕಾರವಿರುತ್ತದೆ. “ಬ್ರಮ್ಹ **ವೇದಸ್ತದಧ್ಯಯನಾರ್ಥಂ ಆಚಾರ್ಯಂ ಆಚರಣೀಯಂ ಸಮಿಧಾಧಾನ ಭೈಕ್ಷ್ಯಚರ್ಯೋಧ್ವರೇತಸ್ಕತ್ವಾದಿಕಂ ಬ್ರಮ್ಹಚಾರಿಭಿಃ ಅನುಷ್ಠೀಯ ಮಾನಂ ಕರ್ಮ ಬ್ರಮ್ಹಚರ್ಯಮ್॥”** ಬ್ರಮ್ಹ ಎಂದರೆ ವೇದ ವೇದಾಧ್ಯಯನಕ್ಕಾಗಿ ವೇದಜ್ಞರಾದ ಸದ್ಗುರುವಿನಲ್ಲಿ ವಾಸ ಮಾಡುವುದು, ಅಗ್ನಿಕಾರ್ಯಕ್ಕಾಗಿ ಸಮಿಧ ತರುವುದು, ಭಿಕ್ಷಾಟನೆ, ಊರ್ಧ್ವರೇತಸ್ಸು (ಬ್ರಮ್ಹಚರ್ಯ ಪರಿಪಾಲನೆ) ಇವುಗಳನ್ನು ಆಚರಿಸುವ ವಿಧಿಗೆ ಬ್ರಮ್ಹಚರ್ಯ ಎನ್ನುವರು. ವೇದಾಧ್ಯಯನಕ್ಕಾಗಿ ಯಾವ ವ್ರತವು ಆಚರಿಸಲ್ಪಡುತ್ತದೆಯೋ ಅದು ಬ್ರಮ್ಹಚರ್ಯ. **“ಯದಾ ದೇವೇಷು ವೇದೇಷು ಗೋಷು ವಿಪ್ರೇಷು ಸಾಧುಷು ಧರ್ಮೇ ಚ ಮಯಿ ವಿದ್ವೇಷಃ ಸವಾ ಆಶು ವಿನಶ್ಯತಿ ॥”** ದೇವತೆಗಳಲ್ಲಿಯೂ ವೇದಗಳಲ್ಲಿಯೂ ಗೋವುಗಳಲ್ಲಿಯೂ ಜ್ಞಾನಿಗಳಾದ ಬ್ರಾಮ್ಹಣರಲ್ಲಿಯೂ ಸತ್ಪುರುಷರಲ್ಲಿಯೂ ಧರ್ಮದರಲ್ಲಿಯೂ ಮತ್ತು ಪರಮಾತ್ಮನಲ್ಲಿಯೂ ಯಾವಾತನು ದ್ವೇಷ ಮಾಡುತ್ತಾನೋ ಅವನು ಅಧಃ ಪತನ ಹೊಂದುತ್ತಾನೆ. ಮಗನಿಗೆ ಆತ್ಮಜಃ ಎಂದು ಹೇಳುತ್ತಾರೆ. ಆತ್ಮಜಃ - **“ಜನೀಪ್ರಾದುರ್ಭಾವೇ”** ಹುಟ್ಟುವಿಕೆ. **“ಆತ್ಮೈವ ಪುತ್ರತ್ವೇನ ಜಾಯತ ಇತ್ಯಾತ್ಮಜಃ”** ಅಂದರೆ ತಾನೇ ಪುತ್ರ ರೂಪದಿಂದ ಹುಟ್ಟುತ್ತಾನೆ. ಅಜ್ಜನಿಂಗ ಮಗ, ಮಗನಿಂದ ಮೊಮ್ಮಗ, ಹೀಗೆ ಕ್ರಮಬದ್ಧವಾಗಿ ಪ್ರತಿಯೊಬ್ಬ ಬ್ರಾಮ್ಹಣನೂ ಸಂಸ್ಕಾರಗಳನ್ನು ಪಡಕೊಳ್ಳಲೇ ಬೇಕು. (ಬ್ರಾಮ್ಹಣನ ಅವನತಿಯ ಕಾರಣಗಳು- **“ಅನಭ್ಯಾಸೇನ ವೇದಾನಾಂ ಆಚಾರಸ್ಯಚ ವರ್ಜನಾತ್ ಆಲಸ್ಯಾದನ್ನ ದೋಷಾಚ್ಚ ಮೃತ್ಯುಃ ವಿಪ್ರಾನ್ ಜಿಘಾಂಸತಿ ॥”** ವೇದಾಧ್ಯಯನ ಮಾಡದಿರುವಿಕೆಯಿಂದಲೂ ಸ್ವಧರ್ಮ ವಿರುದ್ಧ ಕರ್ಮಾಚರಣೆ ಮಾಡುವುದರಿಂದಲೂ ಆಲಸೀ ಪ್ರವೃತ್ತಿಯಿಂದಲೂ ರಾಜಸ ತಾಮಸ ಆಹಾರ ಸೇವನೆಯಿಂದಲೂ (ಮೃತ್ಯುವು) ಅಕೃತ್ಯವು ಬ್ರಾಮ್ಹಣನನ್ನು ಅಧೋಗತಿಗೆ ಎಳೆಯುತ್ತದೆ. **“ಜನ್ಮಹೇತೂ ಹಿ ಪಿತರೌಪೂಜನೀಯೌ ಪ್ರಯತ್ನತಃ॥ ಗುರುಃ ವಿಶೇಷತಃ ಪೂಜ್ಯೋ ಧರ್ಮಾಧರ್ಮ ಪ್ರದರ್ಶಕಃ ॥”** ಜನ್ಮ ಕೊಟ್ಟ ತಾಯಿ ತಂದೆಯರು ಪೂಜಿಸಿಕೊಳ್ಳಲು ಯೋಗ್ಯರಿರುತ್ತಾರೆ. ಧರ್ಮ ಹಾಗೂ ಅಧರ್ಮಗಳನ್ನು ನಮಗೆ ತಿಳಿಸಿ ಹೇಳಿ ಧರ್ಮ ಮಾರ್ಗ ನಿರತರನ್ನಾಗಿ ಮಾಡುವಂತಹ ಗುರುವು ಪರಮ ಪೂಜ್ಯನೂ, ಶ್ರೇಷ್ಠನೂ ಪೂಜಾರ್ಹನೂ ಇರುತ್ತಾನೆ. ಆದ ಕಾರಣವೇ ಉಪನಯನ ಸಂಸ್ಕಾರವನ್ನು ಪಡೆದ ಮಗನನ್ನು ವೇದಜ್ಞರಾದ ಬ್ರಾಮ್ಹಣರ ಹತ್ತಿರ ಕಳಿಸಬೇಕು. ಉಪನಯನ ಸಂಸ್ಕಾರ ಮೂಲಕ (ಬ್ರಾಮ್ಹಣ) ವಿಪ್ರನಾಗಿ ಬ್ರಮ್ಹ ಸಾಕ್ಷಾತ್ಕಾರದ

ಮೂಲಕ ಅವನಲ್ಲಿ ಬ್ರಾಮ್ಹಣನ ಸ್ಥಿತಿ ಲಭಿಸುತ್ತದೆ. ಸಾಂಸ್ಕೃತಿಕ ದೃಷ್ಟಿಯಿಂದ ಇದೊಂದು ಮಹತ್ವಪೂರ್ಣ ಪ್ರಯೋಜನದ್ದಿರುತ್ತದೆ. (ಸ್ವರ್ಗ ಮೋಕ್ಷ ಪ್ರಾಪ್ತಿ) ಸಂಸ್ಕಾರದಿಂದ ಸಂಸ್ಕೃತ ವ್ಯಕ್ತಿಯು ದೇವತ್ವವನ್ನು ಅಂದರೆ ದೇವತೆಗಳ ಸ್ಥಿತಿಯನ್ನು ಸಂಪಾದಿಸಿಕೊಳ್ಳುತ್ತಾನೆ. (ಮನುಸ್ಮೃತಿ) **“ಯೋಽನಧೀತ್ಯ ದ್ವಿಜೋವೇದಂ ಅನ್ಯತ್ರ ಕುರುತೇಶ್ರಮಂ॥ ಸಜೀವನ್ನೇಹ ಶೂದ್ರತ್ವಂ ಆಶುಗಚ್ಛತಿ ಸಾನ್ವಯಃ ॥”** ಯಾವಾತನು ಬ್ರಾಮ್ಹಣ ಕುಲದಲ್ಲಿ ಹುಟ್ಟಿ ವೇದಾಧ್ಯಯನ ಮಾಡದೇ ತನ್ನ ಪರಿಶ್ರಮವನ್ನು ಬೇರೇ ಕಡೆ ಮಾಡುತ್ತಾನೋ ಅವನು ಬದುಕಿರುವಾಗಲೇ ಶೂದ್ರತ್ವವನ್ನು ಹೊಂದಿ ಅಧೋಗತಿಗೆ ಹೋಗುತ್ತಾನೆ. **“ವಿದ್ಯಯಾ ಪ್ರಾಪ್ಯತೇ ಸೌಖ್ಯಂ ಯಶಃ ಕೀರ್ತಿಸ್ತಥಾ ತುಲಮ್ ॥ ಜ್ಞಾನಂ ಸ್ವರ್ಗಃ ಸುಮೋಕ್ಷಚ್ಚ ತಾಸ್ಮಾದ್ವಿದ್ಯಾಂ ಪ್ರಸಾಧಯ॥”** ಜ್ಞಾನಾರ್ಜನೆಯಿಂದ ಸುಖವನ್ನೂ, ಅಪಾರ ಕೀರ್ತಿಯನ್ನೂ, ಅಮೃತತ್ವವನ್ನೂ ಸಂಪಾದಿಸಿಕೊಳ್ಳಲು ಸಾಧ್ಯ. ಆದ ಕಾರಣ ಜ್ಞಾನ ವಿದ್ಯೆಯನ್ನು ಸಂಪಾದಿಸು. **“ನಿಃಶ್ರೇಯಸಕರಾಣಿ ಕರ್ಮಾಣ್ಯಾ ವೇದಯಂತಿ ವೇದಾಃ ॥”** ಅಂದರೆ ಅಮೃತತ್ವ ಪ್ರಾಪ್ತಿಗ್ತಾಗಿ ಯಾವ ಕರ್ಮಾಚರಣೆಯು ಅತ್ಯವಶ್ಯವಿರುತ್ತದೆಯೋ ವೇದ ಮಾತೆಯು ಅದನ್ನೇ ತಿಳಿಸಿಕೊಡುತ್ತದೆ. “ಉಪನಯನ ಸಂಕಲ್ಪ” **“ಮಮಕುಮಾರಕಸ್ಯ ದ್ವಿಜತ್ವಸಿಧ್ಯಾ ವೇದಾಧ್ಯಯನ ಅಧಿಕಾರ ಸಿಧ್ಯರ್ಥಂ ಉಪನಯನಾಖಂ ಕರ್ಮಕರಿಷ್ಯೇ ॥”** ಬ್ರಾಮ್ಹಣತ್ವ ಸಿದ್ಧಿಯ ಮೂಲಕ ವೇದಾಧ್ಯಯನ ಅಧಿಕಾರ ಪ್ರಾಪ್ತಗಾಗಿ ಉಪನಯನವನ್ನು ಮಾಡುತ್ತೇನೆ. **“ಅಧ್ಯಯನಂ ನಾಮ ಅರ್ಥಜ್ಞಾನಃ ಪೂರ್ವಕಮಕ್ಷರ ಗ್ರಹಣ ಮಧ್ಯಯನಮ್ ॥”** ಅರ್ಥ ಜ್ಞಾನ ಪೂರಕವಾಗಿ ಅಕ್ಷರವನ್ನು ಗ್ರಹಿಸುವುದೇ ಅಧ್ಯಯನ. ಕಾಮಚಾರ ಕಾಮವಾದ ಕಾಮಭಕ್ಷಣ ದೋಷ ಪರಿಹಾರಕ್ಕಾಗಿ ಕೃಚ್ಛ್ರ ಹೇಳಿದೆ. ಕಾಮಚಾರ ಎಂದರೆ ಮನಬಂದಂತೆ ಆಚರಿಸುವುದು. ಕಾಮಭಕ್ಷಣ ಎಂದರೆ ಸಿಕ್ಕಿದ್ದನ್ನು ತಿನ್ನುವುದು. ಕಾಮವಾದ ಎಂದರೆ ಮನ ಬಂದಂತೆ ಮಾತನಾಡುವುದು. ಇಂತಹ ಕೃತ್ಯಗಳು ಇನ್ನು ಮುಂದೆ ಅವನ ಜೀವನದಲ್ಲಿ ಆಗಬಾರದೆಂದು ಕೃಚ್ಛ್ರಾಚರಣೆ ಮಾಡುತ್ತಾರೆ. (ಸ್ನಾನ) ಈ ಮೊದಲು ಸ್ನಾನ ಮಾಡದೇ ಭೋಜನಾದಿಗಳನ್ನು ಮಾಡುತ್ತಾನೆ. ಇನ್ನುಮುಂದೆ ಸ್ನಾನ ಮಾಡದೇ ಭೋಜನಾದಿಗಳನ್ನು ಮಾಡಬಾರದು. (ಮಂಗ್ಗಲ ಸ್ನಾನ) ಮಂಗಲ ಸ್ನಾನದ ಉದ್ದೇಶ.

೧೨) ಮಾತೃ ಭೋಜನ

ಮಗನನ್ನು ವೇದಾಧ್ಯಯನಕ್ಕಾಗಿ ಗುರುಕುಲದಲ್ಲಿ ಬಹುಕಾಲಗಳವರೆಗೂ ಕಳಿಸಬೇಕಾದುದರಿಂದ ಮಗನಿಗೆ ತಾಯಿಯು ಊಟ ಮಾಡಿಸುವ ವಿಧಾನ. **“ಶ್ರದ್ಧಾ ಮೇಧಾ ಪ್ರಜ್ಞಾಸಿಧ್ಯರ್ಥಂ ಫಲ ತಾಂಬೂಲ ಗೋಪೀಚಂದನ ಯಜ್ಞೋಪವೀತ ದಾನಾನಿ ಕರಿಷ್ಯೇ ॥”** ಮುಂದೆ **“ಶ್ರದ್ಧಾ ಮೇಧಾ ಪ್ರಜ್ಞಾಸಿಧ್ಯರ್ಥಂ ಶ್ರದ್ಧಾ ಮೇಧಾ ಪೂಜಾಂಕರಿಷ್ಯೇ ॥”** (ಶ್ರದ್ಧಾ) ಈಶ್ವರೀಯ ಜ್ಞಾನವಾದ ವೇದದಲ್ಲಿ ಸ್ಥಿರವಾದ ಶ್ರದ್ಧೆಯನ್ನಿಟ್ಟು ನಿಷ್ಠೆಯಿಂದ ಆಚರಿಸುವ ವಿಧಾನ. (ಮೇಧಾ) **“ಲಕ್ಷಣ - ಗ್ರಹಣ - ಧಾರಣ - ಸ್ಫುರಣವತೀ ಮೇಧಾ ॥”** ಮೊದಲು ಹೇಳಿದ್ದನ್ನು ಕೇಳಿ ಗ್ರಹಿಸುವುದು ನಂತರ ಬುದ್ಧಿಯಲ್ಲಿ ಧಾರಣ ಮಾಡುವುದು. ಧಾರಣ ಮಾಡಿದ್ದು ಸಕಾಲದಲ್ಲಿ ಸ್ಫುರಣವಾಗುವುದು. **“ಬ್ರಾಮ್ಹಣಾನುಪಸೇವೇತ ನಿತ್ಯಂ ರಾಜಾ ಸಮಾಹಿತಃ ॥ ಸಂಯುಕ್ತಂ ಬ್ರಾಮ್ಹಣ್ಯೈಃ ಕ್ಷತ್ರಂ ಮಾಲಂ ಲೋಕಾಭಿರಕ್ಷಣೇ ॥”** ರಾಜನು ಒಂದೇ ಮನಸ್ಸಿನಿಂದ

ಪ್ರತಿನಿತ್ಯದಲ್ಲಿಯೂ ಜ್ಞಾನಿಗಳನ್ನು ಪೂಜಿಸತಕ್ಕದ್ದು. ಅವರ ಸಲಹೆಯಂತೇ ರಾಜ್ಯಾಡಳಿತವನ್ನು ಮಾಡುತ್ತಿರಬೇಕು. ಯಾಕೆಂದರೆ ಜ್ಞಾನಿಗಳ ಸಲಹೆಯ ಮೇರೆಗೆ ರಾಜ್ಯವನ್ನು ನಡೆಸುವ ರಾಜನೇ ರಾಷ್ಟ್ರ ಸಂರಕ್ಷಿಸಲು ಸಮರ್ಥನು. (ದ್ವಿಜತ್ವ ವಿಚಾರ) ಮನುಸ್ಮೃತಿ -**''ಮಾತುರಗ್ರೇಧಿ ಜನನಂ ದ್ವಿತೀಯಂ ಮೌಂಜಿಬಂಧನಂ ॥ ತೃತೀಯಂ ಯಜ್ಞದೀಕ್ಷಾಯಾಂ ದ್ವಿಜಸ್ಯ ಶೃತಿ ಚೋದನಾತ್ ॥''** ಅಂದರೆ ತಾಯಿಯ ಉದರದಿಂದ ಜನಿಸುವುದು ಮೊದಲನೇ ಜನ್ಮ. ಉಪನಯನ ಸಂಸ್ಕಾರವೇ ಎರಡನೇ ಜನ್ಮ. ವೇದ ವಚನಾನುಸಾರ ಯಜ್ಞಾದಿ ಸತ್ಕರ್ಮಗಳನ್ನಾಚರಿಸುವುದು ಮೂರನೇ ಕರ್ತವ್ಯ. ಆದ ಕಾರಣ ಉಪನಯನ ಸಂಸ್ಕಾರದಿಂದಲೇ ದ್ವಿಜತ್ವ ಸಿದ್ಧಿಯಾಗುತ್ತದೆ. ಬ್ರಮ್ಹಚಾರಿಗಳಲ್ಲಿ ನಾಲ್ಕು ವಿಧ. ೧) ಗಾಯತ್ರೀ ಬ್ರಹ್ಮಚಾರಿ, ೨) ವೈದಿಕ ಬ್ರಮ್ಹಚಾರಿ, ೩) ನೈಷ್ಟಿಕ ಬ್ರಮ್ಹಚಾರಿ, ೪) ಪ್ರಾಜಾಪತ್ಯ ಬ್ರಮ್ಹಚಾರಿ. ನಿರಂತರ ಭಗವಂತನ ಆರಾಧನೆ ಮಾಡಬೇಕು. **''ಅಶುಚಿರ್ವಾ ಶುಚಿರ್ವಾಪಿ ಗಚ್ಛಂಸ್ತಿಷ್ಠನ್ ಸ್ವಪನ್ನಪಿ॥ ಮಂತ್ರೈಕ ಸ್ಮರಣೋ ವಿದ್ವಾನ್ ಮನಸ್ಯೆವ ಸದಾಭ್ಯಸೇತ್॥''** ಅಶುಚಿ ಇರಲಿ , ಶುಚಿಯಾಗಿರಲಿ, ಹೋಗುತ್ತಿರುವಾಗಿಯಾಗಲಿ, ನಿಂತಿರಲಿ, ಮಲಗಿರಲಿ, ವೇದಮಂತ್ರವೇ ಅತಿಶ್ರೇಷ್ಠವೆಂದು ತಿಳಿದ ಜ್ಞಾನಿಗಳು ಯಾವಾಗಲೂ ಮನಸ್ಸಿನಿಂದಲೇ ಆರಾಧಿಸತಕ್ಕದ್ದು.

ಬ್ರಮ್ಹಚಾರಿಯ ಕರ್ತವ್ಯ

ಸ್ನಾನ, ಸಂಧ್ಯಾವಂದನೆ, ಅಗ್ನಿಕಾರ್ಯ, ವೇದಾಧ್ಯಯನ , ಗುರುಶುಶ್ರೂಷೆ, ಸಮಿಧಗಳನ್ನು ತರುವುದು. ಭಿಕ್ಷಾಟನೆ - ಶ್ರೀಮಂತನೆಂಬ ದುರಹಂಕಾರ ಖಂಡನೆ. ಅಂದರೆ ಗುರುಕುಲದಲ್ಲಿ ಶ್ರೀಮಂತ - ಬಡವ ಎನ್ನುವ ಭೇದಭಾವವಿಲ್ಲ. ಸಮಾನತೆ. ಕೌಪೀನ ಧಾರಣೆ - ಇಂದ್ರಿಯ ನಿಗ್ರಹ ಮಾಡುವುದಕ್ಕೋಸ್ಕರ ಕೌಪೀನ ಧಾರಣೆ ಮಾಡಿಕೊಂಡು ಬ್ರಮ್ಹಚರ್ಯ ಪರಿಪಾಲನೆ ಮಾಡುವುದು. ಬ್ರಾಮ್ಹಣ ಜಾತಿ - ಜಾತಿ , ವೇದ , ತತ್ವ, ತಪಸ್ಸು . ಶ್ರೇಷ್ಠ ಕುಲದಲ್ಲಿ ಹುಟ್ಟಿ ವೇದಾಧ್ಯಯನ - ವೇದ ತತ್ವಗಳ ಚಿಂತನೆ. (ಅರ್ಥ ಜ್ಞಾನ) ತಪಸ್ಸು ಈ ಮೊದಲು ಹೇಳಿದ ಪ್ರಕಾರ ಆಚರಿಸುತ್ತಿದ್ದರೆ ಬ್ರಾಮ್ಹಣನೆಂದೆನಿಸಿಕೊಳ್ಳುತ್ತಾನೆ. ಇಲ್ಲವಾದರೆ ಮನುಸ್ಮೃತಿಯ ಆಧಾರ ಪ್ರಕಾರ **''ಜಾತಿಬ್ರಾಮ್ಹಣ ಏವಸಃ''** ಕೇವಲ ಜಾತಿ ಬ್ರಾಮ್ಹನು (ಬ್ರಾಮ್ಹಣ ಜಾತಿ) (ಸಂಧ್ಯಾ) ಸಂಧೌಭವಾ ಸೂರ್ಯನ ಉದಯಾಸ್ತ ಕಾಲಗಳು. ತತ್ವ ಎಂದರೇನು (ತತ್ತ್ವಂ) ಆ ಬ್ರಮ್ಹ ವಸ್ತುವು ನೀನೇ ಎಂದು ದೇವನಲ್ಲಿ ಅರಿಕೆ ಮಾಡಿಕೊಳ್ಳುವುದು. ಅಂದರೆ ವಸ್ತುವಿನ ಯಥಾರ್ಥ ಜ್ಞಾನ ಇದ್ದದ್ದನ್ನು ಸರಿಯಾಗಿ ಇದ್ದಂತೇ ತಿಳಿಯುವುದು. ತತ್ ಈ ಶಬ್ದ ಸರ್ವನಾಮ . ಸರ್ವವೂ ಬ್ರಮ್ಹವೇ **''ಸರ್ವಂ ಖಲ್ವಿದಂ ಬ್ರಮ್ಹ''**

ಯಜ್ಞೋಪವೀತ ಧಾರಣ ಉದ್ದೇಶ

ವೇದ ಮತ್ತು ಸ್ಮೃತಿಗಳಲ್ಲಿ ಹೇಳಿರುವ ಯಜ್ಞಾದಿ ಅನೇಕ ಸತ್ಕರ್ಮಗಳನ್ನು ಆಚರಿಸಲಿಕ್ಕೂ ಮತ್ತು ವೇದಾಧ್ಯಯನ ಅಧಿಕಾರ ಪ್ರಾಪ್ತಿಗೂ ಯಾವ ಯಜ್ಞೋಪವೀತವು ಉಪನಯನ ಸಂಸ್ಕಾರ

ಮೂಲಕ ಧಾರಣ ಮಾಡಲ್ಪಡುತ್ತದೆಯೋ ಆ ಯಜ್ಞೋಪವೀತವು ಅಭ್ಯುದಯ ನಿಃಶ್ರೇಯಸ ಸಿದ್ಧಿಯನ್ನುಂಟು ಮಾಡುವಂತಹದೂ ದೀರ್ಘಾಯುಷ್ಯವನ್ನೂ ಬ್ರಮ್ಹ ತೇಜಸ್ಸನ್ನುಂಟು ಮಾಡುತ್ತದೆ. ಯಾಕೆಂದರೆ ಒಂಭತ್ತು ದೇವತೆಗಳನ್ನು ಆವಾಹನೆ ಮಾಡಿ ವಿಧ್ಯುಕ್ತವಾಗಿ ಷೋಡಶೋಪಚಾರ ಪೂಜೆಗಳಿಂದ ಪೂಜಿಸಿ ನಾವು ಧಾರಣ ಮಾಡುವುದರಿಂದ ಈ ಎಲ್ಲಾ ದೇವತೆಗಳೂ ವಾಸವಾಗಿದ್ದು ಈ ಒಂಭತ್ತೂ ದೇವತೆಗಳ ಅನುಗ್ರಹವು ನಮ್ಮ ಮೇಲೆ ಇದ್ದೇ ಇರುತ್ತದೆ. ವೇದದಲ್ಲಿ ಪ್ರಸಿದ್ಧ ಹೆಸರು ಪರಿವೀತ = ವಾಸ =ತ್ರಿಕೀ = ದ್ವಿಜಾಯನೀ = ಸುವಾಸ = ಸಾವಿತ್ರ = ಸಾವಿತ್ರೀ ಎಂತಲೂ ಹೇಳಿರುತ್ತಾರೆ. ಪವಿತ್ರ ವ್ರತ ಬಂಧನ ಬ್ರಮ್ಹ ಸೂತ್ರ - **''ಯಜ್ಞೇನ ಸಂಸ್ಕೃತಂ = ಯಜ್ಞಸಂಸ್ಕೃತಮ್''** ಪೂಜಾದಿಗಳಿಂದ ಸಂಸ್ಕರಿಸಲ್ಪಟ್ಟದ್ದು. **''ಯಜ್ಞಸಂ ಸ್ಕೃತಂ ಚ ತದುಪವೀತಂ ನವಸೂತ್ರಾತ್ಮಕಂ ಚಿನ್ಹಂ ಯಜ್ಞೋಪವೀತಮ್''** ಒಂಭತ್ತು ತಂತುಗಳಿಂದ ತಯಾರಿಸಲ್ಪಟ್ಟು ಒಂದೇ ಗಂಟಿನಿಂದ ತಯಾರಿಸಿ ಧಾರಣ ಮಾಡಲಿಕ್ಕೆ ಅನುಕೂಲವಾದದ್ದು ಯಜ್ಞೋಪವೀತ. **''ಉಪಗುರೋಃ ಸಮೀಪೇ ನೀಯತೇ ಗಮ್ಯತೇಯೇ ನಸಾಕಂ ತದುಪವೀತಮ್ ''** ಬ್ರಮ್ಹಚಾರೀ ನಿಯಮದಲ್ಲಿ ಹೇಳಿದ ಪ್ರಕಾರ ಕರ್ಮಾಚರಣೆಗೆ ಅನುಕೂಲವಾಗುವುದಕ್ಕೆ ಗುರು ಸನ್ನಿಧಿಗೆ ಹೋಗುವುದು. **''ಬ್ರಮ್ಹ ಯಜ್ಞ** (ವೇದಾಧ್ಯಯನ) **ದೇವಯಜ್ಞ = ಪಿತೃಯಜ್ಞ =ಭೂತಯಜ್ಞ = ನೃಯಜ್ಞ = ಜಪಯಜ್ಞ = ಜ್ಞಾನಯಜ್ಞ = ಸ್ವಾಧ್ಯಾಯಯಜ್ಞ = ದಾನಯಜ್ಞ = ಯೋಗಯಜ್ಞ = ಯೇನೈವ ತತ್ಸೂತ್ರಂ ಧಾರ್ಯತೇ ಸ ಪಂಚ ಮಹಾಯಜ್ಞಾನಾ ಮನುಷ್ಠಾನಾತ್ । ಯಜ್ಞೋಪವೀತ ॥''** (ಶ್ಲೋಕ) **''ಯಜ್ಞೋಪವೀತಸ್ಯೋತ್ಪತ್ತಿಂ ಯೋನಜಾನಾತಿ ವೈದ್ವಿಜಃ ॥ ಸಮೂಢೋ ಭಾರಹಾರೀಚ ವೃಷಭೋ ನಾಸ್ತಿಕೋ ಯಥಾ ॥ ಕರ್ಮ ಬಾಹ್ಯೋ ದ್ವಿಜೋ ನೂನ ಮಪೂ ಜ್ಯೋ ಲೋಕನಿಂದಕಃ ॥ ''**

ಯಾವ ಬ್ರಾಮ್ಹಣನು ಯಜ್ಞೋಪವೀತದ ಮಹತ್ವವನ್ನೂ, ಲಕ್ಷಣವನ್ನೂ ತಿಳಿದುಕೊಳ್ಳುವುದಿಲ್ಲವೋ ಹಾಗೂ ಧಾರಣ ಮಾಡಿಕೊಳ್ಳುವುದಿಲ್ಲವೋ ಅವನು ಭಾರ ಹೊತ್ತ ಎತ್ತಿನಂತೇ ಸರಿ. ಇಂತಹ ಮನುಷ್ಯನು ಯಾವತ್ತೂ ವೈದಿಕ ಕರ್ಮಗಳಲ್ಲಿ ಬಹಿಷ್ಕೃತನಾಗುತ್ತಾನೆ. ಮತ್ತು ಲೋಕನಿಂದಕನೂ ಆಗುತ್ತಾನೆ. ಯಾಕೆಂದರೆ ಯಜ್ಞೋಪವೀತವು ಮಂತ್ರಸಾಧನೆಯ (ಅನುಷ್ಠಾನದ) ಅಧಿಕಾರ ಪತ್ರವಿರುತ್ತದೆ. **''ಯಜ್ಞೇನಧೃತಂ ಉಪವೀತಂ = ಯಜ್ಞೋಪವೀತಮ್''** ವಿಧ್ಯುಕ್ತವಾಗಿ ಪೂಜಿಸಿ ಧಾರಣ ಮಾಡುವುದಕ್ಕೆ ಯಜ್ಞೋಪವೀತ ಎನ್ನುವರು. (ಯಜ್) ಧಾತು = ದೇವಪೂಜಾ = ದೇವ ಸಂಗತೀಕರಣ = ದಾನ = ಯಜ್ಞೋಪವೀತಂ ಪರಮಂ ಪವಿತ್ರಂ ಹೇಳಿ ಧಾರಣ ಮಾಡಬೇಕು

ಭಾಗ – ೩

ಗರ್ಭಾಧಾನಾದಿ ಸಂಸ್ಕಾರಗಳನ್ನು ಪಡೆದ ನಂತರ ದೇವತಾ ಪ್ರೀತ್ಯರ್ಥವಾಗಿಯೂ ಆತ್ಮ ವಿಕಾಸಕ್ಕಾಗಿಯೂ ಹಾಗೂ ಭಗವಂತನ ಸಾಕ್ಷಾತ್ಕಾರಕ್ಕಾಗಿಯೂ ವೇದ ವೇದಾರ್ಥಗಳನ್ನು ಕಲಿತು ವೇದೋಕ್ತ ಕರ್ಮಗಳನ್ನು ಆಚರಿಸುತ್ತಿರಬೇಕು. ಯಾಕೆಂದರೆ ತಿಳಿದು ಕರ್ಮಗಳನ್ನಾಚರಿಸುವುದು ಬ್ರಾಮ್ಹಣನ ಆದ್ಯಕರ್ತವ್ಯ. ತಿಳಿಯದೇ ಆಚರಿಸುವುದು ಅಪಾಯಕರ. ಉದಾಹರಣೆ - ರಾಷ್ಟ್ರದ ಮುಂದಾಳುವು ಮಾಡಿದ ಕಾಯದೆಗಳನ್ನು ಉಲ್ಲಂಘಿಸಿದರೆ ತಪ್ಪುದಾರನಾಗಿ ಹೇಗೆ ಶಿಕ್ಷೆಗೆ ಗುರಿಯಾಗುತ್ತಾನೋ ಅಂತೆಯೇ ತಿಳಿಯದೇ ಮಾಡಿದ ಕರ್ಮಗಳೂ ನಮಗೆ ನಾನಾ ತೊಡಕು ತೊಂದರೆಗಳನ್ನು ಉಂಟು ಮಾಡುವುದಲ್ಲದೇ ನಮ್ಮ ಅಭ್ಯುದಯ ನಿಃಶ್ರೇಯಸ ಸಿದ್ಧಿಗೆ ಚ್ಯುತಿಯು ಬರುತ್ತದೆ. ಆದ ಕಾರಣ **''ಜ್ಞಾತ್ವಾಕರ್ಮಾಣಿ ಕುರ್ವೀತ''** ತಿಳಿದು ಕರ್ಮಗಳನ್ನಾಚರಿಸತಕ್ಕದ್ದು. (ಸಂಧ್ಯೋಪಾಸನೆ) **''ನೋದಕೈರ್ಜಾಯತೇ ಸಂಧ್ಯಾ ನ ಮಂತ್ರೋಚ್ಚಾರಣೇನ ತು ॥ ಸಂಧೌ ಜೀವಾತ್ಮನೋರೈಕ್ಯಂ ಸಾ ಸಂಧ್ಯಾ ಸದ್ಭಿರುಚ್ಯತೇ ॥ ''** ಕೇವಲ ನೀರಿನಿಂದಾಗಲೀ ಕೇವಲ ಮಂತ್ರೋಚ್ಚಾರಣೆಯಿಂದಾಗಲೀ ಸಂಧ್ಯಾನುಷ್ಠಾನ ಆಗುವುದಿಲ್ಲ. ಸಂಧ್ಯೆಯಲ್ಲಿ (ಸಂಧಿಕಾಲಗಳಲ್ಲಿ) ಜೀವಾತ್ಮನು ಪರಮಾತ್ಮನಲ್ಲಿ ಒಂದಾಗುವುದೇ ನಿಜವಾದ ಸಂಧ್ಯೋಪಾಸನೆ ಎಂದು ಸುಜ್ಞಾನಿಗಳು ಹೇಳಿರುತ್ತಾರೆ. (ಶೌಚಂ) ಶುಚೇರ್ಭಾವಃ - **''ಶೌಚಂತು ದ್ವಿವಿಧಂ ಪ್ರೋಕ್ತಂ ಬಾಹ್ಯಮಾಂತರಮೇವ ಚ ॥ ಮೃಜ್ಜಲಾಭ್ಯಾಂ ಸ್ಮೃತಂ ಬಾಹ್ಯಂ ಭಾವಶುದ್ಧಿರಥಾಂತರಮ್ ॥ ಶುಭಾಚಾರ=ಪಾವಿತ್ರ್ಯತೇ''** ಇವು ದೇಹ ಮತ್ತು ಅಂತಃಕರಣವನ್ನು ಪವಿತ್ರಗೊಳಿಸುತ್ತದೆ. ಸ್ವಧರ್ಮಾಚರಣೆಯಲ್ಲಿ ನಡೆದುಕೊಳ್ಳುವುದಕ್ಕೆ ಶೌಚ ಎನ್ನುವರು. ೧) ಬಾಹ್ಯ, ಮಣ್ಣು ಮತ್ತು ನೀರಿನ ಸ್ನಾನ ಬಾಹ್ಯ ಶುದ್ಧಿ ಮಾಡುವುದು. ೨) ಅಂತಃಕರಣ ಶುದ್ಧಿ = ಕಾಮಕ್ರೋಧಾದಿ ಷಡ್ವೈರಿಗಳನ್ನು ದೂರ ಮಾಡಿ ಅನನ್ಯ ಭಾವದಿಂದ ದೇವನನ್ನು ಆರಾಧಿಸುತ್ತಿರುವದರಿಂದ ಅಂತಃಕರಣವು ಶುದ್ಧಿಯಾಗುತ್ತದೆ. ಅನೇಕ ವ್ರತೋದ್ಯಾಪನಾದಿ ಕರ್ಮಗಳಲ್ಲಿ ಮೃತ್ತಿಕಾ ಸ್ನಾನ ಹೇಳಿದೆ. ಕೇವಲ ಬಾಹ್ಯ ಶುದ್ಧಿಯಿಂದ ಪವಿತ್ರನಾಗುವುದಿಲ್ಲ. ಅಂತಃಕರಣ ಶುದ್ಧಿಬೇಕು. **''ಯಜ್ಞೋದಾನಂ ತಪಃ ಕರ್ಮ ನತ್ಯಾಜ್ಯಂ ಕಾರ್ಯಮೇವತತ್ ॥ ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥ ''** ಯಜ್ಞದಾನ ತಪಸ್ಸು ಇವುಗಳನ್ನು ಪ್ರತಿನಿತ್ಯವೂ ಆಚರಿಸಬೇಕು. ಯಾಕೆಂದರೆ ಜ್ಞಾನಿಗಳಿಗೆ ಯಜ್ಞದಾನ ತಪಸ್ಸೇ ಶ್ರೇಷ್ಠವಾದದ್ದು. **''ಸರ್ವೇಷಾ ಮಪಿಚೈತೇಷಾಂ ವೇದಸ್ಮತಿ ವಿಧಾನ ತಃ ॥ ಗೃಹಸ್ಥ ಉಚ್ಯತೇ ಶ್ರೇಷ್ಠಃ ಸತ್ರೀನೇತಾನ್ ಬಿಭರ್ತಿಹಿ ॥''** ವೇದ ಮತ್ತು ಸ್ಮತಿಯ ಉಕ್ತಿಗೆ ಅನುಸಾರವಾಗಿ ಉಳಿದ ಮೂರು ಆಶ್ರಮಿಗಳನ್ನೂ ಸುರಕ್ಷಿತವಾಗಿ ನಡೆಸಿಕೊಂಡು ಹೋಗುವ ಗ್ರಹಸ್ಥಾಶ್ರಮವೇ ಶ್ರೇಷ್ಠವೆಂದು ಹೇಳಿರುತ್ತಾರೆ. (ಪಂಚಯಜ್ಞ) **''ಪಂಚಸೂನಾ ಕೃತಂ ಪಾಪಂ ಪಂಚಯಜ್ಞೈಃ ವ್ಯಪೋಹತಿ ''** ಐದು ಕಾರಣಗಳಿಂದುಂಟಾದ ಪಾಪಗಳು ಪಂಚಯಜ್ಞದಿಂದ ನಿವೃತ್ತಿಯಾಗುತ್ತದೆ. (ಸ್ಮತಿ) **''ದೇವ ಯಜ್ಞೋ ಭೂತಯಜ್ಞಃ ಪಿತೃಯಜ್ಞಸ್ತಥೈವಚ ॥ ನೃಯಜ್ಞ ಬ್ರಮ್ಹಯಜ್ಞಶ್ಚ ಪಂಚಯಜ್ಞಾಃ ಪ್ರಕೀರ್ತಿತಾಃ॥''** ೧) ದೇವ ಯಜ್ಞ- ಈಶ್ವರ ಪ್ರೀತ್ಯರ್ಥವಾಗಿ ಮಾಡುವ ಕರ್ಮಗಳು,

೨) ಭೂತಯಜ್ಞ - ಪಶುಪಕ್ಷಿಗಳನ್ನು ಸಂರಕ್ಷಿಸುವುದು, ೩) ಪಿತೃಯಜ್ಞ- ತಾಯಿ ತಂದೆಯರ ಸೇವೆ (ಮಾತಾ ಪಿತೃಗಳ ವಿಯೋಗದ ನಂತರ ಆಚರಿಸಲೇಬೇಕಾದ ಪಿತೃಕರ್ಮಗಳು), ೪) ನೃಯಜ್ಞ- ಅತಿಥಿ ಅಭ್ಯಾಗತರನ್ನು ಅನ್ನ ಧನಾದಿಗಳಿಂದ ಸೇವೆ ಮಾಡುವುದು, ೫) ಬ್ರಮ್ಹ ಯಜ್ಞ - ವೇದಾಧ್ಯಯನ ಮತ್ತು ವೇದೋಕ್ತ ಕರ್ಮಗಳನ್ನು ಆಚರಿಸುತ್ತಿರುವುದು. (ಪಂಚಸೂನಾ ದೋಷ) **''ಪಂಚಸೂನಾಗೃಹಸ್ಥಸ್ಯ ಚುಲ್ಲಿಪೇಷಣ್ಯುಪಸ್ಕರಃ ॥ ಕಂಡನೀಚೋದ ಕುಂಭಶ್ಚ ಬಧ್ಯತೇ ಯಾಸ್ತು ವಾಹಯನ್ ॥''** ಬೀಸುವವಳ್ಳು - ವಲೆ - ವನಿಕೆ - ಕಸಬರಿಗೆ - ನೀರಿನ ಪಾತ್ರ. ತಿಳಿದೋ ಅಥವಾ ತಿಳಿಯದೆಯೋ ಕೆಲವು ಪಾಪಗಳು ಘಟಿಸುತ್ತವೆ. ೧) ಅಂದರೆ ಬೀಸುವಾಗ - ವನಿಕೆಯಿಂದ ಕುಟ್ಟುವಾಗ -ಗುಡಿಸುವಾಗ - ನೀರಿನ ಪಾತ್ರೆ ವಲೆ ಮೊದಲಾದವುಗಳ ಮೂಲಕ ಹುಳ ಮೊದಲಾದವು ಸಾಯುವುದರ ಪರಿಹಾರ, ೨) ನಮ್ಮಿಂದ ತಿಳಿದೋ ಅಥವಾ ತಿಳಿಯದೆಯೋ ಪಾಪಗಳು ಘಟಿಸುತ್ತವೆ. ಇದನ್ನು ಪಂಚಭೂತಗಳು (ಅಂದರೆ ಪೃಥ್ವೀ = ಅಪ್ = ತೇಜ = ವಾಯು = ಆಕಾಶ) ಆಗಿಂದಾಗಲೇ ತಿಳಿದುಕೊಳ್ಳುತ್ತವೆ. ಅಂದರೆ ನಮ್ಮಿಂದ ಆಚರಿಸುತ್ತಿರುವ ಶುಭಾಶುಭ ಕರ್ಮಗಳನ್ನು ಆಗಿಂದಾಗಲೇ ತಿಳಿಯುವ ಶಕ್ತಿಯು ಈ ಪಂಚಭೂತಕ್ಕೆ ಇರುವುದರಿಂದ ನಮ್ಮ ಪಾಪಕ್ಷಯಕ್ಕೆ ವೈಶ್ವ ದೇವವನ್ನು ಪ್ರತಿನಿತ್ಯ ಆಚರಿಸಬೇಕು. (ಈ ಪಂಚ ತತ್ವಗಳ ತೃಪ್ತಿಗಾಗಿ) ಮತ್ತು ಪಾಪಗಳ ನಿವೃತ್ತಿಗಾಗಿ) ದೇವತೆಗಳಲ್ಲಿ ಮೊರೆ ಇಡುವುದು (ಉಪನಿಷತ್ತು) **''ವೈಶ್ವಾನರಃ ಪ್ರವಿಶತ್ಯತಿಥಿಃ ಬ್ರಾಮ್ಹಣೋ ಗೃಹಾನ್ ॥ ತಸ್ಯೈ ತಾಗುಂಶಾಂತಿಂ ಕುರ್ವಂತಿ ಹರ ವೈವಸ್ವತೋದಕಂ॥''** ತಾನಾಗಿಯೇ ಅತಿಥಿಯಾಗಿ ಮನೆಗೆ ಬಂದ ಬ್ರಾಮ್ಹಣನನ್ನು ಆಸನ ಭೋಜನಾದಿಗಳನ್ನು ಕೊಟ್ಟು ಸತ್ಕರಿಸಬೇಕು.

''ನ್ಯಾಯಾಗತ ಧನಸ್ತತ್ವ ಜ್ಞಾನನಿಷ್ಠೋऽತಿಥಿಪ್ರಿಯಃ ॥ ಶ್ರಾದ್ಧಕೃತ್ ಸತ್ಯವಾದೀಚ ಗೃಹಸ್ಥೋಽಪಿಹಿ ಉಚ್ಯತೇ ॥'' ಅಖಂಡ ಜ್ಞಾನ ನಿಧಿಯಾದ ವೈದಿಕ ತತ್ವಗಳನ್ನು ನಿಷ್ಠೆಯಿಂದ ಅನುಷ್ಠಾನ ಮಾಡುವವನೂ ಮತ್ತು ಸನ್ಮಾರ್ಗದಿಂದ ಧನಾರ್ಜನೆ ಮಾಡುವವನೂ ಅತಿಥಿ ಸೇವೆ ಪಿತೃಸೇವೆ (ಪಿತೃಕರ್ಮ) ಆಚರಿಸುವವನೂ ಸತ್ಯವ್ರತಗಳನ್ನಾಚರಿಸುವ ಗೃಹಸ್ಥನು ದೇಹಾಂತ್ಯದಲ್ಲಿ ಅಮೃತತ್ವವನ್ನು ಸಂಪಾದಿಸಿಕೊಳ್ಳುತ್ತಾನೆ. (ಸಹಧರ್ಮಿಣೀ) **''ಪತ್ಯಾಭರ್ತ್ರಾ ಸಹ ಧರ್ಮ = ದಾನ = ಯಜ್ಞಾದಿ ಅಸ್ಯಾಃ ಅಸ್ತೀತಿ ॥''** ಪತಿಯೊಡನೆ ಈಕೆಗೂ ದಾನ ಯಜ್ಞಾದಿ ಧರ್ಮ ಕಾರ್ಯಗಳು ನಡೆಯುತ್ತಿರುವುದರಿಂದ ಸಹಧರ್ಮಿಣೀ ಎನ್ನುವರು. **''ಪತ್ಯುರನಯಾ ಸಹ ಯಜ್ಞಯೋಗಃ ಸಂಬಧ್ಯತೇ''** ಗಂಡನಿಗೆ ವೇದೋಕ್ತ ಯಜ್ಞಾದಿ ಅಧಿಕಾರವು ಹೆಂಡತಿಯಿಂದಲೇ ಪ್ರಾಪ್ತವಾಗುತ್ತದೆ. ವಿದ್ಯುಕ್ತವಾಗಿ ವಿವಾಹಿತನಾದ ಪುರುಷನಿಗೆ ಔಪಾಸನವೇ ಮೊದಲಾದ ಯಜ್ಞಾಧಿಕಾರವು ಪ್ರಾಪ್ತವಾಗುತ್ತದೆ. (ಧರ್ಮಪತ್ನೀ) ಪತಿಯೊಡನೇ ಧರ್ಮಾಚರಣೆಯಲ್ಲಿ ಸಮಭಾಗಿನಿಯಾಗಿರುವ ಕಾರಣ ಧರ್ಮ ಪತ್ನೀ ಎನ್ನುವರು. **''ಬ್ರಾಮ್ಹಣಾನುಪಸೇವೇತ ನಿತ್ಯಂ ರಾಜಾ ಸಮಾಹಿತಃ ॥ ಸಂಯುಕ್ತಂ ಬ್ರಾಮ್ಹಣೈಃ ಕ್ಷತ್ರಂ ಮೂಲಂ ಲೋಕಾಭಿರಕ್ಷಣೇ ॥''** ವಿಚಾರಶೀಲನೂ ಪ್ರಜಾರಕ್ಷಕನೂ ಕ್ಷಾತ್ರ ತೇಜದಿಂದ ಕೂಡಿದ ರಾಜನು ಜ್ಞಾನಿಗಳನ್ನು ಪ್ರತಿನಿತ್ಯವೂ ಆಶ್ರಯಿಸತಕ್ಕದ್ದು. ಯಾಕೆಂದರೆ ಜ್ಞಾನಿಗಳ ಸಲಹೆಗಳ ಮೇರೆಗೆ ರಾಜ್ಯದ ಆಡಳಿತವನ್ನು ಮಾಡಬೇಕು. ಜ್ಞಾನಿಗಳ ಅನುಮತಿಯ

ಪ್ರಕಾರ ನಡೆದುಕೊಳ್ಳುವ ರಾಜನೇ ರಾಷ್ಟ್ರವನ್ನು ರಕ್ಷಿಸಲು ಸಮರ್ಥನಾಗುತ್ತಾನೆ. (ಮನುಸ್ಮೃತಿ) **"ವೇದೋದಿತಂಸ್ವಕಂ ಕರ್ಮ ನಿತ್ಯಂ ಕುರ್ಯಾದತಂದ್ರಿತಃ ॥ ತದ್ಧಿಕುರ್ವನ್ ಯಥಾಶಕ್ತಿ ಪ್ರಾಪ್ನೋತಿಪರಮಾಂಗತಿಮ್ ।"** ವೇದಗಳಲ್ಲಿ ಹೇಳಿದ ಪ್ರಕಾರ ಆಲಸ್ಯವನ್ನು ಬಿಟ್ಟು ತಮ್ಮ ಆಶ್ರಮ ಧರ್ಮ ಪ್ರಕಾರ ಸತ್ಕರ್ಮಗಳನ್ನು ಪ್ರತಿನಿತ್ಯದಲ್ಲೂ ಆಚರಿಸಬೇಕು. ವೇದೋಕ್ತ ಕರ್ಮಗಳನ್ನು ಮಾಡುವವನು ಪರಮ ಪದವನ್ನು ಅಮೃತತ್ವವನ್ನು ಪಡೆಯುತ್ತಾನೆ.

ಬ್ರಮ್ಹಚಾರಿಗಳಲ್ಲಿ ನಾಲ್ಕು ವಿಧಗಳು

೧) ಗಾಯತ್ರೀ ಬ್ರಮ್ಹಚಾರಿ - ನಿರಂತರ ಗಾಯತ್ರೀ ಉಪಾಸನೆ ಮಾಡುತ್ತಿರುವುದು.

೨) ವೈದಿಕ ಬ್ರಮ್ಹಚಾರಿ - ವೇದಗಳನ್ನು ಅಭ್ಯಾಸ ಮಾಡುವುದು (ನಾಲ್ಕೂ)

೩) ನೈಷ್ಠಿಕ ಬ್ರಮ್ಹಚಾರಿ - ನಿಷ್ಠೆಯಿಂದ ನಿರಂತರ ಅನುಷ್ಠಾನ ಮಾಡುತ್ತಿರುವುದು .

೪) ಪ್ರಾಜಾಪತ್ಯ ಬ್ರಮ್ಹಚಾರಿ - ಸದಾಬ್ರಮ್ಹ ಚಿಂತನೆ ಮಾಡುತ್ತಿರುವುದು.

ಈ ನಾಲ್ಕೂ ವಿಧಾನಗಳೂ ಬ್ರಮ್ಹಚರ್ಯಾಶ್ರಮದ ಕರ್ತವ್ಯ ನಿಯಮಗಳು. (ತಂದೆಯೇ ಮಗನಿಗೆ ಗಾಯತ್ರೀ ಉಪದೇಶ ಮಾಡುವ ಉದ್ದೇಶ) ತನ್ನ ಪರಂಪರಾಗತಾಗಿ ನಡೆಸಿಕೊಂಡು ಬಂದ ಗಾಯತ್ರೀ ಸಂಪತ್ತು ಮತ್ತು ಅದರಿಂದುಟಾದ ಬ್ರಮ್ಹವರ್ಚಸ್ಸು ಮುಂದೆ ತನ್ನ ಮಗನ ಮೂಲಕ ಅಭಿವೃದ್ಧಿಯಾಗಿ ಸದ್ಬುದ್ಧಿ, ಸತ್ಕರ್ಮ, ಸದಾಚಾರ ಸದಸದ್ವಿವೇಕ ವಿಚಾರಗಳು ಸತ್ಕೀರ್ತಿ ಈ ಮೂಲಕ ತನ್ನ ಪರಂಪರೆಯಲ್ಲಿ (ಋಷಿ ಪರಂಪರೆ) ಚಿರಕಾಲ ಬಾಳಬೇಕೆನ್ನುವ ಉದ್ದೇಶದಿಂದಲೇ ತಂದೆಯು ಮಗನಿಗೆ ಉಪದೇಶ ಮಾಡುತ್ತಾನೆ. ಇಷ್ಟಕ್ಕೇ ತಂದೆಯ ಕರ್ತವ್ಯ ಮುಗಿಯಲಿಲ್ಲ. ಯಾಕೆಂದರೆ ವೇದಾಧ್ಯಯನ ಅಧಿಕಾರ ಪ್ರಾಪ್ತಿಗಾಗಿ ಉಪನಯನ ಮಾಡುತ್ತೇನೆಂದು ಸಂಕಲ್ಪಮಾಡಿರುತ್ತಾನೆ. ಆದುದರಿಂದ ವೇದಾಧ್ಯಯನ ಮಾಡಿಸುವ ಜವಾಬ್ದಾರಿ ತಂದೆಯ ಮೇಲಿದೆ. (ಕೌಪೀನ ಧಾರಣೆಯ ಉದ್ದೇಶ) ಇಂದ್ರಿಯ ನಿಗ್ರಹ ಮಾಡುವುದಕ್ಕೋಸ್ಕರ ಕೌಪಿನ ಧಾರಣ ಮಾಡಿಕೊಂಡು ಬ್ರಮ್ಹಚರ್ಯವನ್ನು ಪರಿಪಾಲನೆ ಮಾಡುವುದು .

೧) ಅರ್ಥಜ್ಞಾನಪೂರ್ವಕ ವೇದಾಧ್ಯಯನ ಮಾಡುವುದು. ೨) ಅಗ್ನಿಕಾರ್ಯ, ೩) ಭಿಕ್ಷಾಟನೆ, ತಾನು ಶ್ರೀಮಂತನೆಂಬ ದುರಹಂಕಾರ ಖಂಡನೆ. ೪) ದೇವ ಋಷಿ ತರ್ಪಣ, ೫) ಪಂಚಮೂರ್ತಿ ಪೂಜೆ, ೬) ಗಾಯತ್ರೀ ಉಪಾಸನೆ (ಬ್ರಮ್ಹವರ್ಚಸ್ಸು = ಅರ್ಥ ಜ್ಞಾನ ಪೂರ್ವಕ ವೇದಾಧ್ಯಯನ ಮಾಡಿ ಅದರ ತತ್ವಗಳನ್ನು ತಿಳಿದು ವೇದೋಕ್ತ ಅನುಷ್ಠಾನ ಮಾಡುವುದರಿಂದ ಉಂಟಾದ ವರ್ಚಸ್ಸೇ ಬ್ರಮ್ಹವರ್ಚಸ್ಸು. (ಜಪ ಲಕ್ಷಣ) (ತಜ್ಜ ಪಸ್ತದರ್ಥಭಾವನಂ) ಜಪದ ಅರ್ಥವನ್ನು ಚಿಂತಿಸುತ್ತಾ ಮಂತ್ರವನ್ನು ಮನಸ್ಸಿನಿಂದಾ ಪುನಃ ಪುನಃ ಆವರ್ತಿಸುವುದೇ (ಜಪ) (ಸ್ಮೃತಿ) **"ಬ್ರಮ್ಹ ವೇದಸ್ತದಧ್ಯಯನಾರ್ಥಂ ಆಚಾರ್ಯಂ ಆಚರಣೀಯಂ ಸಮಿಧಾಧಾನ ಭೈಕ್ಷ್ಯಚರ್ಯೋರ್ಧ್ವರೇತಸ್ತ್ವಾದಿಕಂ ಬ್ರಮ್ಹಚಾರಿಭಿಃ ಅನುಷ್ಠೀಯಮಾನ ಕರ್ಮ ಬ್ರಮ್ಹಚರ್ಯಂ ॥ ಶುಕ್ರೀಯ = ಉಪನಿಷತ್ = ಗೋದಾನ = ಸಮ್ಮಿತ = ಸಮಾವರ್ತನ ॥ ಗುರುಣಾನುಮತಃ ಸ್ನಾತ್ವಾ ಸಮಾವೃತ್ತೋ ಮಥಾವಿಧಿ ॥ ಉದ್ವಹೇ ತದ್ವಿಜೋ ಭಾರ್ಯಾಂ ಸವರ್ಣಾಂ ಲಕ್ಷಣಾನ್ವಿತಾನ್ ॥ ಮನುಸ್ಮೃತಿ ॥"** ಶ್ರೇಷ್ಠ ಜ್ಞಾನಕುಲದಲ್ಲಿ ಹುಟ್ಟಿದ ಕುಮಾರನು ಗುರುವಿನಿಂದ ಅರ್ಥ ಜ್ಞಾನಪೂರ್ವಕ ವೇದಾಧ್ಯಯನ

ಮಾಡಿ ಗುರುವಿನ ಅನುಮತಿಯನ್ನು ಪಡೆದು ವಿಧಿಪೂರ್ವಕವಾಗಿ ಸಮಾವರ್ತನೆಯನ್ನು ಮಾಡಿಕೊಂಡು ತನಗೆ ಅನುರೂಪಳೂ ಸಜಾತೀಯಳೂ ಶ್ರೇಷ್ಠಜ್ಞಾನಿಯಾದ ಕುಮಾರಿಯನ್ನು ವರಿಸಿಕೊಳ್ಳಬೇಕು. ಸಮಾವರ್ತನ ಪ್ರಯೋಗದಲ್ಲಿ **"ವಿದ್ಯಾಂತೇ ಗುರುಂ ಅರ್ಥದಾನೇನ ಸಂತೋಷ್ಯ ಸಮಾವರ್ತನಂ ಕುರ್ಯಾತ್ ॥"** ಗುರುಕುಲದಲ್ಲಿ ವೇದಜ್ಞರೂ ತಪೋಧನರೂ ವೇದಾಧ್ಯಯನ ಸಂಪನ್ನರೂ ಆದ ಗುರುವಿನಿಂದ ವೇದಾಧ್ಯಯನ ಮಾಡಿಕೊಂಡು ಗುರುದಕ್ಷಿಣೆ ಕಾಣಿಕೆಯನ್ನು ಕೊಟ್ಟ ಗುರುವಿನ ಆಶೀರ್ವಾದವನ್ನು ಪಡಕೊಂಡು ವಿಧಿಪೂರ್ವಕವಾಗಿ ಸಮಾವರ್ತನೆಯನ್ನು ಮಾಡಿಕೊಳ್ಳಬೇಕು. ಸಮಾವರ್ತನಂ (ಸಮ್ಯಕ್ ಆವರ್ತನಂ) ವೇದಾಧ್ಯಯನ ಮಾಡಿಕೊಂಡು ಗುರುಕುಲದಿಂದ ಹಿಂದಿರುಗಿ ಬರುವಿಕೆಗೆ ಸಮಾವರ್ತನವೆನ್ನುವರು. (ಮನುಸ್ಮೃತಿ) **"ವೇದಾನಧೀತ್ಯ ವೇದೌವಾ ವೇದಂ ವಾಪಿ ಯಥಾಕ್ರಮಂ ॥ ಅವಿಪ್ಲುತ ಬ್ರಮ್ಹಚರ್ಯೋ ಗೃಹಸ್ಥಾಶ್ರಮ ಮಾವ ಸೇತ್॥"** ನಾಲ್ಕೂ ವೇದಗಳನ್ನೂ ಅಧ್ಯಯನ ಮಾಡಬೇಕು. ಅಥವಾ ಎರಡು ವೇದಗಳನ್ನಾದರೂ ಅಧ್ಯಯನ ಮಾಡಬೇಕು. ಅಶಕ್ತನಾದಲ್ಲಿ ಒಂದು ವೇದವನ್ನಾದರೂ ಅರ್ಥ ಜ್ಞಾನ ಪೂರ್ವಕ ಅಧ್ಯಯನ ಮಾಡಿ ಗೃಹಸ್ಥಾಶ್ರಮವನ್ನು ಸ್ವೀಕಾರ ಮಾಡಬೇಕು. ಸಮಾವರ್ತನ ಹೋಮದಲ್ಲಿ ಪಲಾಶ ಸಮಿಧವನ್ನು ತುಪ್ಪದಲ್ಲಿ ತೋಯಿಸಿ ಹವನಿಸುವ ಮಂತ್ರ. (ವೇದ) **"ಇಮಗುಂ ಸ್ತೋಮ ಮರ್ಹತೇ ಜಾತವೇದಸೇ ರಥಮಿವ ಸಂಮಹೇ ಮಾಮನೀಷಯಾ ॥ ಭದ್ರಾಹಿನಃ ಪ್ರಮತಿರಸ್ಯ ಸಂಸದ್ಯಗ್ನೇ ಸಖ್ಯೇ ಮಾರಿಷಾಮ ವಯಂ ತವಸ್ವಾಹಾ ॥"** (ಅರ್ಹತೇಜಾತವೇದಸೇ) ನಮ್ಮಿಂದ ಸ್ತುತಿ ಪೂಜಾ ಹವನಾದಿಗಳನ್ನು ಸ್ವೀಕರಿಸುವವನೂ ಮತ್ತು ಎಲ್ಲಾ ವಿಧದ ಐಶ್ವರ್ಯಗಳ ಉತ್ಪಾದಕನೂ ಆದ ಅಗ್ನಿಗೋಸ್ಕರ (ರಥ ಇವ) ರಥಕ್ಕೆ ಸಮಾನ (ಮನೀಷಾ ಇಮಂ ಸ್ತೋಮಂ ಸಂಮಹೇಮ) ಸದ್ಬುದ್ಧಿಯ ಮೂಲಕವಾಗಿ ನಮ್ಮ ಸೇವೆಯನ್ನು ಆ ದೇವನಿಗೆ ಸಮರ್ಪಣೆ ಮಾಡುತ್ತೇವೆ. (ಅಸ್ಯ ಸಂಸದಿ) ಈ ತೇಜೋಮಯನ ಸಮೀಪದಲ್ಲೇ ನಾವು ಇರುವುದರಿಂದ ಅಂದರೆ ಇವನ ಆರಾಧನೆಯಲ್ಲೇ ನಿರತರಾಗಿರುವುದರಿಂದ (ನಃ ಪ್ರಮತಿಃ ಭದ್ರಾಹಿ) ನಮ್ಮ ಬುದ್ಧಿಯು ಮಂಗಲವನ್ನುಂಟು ಮಾಡುವಂತಹದಾಗುತ್ತದೆ. (ಹೇ ಅಗ್ನೇ ತವಸಖ್ಯೇ ವಯಂ ಮಾರಿಷಾಮ) ಅಖಂಡ ತೇಜೋಮಯನೇ ನಿನ್ನ ಮಿತ್ರತ್ವವನ್ನು ಸಂಪಾದಿಸಿಕೊಂಡ ನಾವು ಯಾವಾಗಲೂ ದುಃಖಿಗಳಾಗುವುದಿಲ್ಲ. ನಮಗೆ ಸದಾ ಸುಖಾಶಾಂತಿಯನ್ನುಂಟು ಮಾಡಿ ಸಂರಕ್ಷಿಸು (ಭಾವ) ನಮ್ಮಿಂದ ಸ್ತುತಿ ಪೂಜಾ ಹವನಾದಿಗಳನ್ನು ಸ್ವೀಕರಿಸುವವನೂ ಮತ್ತು ಎಲ್ಲಾ ವಿಧದ ಐಶ್ವರ್ಯಗಳ ಉತ್ಪಾದಕನೂ ಆದ ಅಗ್ನಿಗೋಸ್ಕರ ರಥಕ್ಕೆ ಸಮಾನ (ವಿಶಾಲವಾದ) ಸದ್ಬುದ್ಧಿಯ ಮೂಲಕ ನಮ್ಮ ಸೇವೆಯನ್ನು ನಿನಗೆ ಸಮರ್ಪಿಸುತ್ತೇನೆ. ನಾವು ಸದಾ ಈ ದೇವನ ಆಶ್ರಯದಲ್ಲೇ ಇರುವುದರಿಂದ ನಮ್ಮ ಬುದ್ಧಿಯು ವಿಚಲಿತವಾಗದೇ ಮಂಗಲ ಕಾರ್ಯಗಳನ್ನು ಮಾಡುವಂತದಾಗುತ್ತದೆ. ಸರ್ವವ್ಯಾಪಕನಾದ ದೇವನೇ ನಿನ್ನ ಮಿತ್ರತ್ವವನ್ನು ಸಂಪಾದಿಸಿಕೊಂಡ ನಾವು ಯಾವಾಗಲೂ ದುಃಖಿಗಳಾಗುವುದಿಲ್ಲ. ನಿನ್ನ ಅನುಗ್ರಹದಿಂದ ಸುಖ ಶಾಂತಿಯನ್ನು ಅಮೃತತ್ವವನ್ನು ನಾವು ಸಂಪಾದಿಸಿಕೊಳ್ಳುತ್ತೇವೆ. ಈ ಮಂತ್ರದಲ್ಲಿ **"ಅಸ್ಯ ಸಂಸದಿನಃ ಪ್ರಮತಿಃ ಭದ್ರಾ,"** ನಾವು ಸದಾ ಈ ದೇವನ ಸಮೀಪದಲ್ಲೇ ಇದ್ದು ನಿರಂತರ ಆರಾಧಿಸುತ್ತಿರುವುದರಿಂದ

ನಮ್ಮ ಬುದ್ಧಿಯು ನಿರಂತರ ಮಂಗಲವಾದ ಶುಭಕಾರ್ಯಗಳನ್ನು ಮಾಡುವಂತಹದಾಗುತ್ತದೆ. **"ಅಗ್ನೇ ಸಖ್ಯೇ ಮಾರಿಷಾಮ"** ಎಂತ ಹೇಳಿದೆ. ಅಂದರೆ ಈ ದೇವನ ಮಿತ್ರತ್ವವನ್ನು ಸಂಪಾದಿಸಿಕೊಂಡವನು ಎಂದೂ ಯಾವಾಗಲೂ ದುಃಖಿಯಾಗುವುದಿಲ್ಲ. (ವಿವಾಹ ಸಂಸ್ಕಾರ)

"ಚತುರ್ಣಾಮಾಶ್ರಮಾಣಾಂ ಹಿ ಗಾರ್ಹಸ್ಥಂ ಶ್ರೇಷ್ಠಮಾಶ್ರಮಮ್ ॥" ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಶ್ರೇಷ್ಠ ಆಶ್ರಮವೆಂದು ಸ್ಮೃತಿಕಾರರು ಹೇಳಿರುತ್ತಾರೆ. (ಯಾಜ್ಞವಲ್ಕ್ಯ ಸ್ಮೃತಿ) **"ಕರ್ಮಸ್ಮಾರ್ತಂ ವಿವಾಹಾಗ್ನೌ ಕುರ್ವೀತ ಪ್ರತ್ಯಹಂ ಗೃಹೇ ॥"** ವಿವಾಹಾಗ್ನಿ ಎಂದರೆ ಗೃಹ್ಯಾಗ್ನಿಯಲ್ಲಿ ಗೃಹಸ್ಥಾಶ್ರಮಿಯು ಪ್ರತಿನಿತ್ಯದಲ್ಲೂ ವಿಧಿಪೂರ್ವಕವಾಗಿ ವೇದ ಮತ್ತು ಸ್ಮೃತಿಗಳಲ್ಲಿ ಹೇಳಿದ ಪ್ರಕಾರ ಕರ್ಮಗಳನ್ನು ಮಾಡಬೇಕು. (ಧನ್ಯೋ ಗೃಹಸ್ಥಾಶ್ರಮಃ) ಗೃಹಸ್ಥಧರ್ಮವು ಹೆಚ್ಚಿನದು (ಮನುಸ್ಮೃತಿ) **"ಯಥಾ ವಾಯುಂ ಸಮಾಶ್ರಿತ್ಯ ವರ್ತಂತೇ ಸರ್ವಜಂತವಃ ॥ ತಥಾಗೃಹಸ್ಥಾಶ್ರಮ ಮಾಶ್ರಿತ್ಯ ವರ್ತಂತೇ ಸರ್ವ ॥ ಆಶ್ರಮಾಃ॥"** ಯಾವ ಪ್ರಕಾರ ಪ್ರಾಣ ವಾಯುವಿನ ಆಶ್ರಯದಿಂದ ಮನುಷ್ಯಾದಿ ಎಲ್ಲಾ ಜೀವಿಗಳೂ ಬದುಕುತ್ತವೆಯೋ ಅಂತೆಯೇ ಗೃಹಸ್ಥಾಶ್ರಮದ ಆಧಾರದಿಂದಲೇ ಉಳಿದ ಮೂರು ಆಶ್ರಮಿಗಳೂ ಬಾಳುತ್ತವೆ. ಯಾಕೆಂದರೆ ಬ್ರಮ್ಹಚಾರೀ = ವಾನಪ್ರಸ್ಥ = ಸನ್ಯಾಸ ಈ ಮೂರು ಆಶ್ರಮಿಗಳೂ ಗೃಹಸ್ಥಾಶ್ರಮಿಗಳಿಂದಲೇ ಜನ್ಮಿಸುತ್ತಾರೆ. ಮತ್ತು ನಮ್ಮ ಋಷಿ ಪರಂಪರೆಯು ಅಂದರೆ ಜ್ಞಾನ ಜನಾಂಗದ ಅಭಿವೃದ್ಧಿಯು ಆದರೇನೇ ರಾಷ್ಟ್ರವು ಸುಸ್ಥಿತಿಯಲ್ಲಿರುತ್ತದೆ ಮತ್ತು ವೇದೋಕ್ತ ಕರ್ಮಗಳು ನಿರಂತರ ನಡೆದು ಲೋಕಕಲ್ಯಾಣವಾಗುವುದರಿಂದ ಸ್ಮೃತಿಕಾರರು ಶ್ರೇಷ್ಠವೆಂದು ಹೇಳಿರುತ್ತಾರೆ. (ವಿವಾಹದ ಉದ್ದೇಶ) (ಶ್ಲೋಕ) **"ಸಂಯಮಃ ಕುಲರಕ್ಷಾಚ ಸುಪ್ರಜೋತ್ಪಾದನಂ ತಥಾ ॥ ಪ್ರೇಮೈಕ್ಯಂ ಭಗವದ್ಭಕ್ತಿ ವಿವಾಹೇ ಪಂಚಹೇತವಃ ॥"**

೧) **ಸಂಯ್ಯಮಃ** - ಸ್ವೇಚ್ಛಾಚಾರಿಯಾಗದೇ ಸಂಯ್ಯಮಿಯಾಗಬೇಕು. ವೈದಿಕಧರ್ಮ, ವೇದೋಕ್ತ ಕರ್ಮಗಳನ್ನಾಚರಿಸುತ್ತ ಧರ್ಮ ವಿರುದ್ಧ ಯಾವುದೇ ಕರ್ಮಗಳನ್ನೂ ಆಚರಿಸದೇ ಧರ್ಮಪತ್ನಿಯೊಡನೆ ಔಪಸನಾದಿ ಕರ್ಮಗಳನ್ನು ಆಚರಿಸುತ್ತ ತನ್ನ ಧರ್ಮಪತ್ನಿಯಲ್ಲಿ ಅನುರಕ್ತನಾಗಿ ನಡೆದುಕೊಳ್ಳಬೇಕು. ಬ್ರಮ್ಹಚರ್ಯ ಶಿಥಿಲವಾಗದಂತೇ ವರ್ತಿಸಬೇಕು.

೨) **ಕುಲರಕ್ಷಾಚ** - ತನ್ನ ವಂಶದ ಅಭಿವೃದ್ಧಿಗಾಗಿ ಋಷಿ ಕಾಲಗಳಿಂದಲೂ ನಡೆದುಬಂದ ಪರಂಪರೆಯು ಮಧ್ಯದಲ್ಲೇ ವಿಚ್ಛಿತಿಯಾಗಬಾರದು. ಆದ ಕಾರಣ ಗೃಹಸ್ಥ ಧರ್ಮ ಸ್ವೀಕರಿಸಬೇಕು.

೩) **ಸುಪ್ರಜೋತ್ಪಾದನಮ್** - ಶ್ರೇಷ್ಠ ಜ್ಞಾನ ಸಂಪನ್ನ ಪ್ರಜೆಗಳನ್ನು ಪಡಕೊಳ್ಳಬೇಕು. ಯಾಕೆಂದರೆ ರಾಷ್ಟ್ರದಲ್ಲಿ ಜ್ಞಾನಿಗಳ ಅಭಿವೃದ್ಧಿಯಾಗಿ ವೇದೋಕ್ತ ಕರ್ಮಗಳು ನಡೆಯುತ್ತಿದ್ದು ಜ್ಞಾನ ಸಂಪನ್ನ ರಾಷ್ಟ್ರವಾಗಬೇಕೆನ್ನುವದೇ ನಮ್ಮ ಪೂರ್ವಜರಾದ ಋಷಿಗಳ ಅಭಿಪ್ರಾಯ. (ವೇದ) **"ಪ್ರಜಯಾಗ್ನೇ ಅಮೃತತ್ವಮಶ್ಯಾಮ್ ॥ ಪ್ರಜಾಭಿರಗ್ನೇ ಅಮೃತತ್ವಮಶ್ಯಾ ॥ ಪ್ರಜಯಾಹಿ ಮನುಷ್ಯಃ**

ಪೂರ್ಣಃ ॥ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ ॥" ಶ್ರೇಷ್ಠ ಸಂತತಿಗಳ ಅಭಿವೃದ್ಧಿಯಾಗುತ್ತಿರಬೇಕೆನ್ನುವುದೇ ಋಷಿಗಳ ಅಭಿಪ್ರಾಯ.

೪) **ಪ್ರೇಮೈಕ್ಯಮ್** - ದಾಂಪತ್ಯ ಜೀವನದಲ್ಲಿ ಪ್ರೀತಿ ವಿಶ್ವಾಸಗಳಿರಬೇಕು. ಮಿತ್ರರ ಪ್ರೀತಿಗೂ ದಾಂಪತ್ಯ ಪ್ರೀತಿಗೂ ವ್ಯತ್ಯಾಸವಿದೆ. ಯಾಕೆಂದರೆ ಮಿತ್ರರಲ್ಲಿ ಒಮ್ಮೊಮ್ಮೆ ಮಿತ್ರರು ಶತ್ರುಗಳಾಗಬಹುದು. ದಾಂಪತ್ಯ ಪ್ರೇಮ ಅವರೀರ್ವರ ಜೀವಮಾನವಿರುವವರೆಗೂ ಸುಖ ದುಃಖಾದಿಗಳಲ್ಲಿ ಸಮಾನತ್ವದಿಂದ ನಡೆದುಕೊಳ್ಳಬೇಕು. ಆದ ಕಾರಣ ಪ್ರೇಮೈಕ್ಯಂ ಎಂತ ಹೇಳಿದೆ. ಪ್ರೇಮದಲ್ಲಿ ಐಕ್ಯತೆ ಇರಬೇಕು. (ಸಹೈಕೀಭಾವ) ಅವನ ಸುಖವೇ ಅವಳ ಸುಖ. ಅವಳ ಸುಖವೇ ಅವನ ಸುಖ. ಅಂತೆಯೇ ಧಾರ್ಮಿಕ ವಿಚಾರದಲ್ಲೂ ಪರಸ್ಪರ ಐಕ್ಯತೆ ಇರಬೇಕು.

೫) **ಭಗವದ್ಭಕ್ತಿ** - ಭಗವಂತನಲ್ಲಿ ದೃಢವಾದ ನಂಬಿಕೆ ಬೇಕು. ಯಾಕೆಂದರೆ ಬಹುಕಾಲಗಳವರೆಗೂ ದಾಂಪತ್ಯ ಜೀವನವು ಸುವ್ಯವಸ್ಥಿತ ರೀತಿಯಿಂದ ಬಾಳುತ್ತಾ ಅನೇಕ ಸತ್ಕಾರ್ಯಗಳನ್ನು ಮಾಡುವುದಕ್ಕೆ ಭಗವಂತನ ಅನುಗ್ರಹ ಬೇಕೇ ಬೇಕು. ಆದ ಕಾರಣ ವೇದದಲ್ಲಿ **"ರುದ್ರಸ್ಯಹೇತಿಃ ಪರಿವೋವೃಣಕ್ತು"** ಸತ್ಯ ಸ್ವರೂಪನೂ ವಿಶ್ವಾತೀತನೂ ವಿಶ್ವವ್ಯಾಪಿಯೂ ಆದ ಆ ದೇವನ ಆರಾಧನೆ ನಿರಂತರ ಲೋಕ ಕಲ್ಯಾಣಕ್ಕಾಗಿ ನಡೆಯುತ್ತಿರಬೇಕೆನ್ನುವುದೇ ನಮ್ಮ ಪೂರ್ವಜರಾದ ಋಷಿಗಳ ಅಭಿಪ್ರಾಯ. ಆದ ಕಾರಣ ನಿರಂತರ ರುದ್ರಾನುಷ್ಠಾನ ನಡೆಯುತ್ತಿರಬೇಕು. **"ವಿವಾಹೇ ಪಂಚ ಹೇತವಃ"** ಈ ಐದು ಕಾರಣಗಳ ಮೂಲಕ ವಿಧ್ಯುಕ್ತ ವಿವಾಹವಾಗಬೇಕು. ದಾಂಪತ್ಯ ಜೀವನವು ಚಿರಕಾಲ ಬಾಳುವುದಕ್ಕೆ ಈಶ್ವರಾನುಗ್ರಹ ಅತ್ಯವಶ್ಯ. ವಿವಾಹವಾಗುವ ಮತ್ತೊಂದು ಮುಖ್ಯ ಉದ್ದೇಶ ಪೂರ್ವ ಸಂಸ್ಕಾರಗಳಲ್ಲಿ ಪ್ರಧಾನ ಹದಿನಾರು ಸಂಸ್ಕಾರಗಳು ವಿವಾಹ ಸಂಸ್ಕಾರ ಕೂಡಿದರೇನೇ ಹದಿನಾರು ಸಂಸ್ಕಾರಗಳಾಗುತ್ತವೆ. ಇದನ್ನು ಬಿಟ್ಟರೆ ಹದಿನೈದು ಸಂಸ್ಕಾರ. ಹದಿನಾರೂ ಸಂಸ್ಕಾರಗಳನ್ನೂ ಪಡಕೊಳ್ಳಲೇಬೇಕು. ಸಂಸ್ಕಾರಗಳ ಪೂರ್ತಿಗಾಗಿ ವಿವಾಹ. ಉದಾಹರಣೆ - ವಿವಾಹಿತನಾಗದೇ ಕೇವಲ ಬ್ರಮ್ಹಚಾರಿಯಾಗಿ ಮೃತಪಟ್ಟರೆ ಔರ್ಧ್ವದೇಹಿಕ ಸಂಸ್ಕಾರಕ್ಕೆ ಅರ್ಹತೆ ಇರುವುದಿಲ್ಲ. ಆದ ಕಾರಣ ಅರ್ಕ ವಿವಾಹವನ್ನು ಮಾಡಿಕೊಂಡೇ ಅಂತ್ಯೇಷ್ಟಿ ಸಂಸ್ಕಾರವನ್ನು ಮಾಡಬೇಕೆಂದು ಶಾಸ್ತ್ರ ವಿಧಿಸಿರುತ್ತದೆ. ಅಂದರೆ ಅರ್ಕವಿವಾಹ ಮಾಡಿಕೊಂಡು ಗೃಹಸ್ಥನಾದ ನಂತರವೇ ಅಂತ್ಯೇಷ್ಟಿ ಸಂಸ್ಕಾರಕ್ಕೆ ಅರ್ಹತೆ ಬರುತ್ತದೆ.

೧) ವಾಗ್ದಾನ - ವಾಗ್ದತ್ತ - ವಧುವಿನ ಹಾಗೂ ವರನ ಪಾಲಕರು ತಮ್ಮ ಹಿಂದಿನ ಪಿತೃಗಳ ನಾಮೋಚ್ಚಾರಣೆ ಮಾಡಿ ಇಂತಹ ಗೋತ್ರದ ವಧುವನ್ನು ಇಂತಹ ಗೋತ್ರದ ವರನಿಗೆ ಕೊಡುವುದಾಗಿ ದೇವ ಹಾಗೂ ಬ್ರಾಮ್ಹಣರ ಸಂಮ್ಮುಖದಲ್ಲಿ ವಾಕ್ಕಿನ ಮೂಲಕ ಕೊಡುತ್ತಾರೆ. ವೃಣೀಧ್ವಂ = ಪ್ರದಾಸ್ಯಾಮಿ ಎಂತ ಮೂರು ಸಲ ಹೇಳುತ್ತಾರೆ. ಅನಂತರ ಇಂತಹ ಗೋತ್ರ ವರ ವಿಷಯೇ ಭವಂತೋ ನಿಶ್ಚಿತಾ ಭವಂತು ಹೇಳಿ ಆಶೀರ್ಮಂತ್ರ ಮೂಲಕ ಆಶೀರ್ವಾದ ಮಾಡುತ್ತಾರೆ. (ಮಧುಪರ್ಕ) , ೨) ವರೋಪಚಾರ - (ಸಂಕಲ್ಪ) **"ವಿವಾಹಾರ್ಥಮಾಗತಾ**

ಅಸ್ಮೈಸ್ನಾತಕಾಯವರಾಯ ಕನ್ಯಾದಾನಾಂಗಭೂತಂ ಮಧುಪರ್ಕಂ ಕರಿಷ್ಯೇ ॥'' ಕನ್ಯಾಪಾಲಕರು (ತಾಯಿ ತಂದೆಯರು) ವರನ ಪಾದಗಳನ್ನು ತೊಳೆದು, ಪೂಜಿಸಿ, ಪಂಚಾಮೃತವನ್ನು ಮತ್ತು ಲಡ್ಡುಕಾದಿಗಳನ್ನು ಕೊಟ್ಟು ಸಂಪ್ರೀತನನ್ನಾಗಿ ಮಾಡುತ್ತಾರೆ. (ನಿರೀಕ್ಷಾ) ವೇದಘೋಷ ಪುರಸ್ಸರವಾಗಿ ವಧುವರರನ್ನು ಮಂಟಪಕ್ಕೆ ಕರೆತಂದು ಮೊದಲಿನಂತೆ ತಾಯಿ ತಂದೆಯರ (ಎರಡೂ ಕಡೆಯವರ) ಹಿಂದಿನ ತಂದೆಯವರ ನಾಮ ಗೋತ್ರಚ್ಚಾರಣೆಯ ಮೂಲಕ ವಧುವನ್ನು ವರನಿಗೆ ಕೊಡುವುದಾಗಿ ಮೂರು ಸಾರಿ ಹೇಳಿ ಮಾಲಾಧಾರಣ ಮಾಡಿಸುತ್ತಾರೆ. ನಂತರ ವಧುವಿನ ಪಾಲಕರಿಂದ ಕನ್ಯಾದಾನದ ಸಂಕಲ್ಪ ಮಾಡಿಸಿ ವಧುವನ್ನು ವರನಿಗೆ ಕೊಡುವುದು. ಕನ್ಯಾ ಪಾಲಕನು ವರನಿಂದ ಪ್ರತಿಜ್ಞೆ ಮಾಡಿಸುತ್ತ **''ಧರ್ಮೇಚ -ಅರ್ಥೇಚ- ಕಾಮೇಚ ನಾತಿಚರಿತವ್ಯಾತ್ವಯೇಯಮ್ ॥''** ಧರ್ಮಾರ್ಥ ಕಾಮಗಳಲ್ಲಿ ಅತಿಕ್ರಮಿಸಬಾರದೆಂದು (ನಾತಿಚರಾಮಿ) ಅತಿಕ್ರಮಿಸಿ ಹೋಗುವುದಿಲ್ಲವೆಂದು ಪ್ರತಿಜ್ಞೆ ವರನು ಮಾಡುತ್ತಾನೆ. **''ಸಹಧರ್ಮಶ್ಚರ್ಯತಾಮ್ ॥ ಚರಿಷ್ಯಾಮಿ''** ದಂಪತಿಗಳ ದೀರ್ಘಾಯುಷ್ಯಕ್ಕಾಗಿ ಅಕ್ಷತಾರೋಪಣ ಹೇಳಿದೆ.

''ವಧೂವರಯೋಃ ಆಯುರ್ವರ್ಧನಾರ್ಥಂ ಪರಸ್ಪರಮಕ್ಷತಾರೋಪಣಂ ಕುರುತಃ ॥ (ಕಂಠಸೂತ್ರ) **ಮಾಂಗಲ್ಯಧಾರಣೆ ॥** (ಸಪ್ತಪದಿ) **ಸ್ಮೃತಿವಚನ ॥ ಸ್ವಗೋತ್ರಾತ್ ಭ್ರಶ್ಯತೇನಾರೀ ವಿವಾಹೇ ಸಪ್ತಮೇಪದೇ ॥''** ಸಪ್ತಪದಿಯಲ್ಲಿ ವಧುವು ತಂದೆಯ ಗೋತ್ರವನ್ನು ಬಿಟ್ಟು ಗಂಡನ ಗೋತ್ರಕ್ಕೆ ಸೇರುತ್ತಾಳೆ.

ಸಪ್ತಪದಿ

ವರನು ತನ್ನವಳಾದ ವಧುವನ್ನು ಧರ್ಮಾರ್ಥ ಕಾಮಗಳಲ್ಲಿ ಮೀರಿ ನಡೆಯುವುದಿಲ್ಲವೆಂದು ಅವಳ ಬಲಗೈ ಹಿಡಿದು ಪ್ರತಿಜ್ಞೆ ಮಾಡುತ್ತಾನೆ. ಲೌಕಿಕ ವ್ಯವಹಾರದಲ್ಲೂ ಅವಳಿಗೆ ಮಾರ್ಗದರ್ಶಕನಾಗಿ ಜ್ಞಾನ ಮಾರ್ಗದಲ್ಲಿಯೂ ಅವಳಿಂದ ಹೆಜ್ಜೆ ಹಾಕಿಸುತ್ತಾ ಅವಳನ್ನು ಸನ್ಮಾರ್ಗದಲ್ಲಿಯೂ ವೈದಿಕ ಮಾರ್ಗದಲ್ಲಿಯೂ ನಡೆಸಿಕೊಂಡು ಹೋಗುವ ಜವಾಬ್ದಾರಿಯೂ ವರನ ಮೇಲೆ ಇರುವುದರಿಂದ ಏಳು ಹೆಜ್ಜೆಗಳನ್ನು ಬಹಿರಂಗವಾಗಿ ಹಾಕಿಸಿ ಜ್ಞಾನಭೂಮಿಯಲ್ಲಿ ಅವಳಿಂದ ಹೆಜ್ಜೆ ಹಾಕಿಸುವುದರ ಪ್ರತೀಕ ಸಪ್ತಪದಿ. (ವೇದ)

೧) **''ಏಕಮಿಷೇ ವಿಷ್ಣುಸ್ತ್ವಾನ್ವೇತು॥''** ಜೀವನಾಧಾರವಾದ ಅನ್ನಪ್ರಾಪ್ತಿಗಾಗಿ ವಿಷ್ಣುವು ನಿನ್ನ ಮೊದಲನೇ ಹೆಜ್ಜೆಯನ್ನು ಹಿಂಬಾಲಿಸಲಿ. ಅಂದರೆ ವಿಷ್ಣುವು ನಿನಗೆ ಸದಾ ಸಹಾಯಕನಾಗಿರಲಿ.

೨) **''ದ್ವೇಊರ್ಜೇವಿಷ್ಣುಸ್ತ್ವಾನ್ವೇತು॥''** ಶಾರೀರಿಕ ಬಲವೃದ್ಧಿಗಾಗಿ ರಸಪದಾರ್ಥಕ್ಕಾಗಿ ವಿಷ್ಣುವು ನಿನ್ನ ಎರಡನೇ ಹೆಜ್ಜೆಯನ್ನು ಹಿಂಬಾಲಿಸಲಿ. ಅಂದರೆ ನಿನಗೆ ಸದಾ ಸಹಾಯಕನಾಗಿರಲಿ.

೩) **''ತ್ರೀಣಿವ್ರತಾಯ ವಿಷ್ಣುಸ್ತ್ವಾನ್ವೇತು॥''** ವ್ರತ ನಿಯಮಾದಿಗಳ ಅನುಷ್ಠಾನಕ್ಕೋಸ್ಕರ ವಿಷ್ಣುವು ನಿನಗೆ ನಿರಂತರ ಸಹಾಯಕನಾಗಿರಲಿ.

೪) **''ಚತ್ವಾರಿಮಾಯೋ ಭವಾಯ ವಿಷ್ಣುಸ್ತ್ವಾನ್ವೇತು ॥''** ನಮ್ಮ ಸುಖ ಸಮೃದ್ಧಿಗಾಗಿ ವಿಷ್ಣುವು ನಿನ್ನ ನಾಲ್ಕನೇ ಹೆಜ್ಜೆಯನ್ನು ಹಿಂಬಾಲಿಸಲಿ - ಸಹಾಯಕನಾಗಲಿ.

೫) **''ಪಂಚಪಶುಭ್ಯೋ ವಿಷ್ಣುಸ್ತ್ವಾನ್ವೇತು ॥''** ಗೋ ಧನ ಕನಕಾದಿ ಎಲ್ಲಾ ಐಶ್ವರ್ಯಗಳ ಪ್ರಾಪ್ತಿಗಾಗಿ ವಿಷ್ಣುವು ನಿನ್ನ ಐದನೇ ಹೆಜ್ಜೆಯನ್ನು ಹಿಂಬಾಲಿಸಲಿ. - ಸದಾ ಸಹಾಯ ಮಾಡಲಿ. (ಶ್ರೀರ್ಹಿಪಶವಃ) ವೇದದಲ್ಲಿ ಎಲ್ಲಾ ವಿಧದ ಐಶ್ವರ್ಯಗಳಿಗೂ ಪಶು ಶಬ್ದವನ್ನು ಉಪಯೋಗಿಸಿರುತ್ತಾರೆ.

೬) **''ಷಡ್ರಾಯಸ್ಪೋಷಾಯ ವಿಷ್ಣುಣಸ್ತ್ವಾನ್ವೇತು ॥''** (ರೈ - ಸಂಪತ್ತು) ಪುತ್ರ ಪೌತ್ರಧನ ಕನಕಾದಿ ಎಲ್ಲಾ ವಿಧದ ಐಶ್ವರ್ಯಗಳ ಪ್ರಾಪ್ತಿಗಾಗಿ ವಿಷ್ಣುವು ನಿನ್ನ ಆರನೇ ಹೆಜ್ಜೆಯನ್ನು ಹಿಂಬಾಲಿಸಲಿ. ಅಂದರೆ ಸಹಾಯಕನಾಗಿರಲಿ. **''(ಪಾಠಾಂತರ) ಷಡೃತುಭ್ಯೋ ವಿಷ್ಣುಸ್ತ್ವಾನ್ವೇತು''** ಆಯಾಯ ಋತುಮಾನಗಳಲ್ಲಿ ಪಡೆಯಬೇಕಾದುದನ್ನು ಪಡೆಯುವುದಕ್ಕಾಗಿ ನಿನ್ನ ಆರನೇ ಹೆಜ್ಜೆಯನ್ನು ವಿಷ್ಣುವು ಹಿಂಬಾಲಿಸಲಿ. ಅಂದರೆ ನಮ್ಮ ಜೀವನಕ್ಕೆ ಬೇಕಾದ ಎಲ್ಲಾ ವಿಧದ ಸಂಪತ್ತುಗಳ ಪ್ರಾಪ್ತಿಗಾಗಿ ವಿಷ್ಣುವು ನಿನ್ನ ಆರನೇ ಹೆಜ್ಜೆಯನ್ನು ಹಿಂಬಾಲಿಸಿ ಸಂರಕ್ಷಿಸಲಿ.

೭) **''ಸಪ್ತಸಪ್ತಭ್ಯೋ ಹೋತ್ರಾಭ್ಯೋ ವಿಷ್ಣುಸ್ತ್ವಾನ್ವೇತು ''** ಹೋತೃ = ಪ್ರಶಾಸ್ತ್ರ = ಮೊದಲಾದ ಏಳು ಮಂದಿ ಹೋತೃಗಳೂ ಒದಗಿ ಬರುವುದಕ್ಕಾಗಿ ನಿನ್ನ ಏಳನೇ ಹೆಜ್ಜೆಯನ್ನು ವಿಷ್ಣುವು ಹಿಂಬಾಲಿಸಲೀ. ಅಂದರೆ ಅನ್ನದಿಂದ ಹಿಡಿದು ಯಜ್ಞಕರ್ಮಗಳವರೆಗಿನ ಅಭಿವೃದ್ಧಿ ಈ ಮೂಲಕವಾಗಿ ಆಗಬೇಕಾದ ಕಾರಣ ಸಪ್ತಪದಿ ವಿಧಾನವಿದೆ.

ಈ ಸಪ್ತಪದಿಯಲ್ಲಿ ಓಂ ಭೂಃ= ಭುವಃ = ಸುವಃ = ಮಹಃ = ಜನಃ = ತಪಃ = ಸತ್ಯಂ ಈ ಮೊದಲಾದ ಏಳೂ ಲೋಕಗಳವರೆಗಿನ ವ್ಯಾಪಕತೆಯ ಭಾವ ಅಡಗಿರುತ್ತದೆ. ವಧೂವರರಾದ ದಂಪತಿಗಳಿಗೆ ಧರ್ಮಕಾರ್ಯಗಳಲ್ಲಿ ಸಮಾನ ಅಧಿಕಾರವಿರುತ್ತದೆ. ಮತ್ತು ಖ್ಯಾತಿ - ಸಿದ್ಧಿ ಈ ಸಪ್ತಪದೀ ಕರ್ಮದಿಂದ ಸಂಪನ್ನವಾಗುತ್ತದೆ. (ವೇದ) **''ಸಖಾಸಿ ಸಪ್ತಪದಾ ಅಭೂಮ ॥ ''** ಏಳು ಹೆಜ್ಜೆಗಳನ್ನು ಹಾಕಿದ ನೀನು ನನ್ನ ಸಖಳಾಗಿರುತ್ತಿ. **''ಸಖ್ಯಂತೇಗಮೇಯಮ್ ''** ನಾವಿಬ್ಬರೂ ಸಖ್ಯದಿಂದ ಅಂದರೆ ಪರಸ್ಪರ ಹೊಂದಾಣಿಕೆಯಿಂದ ಜೀವನವನ್ನು ನಡೆಸಿಕೊಂಡು ಹೋಗುವಾ. **''ಸಖ್ಯಾತ್ತೇ ಮಾಯೋಷಮ್ ।''** ನಾವು ಮಿತ್ರತ್ವದಿಂದ ವಿಮುಕ್ತರಾಗದಿರಲಿ ॥ **''ಸಖ್ಯಾನ್ಮೇಮಾಯೋಷ್ಠಾಃ ॥''** ನೀನೂ ಕೂಡಾ ನನ್ನ ಮಿತ್ರತ್ವದಿಂದ ದೂರಾಗಬೇಡ. **''ಸಮಯಾವ ಸಂಕಲ್ಪಾವಹೈ ।''** ನಮ್ಮಿಬ್ಬರ ಅಭ್ಯುದಯ ನಿಃಶ್ರೇಯಸ ಸಿದ್ಧಿಗಾಗಿ ಸತ್ಕರ್ಮಾಚರಣೆಗೆ ದೃಢ ಸಂಕಲ್ಪ ಮಾಡುವಾ ॥ **''ಇಷಮೂರ್ಜಮಭಿ ಸಂವಸಾತ್''** ಅನ್ನವನ್ನೂ ಬಲವನ್ನೂ ನಾವಿಬ್ಬರೂ ಅನುಭವಿಸುತ್ತಾ ಒಮ್ಮನಸ್ಸಿನಿಂದ ಬಾಳುವಾ. **''ಸಂವ್ರತಾ ಸಮಚಿತ್ತಾ ನ್ಯಾಕರಂ ॥''** ನಮ್ಮಿಬ್ಬರ ನಿಯಮಗಳೂ ಮತ್ತು ಮನೋವೃತ್ತಿಯಾ ಒಂದಾಗುವಂತೆ ಮಾಡೋಣ. (ದ್ಯೌರಹಂ) ನಾನು ದ್ಯುಲೋಕ (ಪೃಥಿವೀತ್ವಂ) ನೀನು ಭೂಮಿ (ಋಕ್‌ತ್ವಂ) ನೀನು ರುಕ್ (ಸಾಮಾಹಂ) ನಾನು ಸಾಮವಾಗಿದ್ದೇನೆ. (ರೇತೋಹಂ) ನಾನು ರೇತಸ್ಸು ಅಂದರೆ) ಜೀವ ಶಕ್ತಿ ಆಗಿದ್ದೇನೆ.

(ರೇತೋಭೃತ್ವಂ) ನೀನು ರೇತಸ್ಸನ್ನು ಧರಿಸುವವಳಿದ್ದೀಯೆ. (ಪುಗುಂಸೇ ಪುತ್ರಾಯ ವೇತ್ತವೈ) ಅಂಥವಳಾದ ನೀನು ನನ್ನೊಡನೆ ಸುಪುತ್ರ ಪ್ರಾಪ್ತಿಗಾಗಿಯೂ (ಶ್ರಿಯೈ) ನಾನಾ ವಿಧದ ಸಂಪತ್ತುಗಳನ್ನು ಸಂಪಾದಿಸುವುದಕ್ಕೋಸ್ಕರ ಸಮಾನ ಧರ್ಮವುಳ್ಳವಳಾಗು ಮತ್ತು ವೇದೋಕ್ತ ಕರ್ಮಗಳನ್ನಾಚರಿಸುತ್ತಾ ನಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವಾ. (ಮನುಸ್ಮೃತಿ) **''ಪಾಣಿಗ್ರಹಣಿಕಾ ಮಂತ್ರಾ ನಿಯತಂದಾರ ಲಕ್ಷಣಮ್ ॥ ತೇಷಾಂ ನಿಷ್ಠಾತು ವಿಜ್ಞೇಯಾ ವಿದ್ವದ್ಭಿಃ ಸಪ್ತಮೇ ಪದೇ ॥ ''** ಭಾರ್ಯಾ ಸ್ವೀಕಾರ ಕಾರ್ಯವನ್ನು ಊರ್ಜಿತಗೊಳಿಸುವಲ್ಲಿ ವಿವಾಹಕ್ಕೆ ಉಪಯುಕ್ತವಾದ ಮಂತ್ರಗಳನ್ನು ಶ್ರೇಷ್ಠ ಜ್ಞಾನಿಗಳು ಯೋಜಿಸಿರುತ್ತಾರೆ. ಈ ಮೂಲಕವೇ ವಿವಾಹ ಸಂಸ್ಕಾರವು ಊರ್ಜಿತವಾದದ್ದಾಗುತ್ತದೆ. ಅಂದರೆ ಭೂಲೋಕದಿಂದ ಏಳೂ ಲೋಕಗಳ ಪರ್ಯಂತ ವ್ಯಾಪಕವಾಗುತ್ತದೆ. ಈ ಮೂಲಕ ದೇವತೆಗಳು ಸಂತುಷ್ಟರಾಗುತ್ತಾರೆ. ಧರ್ಮಶಾಸ್ತ್ರವಾಗಲೀ, ಕಾನೂನಾಗಲೀ ಅಲ್ಲಗಳೆವಂತಿಲ್ಲ. ಸಪ್ತಪದಿಯನ್ನುಕಾನೂನು ಒಪ್ಪುತ್ತದೆ. ಸಪ್ತಪದಿಯನ್ನು ಲಕ್ಷಿಸಿಯೇ **''ಸಕೃತ್ ಕನ್ಯಾ ಪ್ರದೀಯತೆ''** ಎಂತ ಹೇಳಿರುತ್ತಾರೆ. ಆದರೆ ಕನ್ಯಾದಾನವು ಒಂದೇ ಸಾರೆ ನಡೆಯತಕ್ಕದ್ದು. (ಜ್ಞಾನಿಗಳ ಮತ) ಮನುಷ್ಯನಲ್ಲಿ ದುಷ್ಟಶಕ್ತಿ ಬೆಳೆದ ಹಾಗೆ ಅವನ ನೈತಿಕ ಮತ್ತು ಆತ್ಮಶಕ್ತಿಯು ವಿಕಾಸಹೊಂದುವುದಿಲ್ಲ. ಅವನಲ್ಲಿ ಪಾಶವೀಶಕ್ತಿಯು ಬೆಳೆಯುವುದರಿಂದ ಜ್ಞಾನಮಾರ್ಗವನ್ನು ಬಿಟ್ಟು ಈ ಮೂಲಕ ಆತ್ಮಾನುಭವವೂ ಆಗುವುದಿಲ್ಲ. ಪಶುಗಳಂತೇ ಆಯುಷ್ಯ ಕಳೆಯುತ್ತಾ ಆಸುರೀ ಲೋಕಕ್ಕೆ ಹೋಗುತ್ತಾನೆ. ಅಜ್ಞಾನ ಜನ್ಯ ಕರ್ಮಗಳೇ ಅಧಃಪತನಗೊಳಿಸುತ್ತವೆ. **''ಗ್ರಹಸ್ಥಾಶ್ರಮ ಧರ್ಮ ನಿಲುಮೆ ॥''** (ವೇದ) **''ಯಾ ದಂಪತೀ ಸಮನಸಾ ಸುನುತ ಆಚಧಾತವಃ॥ ವೇದಾಸೋ ನಿತ್ಯಯಾ ऽऽಶಿರಾ ॥''** (ವೇದಾಸಃ) ವೇದಜ್ಞರಾದ ಜ್ಞಾನಿಗಳೇ (ಯಾದಂಪತೀ) ಯಾವ ಪತಿ ಪತ್ನಿಯರು (ಸಮನಸಾ ಸುನುತಃ) ಒಂದೇ ಮನಸ್ಸಿನಿಂದ ಕೂಡಿದವರಾಗಿ ಪ್ರತಿನಿತ್ಯ ಆಚರಿಸಬೇಕಾದ ಪಂಚಮಹಾಯಜ್ಞಗಳನ್ನು ಅಚರಿಸುತ್ತಾ (ಚ) ಮತ್ತು (ಆಧಾತವಃ) ವೇದೋಕ್ತ ಸ್ತುತಿ ಹಾಗೂ ಉಪಾಸನಾದ್ವಾರಾ ಜಗದೀಶ್ವರನಲ್ಲಿ ಅಚಲವಾದ ಶ್ರದ್ದೆಯ ಮೂಲಕ (ನಿತ್ಯಯಾಶಿರಾ) ಅನವರತವಾಗಿ ದೇವನನ್ನು ಆರಾಧಿಸುತ್ತಿರುವ ಮೂಲಕ ಅವನ ಕೃಪೆಗೆ ಪಾತ್ರರಾಗಿ ಎಲ್ಲಾ ವಿಧದ ಸುಖ ಸಮೃದ್ಧಿಯನ್ನೂ ಜೀವನಾಧಾರವಾದ ಎಲ್ಲಾ ಐಶ್ವರ್ಯಗಳನ್ನೂ ಸಂಪಾದಿಸಿ ದೇಹಾಂತ್ಯದಲ್ಲಿ ಅಮೃತತ್ವವನ್ನು ಪಡಕೊಳ್ಳುತ್ತಾರೆ. (ಭಾವ) ವೇದಜ್ಞರಾದ ಜ್ಞಾನಿಗಳೇ ಯಾವ ಪತಿಪತ್ನಿಯರು ಒಂದೇ ಮನಸ್ಸಿನಿಂದ ಕೂಡಿದವರಾಗಿ ಪ್ರತಿನಿತ್ಯವೂ ಆಚರಿಸಬೇಕಾದ ಪಂಚಮಹಾಯಜ್ಞಗಳನ್ನು ಆಚರಿಸುತ್ತಾ ವೇದೋಕ್ತಸ್ತುತಿ ಹಾಗೂ ಉಪಾಸನಾದ್ವಾರಾ ಆ ದೇವನಲ್ಲಿ ಅಚಲವಾದ ಶ್ರದ್ಧಾ ಭಕ್ತಿಗಳ ಮೂಲಕ ಅನವರತವಾಗಿ ಆರಾಧಿಸುತ್ತಿರುವ ಮೂಲಕ ಎಲ್ಲಾ ವಿಧದ ಸುಖ ಸಮೃದ್ದಿಯನ್ನೂ ಜೀವನಾಧಾರವಾದ ಎಲ್ಲಾ ಐಶ್ವರ್ಯಗಳನ್ನೂ ಸಂಪಾದಿಸಿ ಆ ದೇವನ ಅನುಗ್ರಹದಿಂದ ಮೋಕ್ಷವನ್ನು ಪಡಕೊಳ್ಳುತ್ತಾರೆ. (ಉಪನಿಷತ್) **''ಯಜ್ಞಾಯಾಯೈಕರೋತಿ ಗಾರ್ಹಪತ್ಯ ಏವಂ ತಜ್ಜುಹೋತಿ॥''** ಗೃಹ್ಯಶ್ರೌತಸೂತ್ರ ಪ್ರಕಾರ ವೇದ ಮಂತ್ರಗಳಿಂದ ಗಾರ್ಹಪತ್ಯಾಗ್ನಿಯಲ್ಲಿ ಪ್ರತಿನಿತ್ಯವೂ ದಂಪತಿಗಳು ಸಾಯಂಪ್ರಾತರೌಪಾಸನವನ್ನು ಮಾಡಲೇಬೇಕು. (ವೇದ) **''ಅಘೋರ ಚಕ್ಷುರಪತಿಘ್ನೇದಿ ಶಿವಾ ಪಶುಭ್ಯಃ ಸುಮನಾಃ ಸುವರ್ಚಾಃ ॥ ಜೀವಸೂರ್ದೇವಕಾಮಾಃಸ್ಯೋನಾ ಶನ್ನೋಭವ ದ್ವಿಪದೇಶಂ ಚತುಷ್ಪದೇ॥''** (ಘೋರ ಚಕ್ಷುಃ) ಸಿಟ್ಟಿನಿಂದ ಕೂಡಿದ ಕಣ್ಣುಳ್ಳವಳು (ಅಘೋರ ಚಕ್ಷುಃ) ಶಾಂತ ಸ್ವಭಾವದಿಂದ ಕೂಡಿದ ಕಣ್ಣುಳ್ಳವಳು (ಅಪತಿಘ್ನೇತ್ರಿ) ಗಂಡನಿಗೆ ಹಿಂಸೆ ಕೊಡದವಳು . (ಶಿವಾ ಪಶುಭ್ಯಃ) ಗೋಮಹಿಷ್ಯಾದಿ ಎಲ್ಲಾ ಪಶುವರ್ಗಗಳಿಗೂ ಕ್ಷೇಮ ಮಾಡುವವಳು (ಎಲ್ಲಾ ಪಶುವರ್ಗಗಳನ್ನೂ ಸಂರಕ್ಷಿಸುವವಳು) (ಸುಮನಾಃ) ಪರಿಶುದ್ಧವಾದ ಮನಸ್ಸುಳ್ಳವಳು (ಸುವರ್ಚಾಃ) ಶ್ರೇಷ್ಠ ಕರ್ಮಾನುಷ್ಠಾನ ಮೂಲಕ ಉತ್ತಮ ವರ್ಚಸ್ಸನ್ನು ಸಂಪಾದಿಸುವವಳು (ಜೀವಸೂಃ) ಸುಪುತ್ರರಿಗೆ ಜನ್ಮಕೊಡುವವಳು (ದೇವಕಾಮಾಃ) ದೇವತೆಗಳ ಸೇವೆ ಮತ್ತು ಆರಾಧನೆಯಲ್ಲಿ ತತ್ಪರಳಾಗುವವಳು (ದ್ವಿಪದೇ) ದ್ವಿಪಾದಗಳುಳ್ಳ ಮನುಷ್ಯರಿಗೂ ಮತ್ತು (ಚತುಷ್ಪದೇ) ನಾಲ್ಕು ಕಾಲುಗಳಿಂದ ಸಂಚರಿಸುವ ಪಶುವರ್ಗಗಳಿಗೂ (ಸ್ಯೋನಾ) ಸುಖ ಶಾಂತಿಯನ್ನುಂಟು ಮಾಡುವವಳೂ (ಶಂಭವ) ಕಲ್ಯಾಣವನ್ನುಂಟು ಮಾಡುವವಳು (ಭವ) ಆಗು. (ಭಾವ) ಎಲೈ ವಧುವೇ ನೀನು ಶಾಂತಸ್ವಭಾವದವಳೂ ಪತಿಯನ್ನು ಅತ್ಯಂತ ಆದರದಿಂದ ನೋಡುವವಳೂ ಗೋಮಹಿಷ್ಯಾದಿ ಎಲ್ಲಾ ಪಶುವರ್ಗಗಳನ್ನೂ ಸಲಹುವವಳೂ ವೇದೋಕ್ತ ಕರ್ಮಾನುಷ್ಠಾನ ಮೂಲಕ ಉತ್ತಮ ವರ್ಚಸ್ಸನ್ನೂ ಸಂಪಾದಿಸುವವಳೂ ಮತ್ತು ಸುಪ್ರಜೆಗಳಿಗೆ ಜನ್ಮ ಕೊಡುವವಳೂ, ದೇವತಾ ಉಪಾಸನೆಯಲ್ಲಿ ತತ್ಪರತೆಯಿಂದನಡೆದುಕೊಳ್ಳುವವಳೂ, ಗುರುಹಿರಿಯರನ್ನೂ ಮನೆಯ ಜನರನ್ನು ಅಕ್ಕರತೆಯಿಂದ ನೋಡಿಕೊಳ್ಳುವವಳೂ ಪತಿಯೊಡನೆ ಪವಿತ್ರ ಕಾರ್ಯಗಳನ್ನು ಆಚರಿಸುತ್ತ ಲೋಕ ಕಲ್ಯಾಣಕ್ಕಾಗಿ ನಿರಂತರ ಭಗವಂತನನ್ನು ಆರಾಧಿಸಿ ಗ್ರಹಸ್ಥಾಶ್ರಮವನ್ನು ಪಾಲಿಸುತ್ತ ಶಾಶ್ವತ ಕೀರ್ತಿವಂತಳಾಗು. ವಿವಾಹ ಹೋಮ ಸಂಕಲ್ಪದಲ್ಲಿ - **''ಪ್ರತಿಗೃಹೀತಾಯಾಂ ಅಸ್ಯಾಂ ವಧ್ವಾಂ ಭಾರ್ಯಾತ್ವಾಯ ಸಿದ್ಧಯೇ ಗೃಹ್ಯಾಗ್ನಿ ಸಿದ್ಧಯೇಚ ಅನಯಾ ನವೋದಯಾ ವಧ್ವಾಸಹ ವಿವಾಹ ಹೋಮಂಕರಿಷ್ಯೇ ॥''** ಭಾರ್ಯಾತ್ವಸಿದ್ಧಿ ಹಾಗೂ ಗೃಹ್ಯಾಗ್ನಿ ಸಿದ್ಧಿಗಾಗಿ ನಾವು ನವದಂಪತಿಗಳು ಅಗ್ನಿ ದೇವನಲ್ಲಿ ಮಂತ್ರ ಪುರಃಸರವಾಗಿ ಹವನೀಯ ದ್ರವ್ಯ (ಲಾಜ) ಗಳಿಂದ ಹವನ ಮಾಡುತ್ತೇವೆ. (ವೇದ) **''ಮಮ ಹೃದಯೇ ಹೃದಯಂತೇ ಅಸ್ತು ಮಮಚಿತ್ತೇ ಚಿತ್ತ ಮಸ್ತುತೇ॥ ಮಮವಾಚ ಮೇಕ ಮನಾಶೃಣಿ ಮಾಮೇವಾನು ಪ್ರತ ಸಹಚರ್ಯಾಮಯಾಭವ॥''** ವಧುವೇ ನನ್ನನಿನ್ನ ಅಂತಃಕರಣವು ಒಂದಾಗಲೀ. ಮತ್ತು ನನ್ನ ನಿನ್ನ ಮನಸ್ಸು ಒಂದಾಗಲಿ. ನನ್ನ ಮಾತನ್ನು ನೀನು ಎಂದೂ ಧಿಕ್ಕರಿಸಿ ಹೋಗಬೇಡ. ನಾನು ಯಾವ ವೇದೋಕ್ತ ಕರ್ಮಗಳನ್ನೂ ವ್ರತಗಳನ್ನೂ ಆಚರಿಸುತ್ತೇನೋ ನೀನೂ ಸಹ ನನ್ನ ಆಚರಣೆಯನ್ನು ಆಚರಿಸುತ್ತಾ ನನ್ನ ಸಹಚಾರಿಣಿಯಾಗು. (ಇದು ವೇದ ವಚನ) (ವೇದ) **''ಗೃಭ್ಣಾಮಿತೇ ಸುಪ್ರಜಾಸ್ತ್ವಾಯ ಹಸ್ತಂ ಮಯಾಪತ್ಯಾ ಜರದಷ್ಟಿರ್ಯಥಾಸಃ॥ ಭಗೋ ಅರ್ಯಮಾ ಸವಿತಾ ಪುರಂಧಿರ್ಮಹ್ಯಂತ್ವಾದುರ್ಗಾರ್ಹಪತ್ಯಾಯ ದೇವಾಃ ॥''** ವರನು ತನ್ನ ಬಲಗೈಯ್ಯಿಂದ ವಧುವಿನ ಬಲಗೈ ಹಿಡಿದು ಈ ಮಂತ್ರವನ್ನು ಹೇಳುತ್ತಾನೆ. ಎಲೈ ವಧುವೇ ನಮ್ಮಿಬ್ಬರ ದೀರ್ಘಕಾಲಗಳವರೆಗೂ ದಾಂಪತ್ಯವು ವ್ಯವಸ್ಥಿತ ರೀತಿಯಿಂದ ಇರುವುದಕ್ಕಾಗಿಯೂ ಶ್ರೇಷ್ಠ ಪ್ರಜೆಗಳನ್ನು ಸಂಪಾದಿಸಿಕೊಳ್ಳಲಿಕ್ಕಾಗಿಯೂ ನಿನ್ನ ಕೈಯ್ಯನ್ನು ಹಿಡಿಯುತ್ತೇನೆ. ಸಕಲ ಸಂಪತ್ತುಗಳನ್ನು ಕೊಡುವ ದೇವತೆಯನ್ನೂ ಮತ್ತು ನಮ್ಮ ಶತ್ರುಗಳನ್ನು ನಾಶ ಮಾಡುವ ಶಕ್ತಿಯನ್ನೂ ಸವಿತಾ ದೇವನನ್ನೂ ಮತ್ತು ಎಲ್ಲಾ ದೇವತೆಗಳನ್ನೂ ಹೃತ್ಪೂರ್ವಕವಾಗಿ ಆರಾಧಿಸುತ್ತೇನೆ. ಈ ಎಲ್ಲಾ ದೇವತೆಗಳೂ

ನಮಗೆ ದೀರ್ಘ ಜೀವನವನ್ನು ಅನುಗ್ರಹಿಸಲಿ.

ವಧುವು ಹೇಳುವ ಮಂತ್ರ - **"ಇಯಂ ನಾರ್ಯುಪಬ್ರೂತೇಗ್ನೌಲಾಜಾನವಪಂತಿ ॥ ದೀರ್ಘಾಯುರಸ್ತು ಮೇಪತಿರ್ಜೀವಾತು ಶರದಃಶತಮ್ ॥" "ಅಗ್ನೌಲಾಜಾನ್ ಆವಪಂತಿ ಇಯಂ ನಾರೀ ಉಪಬ್ರೂತೇ ॥"** ಅಖಂಡ ತೇಜೋಮಯನಾದ ಅಗ್ನಿ ದೇವನಲ್ಲಿ ಹೊದಲನ್ನು ಸಮರ್ಪಿಸುತ್ತಾ ಈ ವಧುವು ಪ್ರಾರ್ಥಿಸುತ್ತಾಳೆ. **"ಮೇದೀರ್ಘಾಯುಃ ಅಸ್ತು ॥"** ನನಗೆ ದೀರ್ಘಾಯುಷ್ಯವನ್ನು ಕೊಡು ಮತ್ತು **"ಮೇಪತಿಃ ಶರದಃ ಶತಂ ಜೀವಾತು"** ನನ್ನ ಪತಿಗೆ ನೂರು ಶರತ್ಕಾಲಗಳವರೆಗೂ ಪರಿಶುದ್ಧವಾದ ಗೃಹಸ್ಥಾಶ್ರಮವನ್ನು ನೀನು ರಕ್ಷಿಸು. (ವೇದ) **"ಜೀವೇಮ ಶರದಃಶತಮ್॥"** (ಭಾವ) ಮನುಷ್ಯನು ಬಹುಕಾಲಗಳವರೆಗೂ ಬದುಕಿದ್ದು ತನ್ನ ಅಭ್ಯುದಯ ನಿಃಶ್ರೇಯಸ ಸಿದ್ಧಿಗಾಗಿ ಅನೇಕ ಸತ್ಕರ್ಮಗಳನ್ನು ಆಚರಿಸಬೇಕೆಂದು ನಮ್ಮ ಪೂರ್ವಜರಾದ ಮಹರ್ಷಿಗಳು ಪರಮಾತ್ಮನ ಉಪಾಸನೆಯನ್ನು ಬೋಧಿಸಿರುತ್ತಾರೆ. ಆದ ಪ್ರಯುಕ್ತ ಗೃಹಸ್ಥ ಧರ್ಮವನ್ನು ಸ್ವೀಕರಿಸಿದ ನವ ವಧುವು ಅಗ್ನಿ ದೇವನಲ್ಲಿ ಹೊದಲನ್ನು ಸಮರ್ಪಿಸುತ್ತ ಪ್ರಾರ್ಥಿಸುವುದೇನೆಂದರೆ ನನಗೆ ದೀರ್ಘ ಜೀವನವನ್ನು ಕೊಡು ಮತ್ತು ನನ್ನ ಪತಿಗೆ ನೂರು ಶರತ್ಕಾಲಗಳವರೆಗೂ ಸುಸ್ಥಿತಿಯಿಂದ ಜೀವಿಸುವಂತೇ ಅನುಗ್ರಹಿಸು (ಧರ್ಮಪತ್ನೀ) ಧರ್ಮಾಚರಣೆಗೆ (ವೈದಿಕ) ಸಹಭಾಗಿನಿಯಾಗಿರುವ ಕಾರಣ ಹೆಂಡತಿಗೆ ಧರ್ಮಪತ್ನಿ ಎನ್ನುವರು (ವೇದ) **"ಅಗ್ನೇಶರ್ಧ ಮಹತೇ ಸೌಭಗಾಯ ತವದ್ಯುಮ್ನಾನ್ಯುತ್ತ ಮಾನಿಸಂತು ॥ ಸಂಜಾಸ್ವತ್ಯಗುಂ ಸುಯಮ ಮಾಕೃಣಿಷ್ವ ಶತ್ರೂ್ರಯತಾ ಮಭಿತಿಷ್ಠಾ ಮಹಾಗುಂಸಿ ॥"** (ಅಗ್ನೇ) ಅಗ್ನಿ ದೇವತೇ ನೀನು (ಮಹತೇ ಸೌಭಗಾಯ ಶರ್ಧ) ನಮ್ಮಲ್ಲಿ ಮಹತ್ತರವಾದ ಸೌಭಾಗ್ಯ ಪ್ರಾಪ್ತಿಗೋಸ್ಕರ, ವೃದ್ಧಿಗೋಸ್ಕರ ನಮ್ಮ ದಾಂಪತ್ಯ ಜೀವನವನ್ನು ದೃಢಗೊಳಿಸು . (ದುಷ್ಟ ಶತ್ರುಗಳನ್ನು ನಾಶ ಮಾಡು) **"ತವದ್ಯುಮ್ನಾನಿ ಉತ್ತಮಾನಿಸಂತು"** ಯಾಕೆಂದರೆ ನಿನ್ನ ಕೀರ್ತಿಯು ದಿಗಂತವಾಗಿರುತ್ತದೆ. ನಿನ್ನ ತೇಜಸ್ಸು ಅಪಾರವಾಗಿರುತ್ತದೆ. **" ಸಂಜಾಸ್ವತ್ಯಂ ಸುಯಮಂ ಆಕೃಣುಷ್ವ "** ನಮ್ಮ ದಾಂಪತ್ಯ ಸಂಬಂಧವನ್ನು ಬಲಿಷ್ಠಗೊಳಿಸು ಮತ್ತು ಒಳ್ಳೇ ನಿಯಮದಂತೇ ನಡೆಯುವಂತೆ ಮಾಡು. **"ಶತ್ರೂಯತಾಂ ಮಹಾಂಸಿ ಅಭಿತಿಷ್ಠ"** ಮತ್ತು ನಮ್ಮ ಶತ್ರುಗಳ ತೇಜಸ್ಸನ್ನೂ ಮತ್ತು ಪರಾಕ್ರಮಗಳನ್ನೂ ನಾಶಮಾಡು. (ಭಾವ) ಅಗ್ನಿ ದೇವನೇ ನೀನು ಸೌಭಾಗ್ಯಾಭಿವೃದ್ಧಿಗೋಸ್ಕರ ನಮಗೆ ನಾನಾ ಪೀಡೆಗಳನ್ನುಂಟು ಮಾಡುವಂಥಾ ಶತ್ರುಗಳನ್ನು ನಾಶ ಮಾಡು. ಯಾಕೆಂದರೆ ನಿನ್ನ ಕೀರ್ತಿಯು ಮತ್ತು ತೇಜಸ್ಸು ಅಪಾರವಿರುತ್ತದೆ. ನಮ್ಮ ದಾಂಪತ್ಯ ಜೀವನವನ್ನು ಗಟ್ಟಿಮಾಡು. ಮತ್ತು ವೇದೋಕ್ತ ಸತ್ಕರ್ಮಗಳನ್ನಾಚರಿಸುವ ಸದಿಚ್ಛೆಯನ್ನು ಕೊಡು. ನಿಯಮ ಬದ್ಧವಾಗಿ ನಡಕೊಳ್ಳುವ ಸದ್ಬುದ್ಧಿಯನ್ನು ಕೊಡು ಮತ್ತು ನಮ್ಮ ದಾಂಪತ್ಯ ಜೀವನಕ್ಕೆ ಯಾವುದೇ ಚ್ಯುತಿಯು ಬಾರದಂತೆ ಮಾಡು. (ವೇದ) **"ಪುನಃ ಪತ್ನೀಮಗ್ನಿರದಾದಾಯುಥಾ ಸಹ ವರ್ಚಸಾ॥ ದೀರ್ಘಾಯುರಸ್ಯಾಯಃ ಪತಿರ್ಜೀವಾತಿ ಶರದಃಶತಮ್॥" (ಆಯುಷಾ ವರ್ಚಸಾ ಸಹ)** ದೀರ್ಘಾಯುಷ್ಯ ಮತ್ತು ತೇಜಸ್ಸಿನ ಸಂಗಡ **("ಅಗ್ನಿ ಪತ್ನೀಂ ಪುನಹ ಅದಾತ್")** ಅಗ್ನಿಯು ನನಗೆ ಪತ್ನಿಯನ್ನು ಕೊಟ್ಟನು (**" ಅಸ್ಯಾಃ ಯಃ ಪತಿಃ")** ಇವಳಿಗೆ ಯಾವಾತನು ಪತಿಯಾಗಿರುತ್ತಾನೋ ಅವನು **"ದೀರ್ಘಾಯುಃ ಶರದಃಶತಂ**

ಜೀವಾತಿ" ಅನೇಕ ಸತ್ಕರ್ಮಗಳನ್ನು ಆಚರಿಸುವುದಕ್ಕೋಸ್ಕರ ನೂರಾ ಇಪ್ಪತ್ತು ವರುಷ ಶರತ್ಕಾಲಗಳವರೆಗೆ ಬಾಳಲೀ. (ಭಾವ) ನನಗೆ ದೀರ್ಘಾಯುಷ್ಯವನ್ನೂ ಮತ್ತು ತೇಜಸ್ಸನ್ನೂ ಕೊಟ್ಟಿರುವ ಅಗ್ನಿದೇವನು ನನಗೆ ಪತ್ನಿಯನ್ನು ಕೊಟ್ಟನು. ಇವಳ ಪತಿಯಾದ ನನ್ನನ್ನು ವೇದೋಕ್ತ ಅನೇಕ ಶುಭ ಕಾರ್ಯಗಳನ್ನು ಆಚರಿಸುವುದಕ್ಕೋಸ್ಕರ ಶ್ರೇಷ್ಠ ಕುಲದಲ್ಲಿ ಜನ್ಮ ಕೊಟ್ಟು ನನ್ನನ್ನು ಸಂರಕ್ಷಿಸುತ್ತಿರುತ್ತಾನೆ. ನೂರು ಶರತ್ಕಾಲಗಳವರೆಗೂ ನನ್ನನ್ನು ಸಂರಕ್ಷಿಸಿ ನನ್ನ ಸೇವೆಯನ್ನು ಸ್ವೀಕರಿಸಿ ನನ್ನ ಜನ್ಮವು ಸಾರ್ಥಕವಾಗುವಂತೇ ಮಾಡು. ಮತ್ತು ಅಗ್ನಿ ದೇವನೇ ನಮ್ಮ ದಾಂಪತ್ಯ ಜೀವನವು ಚಿರಕಾಲ ಬಾಳುವಂತೆ ಅನುಗ್ರಹಿಸು. (ವೇದ) **"ಸುಬುಧ್ಯಸ್ವ ಸುಬುಧಾ ಬುಧ್ಯಮಾನಾ ದೀರ್ಘಾಯುತ್ವಾಯ ಶತಶಾರದಾಯ ಗೃಹಾನ್ ಗಚ್ಛ ಗೃಹಪತ್ನೀ ಯಥಾಸೋ ದೀರ್ಘಂತ ಆಯುಃ ಸವಿತಾ ಕೃಣೋತು"** (ಸುಬುಧಾ ಬುಧ್ಯಮಾನಾ) ಜಾಗೃತರನ್ನಾಗಿ ಮಾಡುವ ಉತ್ತಮ ಜ್ಞಾನದಿಂದ ಕೂಡಿದವರಾಗಿ **"ಶತಶಾರದಾಯ ದೀರ್ಘಾಯುತ್ವಾಯ ಪ್ರಬುಧ್ಯಸ್ವ "** ಒಂದು ಶತಮಾನಗಳವರೆಗೂ ಬಾಳುವ ದೀರ್ಘ ಜೀವನಕ್ಕೋಸ್ಕರ ಜಾಗೃತರಾಗಿದ್ದು (ಗ್ರಹಾನ್‌ಗಚ್ಛ) ನಿನ್ನ ಪತಿಯ ಮನೆಯಲ್ಲಿ ನಿರಂತರ ವಾಸವಾಗಿರು (ಯಥಾಗೃಹಪತ್ನೀ ಅಸಃ) ಗೃಹಸ್ಥಾಶ್ರಮ ಧರ್ಮದಂತೇ ವರ್ತಿಸು. **"ಸವಿತಾತೇ ದೀರ್ಘಂ ಆಯುಃ ಕೃಣೋತು॥ "** ಸೂರ್ಯ ದೇವನು ದಂಪತಿಗಳಿಗೆ (ನಿಮಗೆ) ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ಸದಾ ರಕ್ಷಿಸಲಿ. (ಭಾವ) ಜಾಗೃತರನ್ನಾಗಿ ಮಾಡುವ ಉತ್ತಮ ಜ್ಞಾನದಿಂದ ಕೂಡಿದವರಾಗಿ ಒಂದು ಶತಮಾನಗಳವರೆಗೂ ಬದುಕಿರುವ ದೀರ್ಘಬಾಳಿಗೋಸ್ಕರ ನಿನ್ನ ಪತಿಗೃಹದಲ್ಲಿ ಸದಾ ವಾಸವಾಗಿದ್ದು, ವೇದೋಕ್ತ ಕರ್ಮಗಳನ್ನು ಆಚರಿಸುತ್ತ ಗೃಹಸ್ಥ ಧರ್ಮದಂತೇ ಆಚರಿಸುತ್ತ ಸೂರ್ಯ ದೇವನು ನಿಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ಸದಾ ರಕ್ಷಿಸಲೀ (ವೇದ) **"ಅಗ್ನೇ ವ್ರತಪತೇ ವೈವಾಹಂ ವ್ರತಂ ಚರಿಷ್ಯಾಮಿ ತಚ್ಛಕೇಯಂ ತನ್ಮೇರಾಧತಾಂ** (ಸ್ವಾಹಾ) **ಅಹಮನೃತಾತ್ ಸತ್ಯಮುಪೈಮಿ ॥** (ಯಜುಃ) **ಹೇವ್ರತಪತೇ ಅಗ್ನೇ ।"** ಸತ್ಯವ್ರತಗಳಿಗೆ ಅಧಿಪಾತಿಯಾದ ಅಗ್ನಿ ದೇವನೇ (ವಿವಾಹ ವ್ರತಗಳಿಗೆ) ಅಧಿಪತಿಯಾದ ದೇವನೇ (ವ್ರತಂ ಚರಿಷ್ಯಾಮಿ) ವ್ರತವನ್ನು ಆಚರಿಸುವೆನು (ತಚ್ಛಕೇಯಂ) ಈ ವ್ರತವನ್ನು ಪೂರ್ತಿಗೊಳಿಸಲು ನಾನು ಸಮರ್ಥನಿರುವೆನು. (ತನ್ಮೇರಾಧ್ಯತಾಂ) ನನ್ನಿಂದ ಆಚರಿಸಲ್ಪಟ್ಟ ಈ ವ್ರತವು ಸಂಪೂರ್ಣ ಫಲದಾಯಕವಾಗಲೀ (ಅಹಂ) ನಾನು (ಅನೃತಾತ್) ಅಸತ್ಯಾದಿ ದುರ್ಮಾರ್ಗಗಳಿಂದ (ಸತ್ಯಮುಪೈಮಿ) ಸತ್ಯ ತತ್ವವಾದ ಸನ್ಮಾರ್ಗಗಳಲ್ಲಿ ನಡೆದುಕೊಳ್ಳುತ್ತೇನೆ. (ಭಾವ) ಉಪನಯನ ವಿವಾಹಾದಿ ಅನೇಕ ಸತ್ಯ ವ್ರತಗಳಿಗೆ ಅಧಿಪತಿಯಾದ ಅಗ್ನಿ ದೇವನೇ ಈ ವ್ರತಗಳನ್ನಾಚರಿಸುತ್ತೇನೆ. ಈ ವ್ರತಗಳನ್ನು ಪೂರ್ತಿಗೊಳಿಸಲು ಸಮರ್ಥನಿರುತ್ತೇನೆ. ಈ ವ್ರತಗಳು ನಮಗೆ ಸಂಪೂರ್ಣ ಫಲದಾಯಕವಾಗಲಿ. ಸನ್ಮಾರ್ಗ ಸತ್ಯವಾದ ವೇದೋಕ್ತಕರ್ಮಗಳ ಮೂಲಕ ಅಮೃತತ್ವವನ್ನು ಸಂಪಾದಿಸಿಕೊಳ್ಳಲು ನಮಗೆ ಅನುಗ್ರಹಿಸು. (ಸ್ಮೃತಿ) **"ಪ್ರಜನನಾರ್ಥಂ ಸ್ತ್ರಿಯಃ ಸೃಷ್ಟಾಃ ಸಂತಾನಾರ್ಥಂತು ಮಾನವಾಃ ॥ ತಸ್ಮಾತ್ ಸಾಧಾರಣೋಧರ್ಮಃ ಶೃತೌ ಪತ್ನ್ಯಾ ಸಹೋದಿತಃ ॥"** ಬ್ರಮ್ಹ ದೇವನು ಜಗತ್ತಿನ ವಿಶಾಲತೆಗಾಗಿ ಸ್ತ್ರೀಯರನ್ನು ಸೃಷ್ಟಿಸಿದನು. ಪುರುಷರು ಶ್ರೇಷ್ಠಜ್ಞಾನವಂತ ಸಂತಾನ ಪ್ರಾಪ್ತಿಗಾಗಿ ಸ್ತ್ರೀಯರನ್ನು ವಿಧ್ಯುಕ್ತವಾಗಿ ವಿವಾಹವಾದರು. ಆದ

ಕಾರಣ ಪತ್ನೀ ಸಹಿತವಾಗಿ ಯಜ್ಞಾದಿ ಅನೇಕ ಸತ್ಕರ್ಮಗಳನ್ನು ಆಚರಿಸುತ್ತ ದಾಂಪತ್ಯ ಜೀವನವನ್ನು ಯಥಾಯೋಗ್ಯವಾಗಿ ನಡಿಸಿಕೊಳ್ಳುತ್ತ ನಮ್ಮ ಅಭ್ಯುದಯ ನಿಃಶ್ರೇಯಸ ಸಿದ್ಧಿಯನ್ನು ಪಡಕೊಳ್ಳಬೇಕೆನ್ನುವುದೇ ವೇದ ವಚನ **"ತಸ್ಮಾತ್ ಪ್ರಜಾ ವಿಶುಧ್ಯರ್ಥಂ ಸ್ತ್ರಿಯಂ ರಕ್ಷೇತ್ ಪ್ರಯತ್ನತಃ ।"** ಲೋಕ ಕಲ್ಯಾಣಕ್ಕಾಗಿ ವೇದಾಧ್ಯಯನ ಮತ್ತು ವೇದೋಕ್ತ ಅನೇಕ ಸತ್ಕರ್ಮಗಳು ನಿರಂತರ ನಡೆಯುತ್ತಿರಬೇಕೆನ್ನುವ ಉದ್ದೇಶದಿಂದ ಸ್ತ್ರೀಯರನ್ನು ರಕ್ಷಿಸಿಕೊಂಡು ಅವಳಿಂದ ಸುಪ್ರಜೆಗಳನ್ನು ಪಡಕೊಳ್ಳಬೇಕು. (ವೇದ) **"ಆಶಾಸಾನಾ ಸೌಮನಸ್ಯಂ ಪ್ರಜಾಂ ಸೌಭಾಗ್ಯಂರಯಿಮ್॥ ಪತ್ಯುರನುವ್ರತಾ ಭೂತ್ವಾ ಸನ್ನಹ್ಯ ಸ್ವಾಮ್ಯುತಾಯಕಮ್ ॥"** (ಭಾವ) ಎಲ್ಲೈ ವಧುವೇ, ನೀನು ಯಾವಾಗಲೂ ಪ್ರಸನ್ನಾಂತಃಕರಣ ಉಳ್ಳವಳಾಗು. ಸುಪ್ರಜೆಗಳನ್ನು ಪಡೆ ಮತ್ತು ಸೌಭಾಗ್ಯವತಿಯಾಗು. ಸುಖ ಸಮೃದ್ಧಿಯನ್ನು ಪಡೆ ಹಾಗೂ ವೇದೋಕ್ತ ಕರ್ಮಗಳನ್ನು ಆಚರಿಸುತ್ತ ನಿಃಶ್ರೇಯಸ ಸಿದ್ಧಿಯನ್ನು ಪಡೆ. (ವೇದ) **"ಸುಮಂಗಲೀ ಪ್ರತರಣೀ ಗೃಹಾಣಾಂ ಸುಶೇವಾಪತ್ಯೈ ಶ್ವಶುರಾಯಶಂಭೋಃ ॥ ಸ್ಯೋನಾ ಶ್ವಶ್ರ್ವೈ ಪ್ರಗೃಹಾನ್ ವಿಶೇಮಾನ್ ॥"** ವಧುವೇ ನೀನು ಸೌಭಾಗ್ಯವತಿಯಾಗು. ಸತ್ಕರ್ಮಾಚರಣೆಗಳ ಮೂಲಕ ಮನೆಯ ಜನರಿಗೆ ಯಾವುದೇ ತೊಂದರೆಗಳು ಬಾರದಂತೆ ಭಗವಂತನಲ್ಲಿ ಮೊರೆಯಿಡು. ನಿನ್ನಲ್ಲಿ ಅಂತಃಶಕ್ತಿಯನ್ನು ಬೆಳೆಸಿಕೋ. ಪತಿಗೂ, ಅತ್ತೆಮಾವಂದರಿಗೂ ಅತೀ ವಿನೀತಳಾಗಿ ನಡೆದು ಕೋ. ಸದ್ಗುಣಗಳಿಂದ ಕೂಡಿದವಳಾಗಿ ನಿನ್ನ ಪಾತಿವ್ರತ್ಯವನ್ನೂ ಗೃಹಸ್ಥ ಧರ್ಮವನ್ನೂ ಪರಿಪಾಲಿಸುತ್ತ ಕೀರ್ತಿಶಾಲಿಯಾಗಿ ಬಾಳು.

(ಯಾಜ್ಞವಲ್ಕ್ಯ) **"ಲೋಕಾನಂತ್ಯಂ ದಿವಃ ಪ್ರಾಪ್ತಿಃ ಪುತ್ರ, ಪೌತ್ರ, ಪ್ರಪೌತ್ರಕೈಃ ॥ ಯಸ್ಮಾತ್ ತಸ್ಮಾತ್ ಸ್ತ್ರಿಯಃ ಸೇವ್ಯಾಃ ಕರ್ತವ್ಯಾಶ್ಚ ಸುರಕ್ಷಿತಾಃ ॥"** (ಭಾವ) ತನ್ನ ವಂಶದ ಅಭಿವೃದ್ಧಿಗಾಗಿಯೂ, ಋಷಿ ಪರಂಪರೆಯ ರಕ್ಷಣೆಗಾಗಿಯೂ ಸತ್ಕರ್ಮಾಚರಣೆಯ ಮೂಲಕ ಅಮೃತತ್ವ ಪ್ರಾಪ್ತಿಗೂ ಪುತ್ರ ಪೌತ್ರಾಧ್ಯಭಿವೃದ್ಧಿಗಾಗಿಯೂ ವಿಧ್ಯುಕ್ತವಾಗಿ ವಿವಾಹವಾಗುವ ಉದ್ದೇಶದಿಂದ ಸ್ತ್ರೀಯರನ್ನು ಸಂರಕ್ಷಿಸಿಕೊಳ್ಳುವುದು ಅತ್ಯವಶ್ಯವಿರುತ್ತದೆ. (ಮನುಸ್ಮೃತಿ) **"ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ॥ ಯತ್ರೈ ತಾಸ್ತು ನಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥"** (ಭಾವ) ವೇದೋಕ್ತ ಕರ್ಮಗಳನ್ನಾಚರಿಸುತ್ತಾ ಯಾವ ಮನೆಯಲ್ಲಿ ಸ್ತ್ರೀಯರು ಸುಖಶಾಂತಿಯಿಂದಿರುತ್ತಾರೋ ಅಲ್ಲಿ ಎಲ್ಲಾ ದೇವತೆಗಳೂ ಸುಪ್ರೀತರಾಗಿ ಸುಖ ಶಾಂತಿಯನ್ನುಂಟು ಮಾಡುತ್ತಾರೆ. ಯಾರ ಮನೆಯಲ್ಲಿ ಸ್ತ್ರೀಯರು ನಾನಾ ಕಷ್ಟಕಾರ್ಪಣ್ಯಗಳನ್ನು ಅನುಭವಿಸುತ್ತಿರುತ್ತಾರೋ ಅವನ ಎಲ್ಲಾ ಕ್ರಿಯೆಗಳೂ ನಿಷ್ಪ್ರಯೋಜನವಾಗುತ್ತದೆ ಮತ್ತು ಮನಸ್ಸಿಗೆ ನೆಮ್ಮದಿ ಇರುವುದಿಲ್ಲ. (ವೇದ) **"ಸೂನೃತಾವಂತಃ ಸುಭಗಾ ಇರಾವಂತೋ ಹಸಾಮುದಾಃ ॥ ಅತೃಷ್ಯಾ ಅಕ್ಷುಧ್ಯಾಸ್ತ ಗೃಹನಾಸ್ಮದ್ಬಿಭೀತನ ॥"** (ಹೇಗೃಹಾಃ) ಗೃಹಸ್ಥ ಧರ್ಮವನ್ನು ಸ್ವೀಕಾರ ಮಾಡಿದ ನವದಂಪತಿಗಳೇ (ಸೂನೃತಾವಂತಃ) ಎರಡನೇಯವರನ್ನು ಪೀಡಿಸದೇ ಇರುವವರೂ ಮತ್ತು ಸತ್ಯ ತತ್ವಗಳನ್ನಾಚರಿಸುವವರೂ ಮಿತವೂ ಹಿತವೂ ಆದ ಮಾತುಗಳನ್ನಾಡುವವರೂ (ಸುಭಗಾಸ್ತ) ಸದಾಚಾರಗಳ ಮೂಲಕ ಐಶ್ವರ್ಯಗಳನ್ನೂ ಸೌಭಾಗ್ಯವನ್ನೂ ಪಡಕೊಳ್ಳಿರಿ. (ಇರಾವಂತಃ) ಅತಿಥಿ ಅಭ್ಯಾಗತರನ್ನು ಸ್ವಾಗತಿಸಿ ಅನ್ನದಾನ ಮಾಡುವವರಾಗಿರಿ. (ಹಸಾಮುದಾಸ್ತ) ಹಸನ್ಮುಖರಾಗಿ ಇರುವವರಾಗಿರಿ. (ಅತೃಷ್ಯಾಸ್ತ) ಅತಿಥಿ

ಅಭ್ಯಾಗತರಿಗೆ ಅನ್ನೋದಕ ಕೊಡದೇ ಕಳಿಸಬೇಡಿರಿ. (ಅಕ್ಷುಧ್ಯಾಸ್ತ) ಅನ್ನನೀರಿಲ್ಲದೆ ಹಸಿವಿನಿಂದ ನೀವು ಬಳಲಬೇಡಿರಿ (ಅಸ್ಮತ್ ಬಿಭೀತನ) ಭಯವನ್ನುಂಟು ಮಾಡುವಂಥ ಮಾತುಗಳನ್ನಾಗಲೀ ಕರ್ಮಗಳನ್ನಾಗಲೀ ಮಾಡಬೇಡಿರಿ. (ಭಾವ) ನವದಂಪತಿಗಳೇ ಎರಡನೇಯವರನ್ನು ವಿನಾಕಾರಣ ಪೀಡಿಸಬೇಡಿರಿ. ಮತ್ತು ಸತ್ಯತತ್ವವಾದ ವೇದೋಕ್ತ ಕರ್ಮಗಳನ್ನು ಆಚರಿಸುವವರೂ ಮಿತವೂ ಹಿತಕರವೂ ಆದ ಮಾತುಗಳನ್ನು ಆಚರಿಸುವವರಾಗಿರಿ. ಸದಾಚಾರಿಗಳೂ ಐಶ್ವರ್ಯವಂತರೂ ಆಗಿರಿ. ಸೌಭಾಗ್ಯಾಭಿವೃದ್ಧಿಗಾಗಿ ನಿರಂತನ ಭಗವಂತನನ್ನು ಆರಾಧಿಸುತ್ತಿರಿ. ಮನೆಗೆ ಬಂದ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿ ಅನ್ನದಾನ ಮಾಡಿರಿ. ಅತಿಥಿಗಳಿಗೆ ಭೋಜನವನ್ನು ಹಾಕದೇ ಕಳಿಸಬೇಡಿ. ಸದಾಹಸನ್ಮುಖರಾಗಿ ಇರುವವರಾಗಿರಿ. ಮತ್ತು ಹೆದರಿಕೆಯನ್ನುಂಟುಮಾಡುವಂಥ ಮಾತುಗಳನ್ನಾಗಲೀ ಕರ್ಮಗಳನ್ನಾಗಲೀ ಮಾಡಬೇಡಿ. (ವೇದ) **"ಶಿವಾಭವ ಪುರುಷೇಭ್ಯೋ ಗೋಭ್ಯೋ ಅಶ್ವೇಭ್ಯಃಶಿವಾ॥ ಶಿವಾಽಸ್ಮೈ ಸರ್ವಸ್ಮೈತಿ ಕ್ಷೇತ್ರಾಯ ಶಿವಾನ್ ಇಹೈಧಿ ॥"** (ಭಾವ) ಎಲ್ಲೈ ವಧುವೇ ನೀನು ವೇದೋಕ್ತ ಕರ್ಮಾಚರಣೆಗಳ ಮೂಲಕ ಮನೆಯವರಿಗೆ ಹಿತ ಮಾಡುವ ಸದ್ಬುದ್ಧಿಯುಳ್ಳವಳಾಗು. ಮತ್ತು ದನಕರುಗಳೇ ಮೊದಲಾದ ಪ್ರಾಣಿವರ್ಗಗಳ ಸೇವೆಯನ್ನು ಮಾಡು. ಪ್ರಾಣಿಗಳನ್ನು ಹಿಂಸಿಸಬೇಡ. ಕುಟುಂಬಕ್ಕೆ ಮಂಗಲಕಾರಿಣಿಯಾದ ನೀನು ಗೃಹಸ್ಥ ಧರ್ಮವನ್ನು ಪರಿಪಾಲಿಸುತ್ತ ಸದಾ ಕುಟುಂಬದ ಹಿತ ಚಿಂತನೆಯನ್ನು ಮಾಡು. ಮತ್ತು ದೀರ್ಘಸುಮಂಗಲ್ಯಾಭಿವೃದ್ಧಿಗಾಗಿ ನಿರಂತರ ಭಗವಂತನನ್ನು ಆರಾಧಿಸುತ್ತಿರು. (ವೇದ) **"ಇಹೈವಸ್ತಂ ಮಾವಿಯೌಷ್ಟಂ ವಿಶ್ವಮಾಯುಃ ವ್ಯಶ್ನುತಂ ॥ ಕ್ರೀಡಂತೌ ಪುತ್ರೈಃ ನೃಪ್ತುಭಿಃ ಮೋದಮಾನೌ ಸ್ವಸ್ತಕೌ ॥"** ಎಲ್ಲೈ ಸತಿಪತಿಗಳೇ ನೀವು ಅತ್ಯಂತ ಶ್ರೇಷ್ಠವಾದ ಗೃಹಸ್ಥಾಶ್ರಮವನ್ನು ಸ್ವೀಕರಿಸಿರುವಿರಿ. ವೇದೋಕ್ತ ಕರ್ಮಗಳನ್ನಾಚರಿಸುತ್ತ ಮಕ್ಕಳು ಮೊಮ್ಮಕ್ಕಳ ಸಂಗಡ ನಗುತ್ತ ನಲಿದಾಡುತ್ತ ಸಂತೋಷವನ್ನುಂಟು ಮಾಡುವ ಸುಖಮಯವಾದ ಜೀವನವನ್ನು ಒಂದು ಶತಮಾನದವರೆಗೂ ನಡೆಸಿಕೊಂಡು ಹೋಗುವವರಾಗಿ. ಅನೇಕ ಸತ್ಕರ್ಮಾಚರಣೆಗೆ ಬೇಕಾಗುವ ಎಲ್ಲಾ ವಿಧದ ಐಶ್ವರ್ಯಗಳನ್ನೂ ಪಡೆದು ಶಾಶ್ವತ ಕೀರ್ತಿಯನ್ನೂ ಅಮೃತತ್ವವನ್ನು ಹೊಂದಿರಿ. (ವೇದ) **"ಯಥಾಸಿಧುರ್ನದೀನಾಂ ಸಾಮ್ರಾಜ್ಯಂ ಸುಷುವೇವೃಷಾ ॥ ಏವಾತ್ಮಂ ಸಂಮ್ರಾಜ್ಞ್ಯೇಧಿ ಸಂಮ್ರಾಜ್ಞ್ಯುತ ಶ್ವಶ್ರುವಾಹ ॥"** (ಭಾವ) ಯಾವ ಪ್ರಕಾರ ಸಮುದ್ರವು ಎಲ್ಲಾ ನದಿಗಳಿಗೂ ಸಂಮ್ರಾಜ್ಞಿ ಇರುತ್ತದೆಯೋ ಎಲ್ಲೈ ವಧುವೇ ನೀನೂ ಸಹ ಗ್ರಹಸ್ಥಾಶ್ರಮ ಧರ್ಮವನ್ನು ಯಥಾ ಯೋಗ್ಯವಾಗಿ ನಡಿಸಿಕೊಳ್ಳುತ್ತಾ ಪತಿಗೃಹಕ್ಕೆ ಸಂಮ್ರಾಜ್ಞಿಯಾಗು. (ವೇದ) **" ಆರೋಹಚರ್ಮ ಉಪಸೀದಮಗ್ನಿಂ ಏಷದೇವೋ ಹಂತಿ ರಕ್ಷಾಂಸಿ ಸರ್ವಾ॥ ಇಹ ಪ್ರಜಾಂ ಜನಯ ಪತ್ಯೇ ಅಸ್ಮೈ ಸುಜ್ಯೇಷ್ಠ್ಯೋ ಭವತು ಪುತ್ರಸ್ತ ಏಷಃ ॥ "**(ಭಾವ) ಎಲ್ಲೈ ವಧುವೇ ಈ ಅಗ್ನಿದೇವನು ಎಲ್ಲಾ ರೋಗಗಳನ್ನೂ ಪಾಪಗಳನ್ನೂ ನಾಶಮಾಡುವಂಥವ ನಿರುತ್ತಾನೆ. ಆದ ಕಾರಣ ಮೃಗ ಚರ್ಮದ ಮೇಲೆ ಕುಳಿತು ಅಗ್ನಿಯ ಆರಾಧನೆಯನ್ನು ಪ್ರತಿನಿತ್ಯದಲ್ಲೂ ಆಚರಿಸುತ್ತಾ ಪತಿಗೃಹದಲ್ಲಿ ನಿತ್ಯ ಜೀವನವನ್ನು ನಡೆಸುತ್ತಾ ಸುಪುತ್ರರಿಗೆ ಜನ್ಮ ಕೊಡು ಮತ್ತು ನಿನ್ನಲ್ಲಿರುವ ಶ್ರೇಷ್ಠ ಜ್ಞಾನ ಮೂಲಕ ಮಕ್ಕಳನ್ನೂ ಶ್ರೇಷ್ಠ ಜ್ಞಾನಿಗಳನ್ನಾಗಿ ಮಾಡು. (ವೇದ) **"ಸುಮಂಗಲೀ ಪ್ರತರಣೀ ಗೃಹಾಣಾಂ ಸುಶೇವಾ ಪತ್ಯೈ**

ಶ್ವಶುರಾಯ ಶಂಭೋ: ॥ ಸ್ಯೋನಾ ಶ್ವಶ್ರೂವೈ ಪ್ರಗೃಹಾನ್ ವಿಶೇಮಾನ್ ॥ '' (ಭಾವ) ಎಲೈ ವಧುವೇ ನೀನು ಸೌಭಾಗ್ಯವತಿಯಾಗು ಮತ್ತು ವೇದೋಕ್ತ ಸತ್ಕರ್ಮಾಚರಣೆಗಳ ಮೂಲಕ ಗೃಹದಲ್ಲಿರುವ ಯಾವತ್ತೂ ಜನರಿಗೆ ಬರುವಂತಹ ವಿಪತ್ತುಗಳನ್ನು ಮತ್ತು ದುಃಖಗಳನ್ನು ದೂರ ಮಾಡುವ ಶಕ್ತಿಯನ್ನು ಸಂಪಾದಿಸು. ಪತಿಗೂ ಮತ್ತು ಅತ್ತೆ ಮಾವಂದಿರಿಗೂ ಹಿತಮಾಡುವ ಸದ್ಗುಣಗಳನ್ನು ಸಂಪಾದಿಸು. ಪಾತಿವ್ರತ್ಯಗಳನ್ನೂ ಗೃಹಸ್ಥ ಧರ್ಮವನ್ನು ಪರಿಪಾಲಿಸು. (ವೇದ) **''ಅದೇ ವೃಘ್ನೀ ಅಪತಿಘ್ನೀ ಇಹೈಧಿ ಶಿವಾ ಪಶುಭ್ಯ: ಸುಯಮಾ ಸುವರ್ಚಾ: ॥ ಪ್ರಜಾವತೀ: ವೀರಸೂ: ದೇವಕಾಮಾಸ್ಯೋನೇ ಮಮಗ್ನಿಂ ಗಾರ್ಹಪತ್ಯಂ ಸಪರ್ಯ॥''** (ಭಾವ) ಎಲೈ ವಧುವೇ ನೀನು ಮನೆಯವರನ್ನು ಪೀಡಿಸಬೇಡ. ಪತಿಭಕ್ತಿಯುಳ್ಳವಳೂ ಸದಾಚಾರಿಯೂ ಆಗು. ವೇದೋಕ್ತ ಗೃಹಸ್ಥಾಶ್ರಮವನ್ನು (ನಿಯಮವನ್ನು) ಆಚರಿಸು. ಸುಪುತ್ರರನ್ನು ಪಡೆ. ತೇಜಸ್ವಿನಿಯೂ ಭೂತ ದಯೆಯಿಂದ ಕೂಡಿದವಳಾಗು. ಪತಿ ಸಹಿತ ಪ್ರತಿನಿತ್ಯದಲ್ಲೂ ಗೃಹ್ಯಾಗ್ನಿಯಲ್ಲಿ ಸಾಯಂಪ್ರಾತರೌಪನವನ್ನು ಆಚರಿಸುತ್ತ ಆರೋಗ್ಯವತಿಯೂ ಕೀರ್ತಿಶಾಲಿಯೂ ಆಗಿ ಬಾಳು. (ವೇದ) **''ಮಾಭ್ರಾತಾ ಭ್ರಾತರಂ ದ್ವಿಕ್ಷನ್ ಮಾಸ್ವಸಾರಮುತಸ್ವಸಾ॥ ಸಮ್ಯಂಚ: ಸವ್ರತೋ ಭೂತ್ವಾ ವಾಚಂ ವದತ ಭದ್ರಯ''** (ಭಾವ) ಅಣ್ಣತಮ್ಮಂದಿರು ಅಕ್ಕ ತಂಗಿಯರು ತಮ್ಮತಮ್ಮೊಳಗೆ ದ್ವೇಷ ಮಾಡಿಕೊಳ್ಳಬಾರದು. ಎಲ್ಲರೂ ಸಮಾನ ಸ್ವಭಾವ ಗುಣ ಧರ್ಮ ಉಳ್ಳವರಾಗಬೇಕು. ಅನ್ಯೋನ್ಯಹಿತ ಮಾಡುವ ಸ್ವಭಾವವುಳ್ಳವರಾಗಿ ಹಿತಕರವಾದ ಮಾತುಗಳನ್ನಾಡುತ್ತ ಸ್ನೇಹ ಸೌಹಾರ್ದತೆಯಿಂದ ಜೀವನವನ್ನು ನಡಿಸಿಕೊಳ್ಳಬೇಕು. (ವೇದ) **''ಮಮ ಪುತ್ರಾ: ಶತ್ರುಹಣೋऽಥೂಮೇ ದುಹಿತಾ ವಿರಾಟ್ ॥ ಉತಾಹಮಸ್ಮಿ ಸಂಜಯಾ ಪತ್ಯೌಮೇ ಶ್ಲೋಕ ಉತ್ತಮ:॥''** (ಭಾವ) ನನ್ನ ಗಂಡು ಮಕ್ಕಳು ಶತ್ರುಗಳನ್ನು ನಾಶ ಮಾಡುವ ವೀರರಿರುತ್ತಾರೆ. ಮತ್ತು ನನ್ನ ಹೆಣ್ಣು ಮಕ್ಕಳು ಅದ್ವಿತೀಯ ತೇಜಸ್ವಿನಿಯರೂ ಬುದ್ಧಿಶಾಲಿಗಳೂ ಇರುತ್ತಾರೆ. ನಾನೂ ಸಹ ಎಲ್ಲಾರೀತಿಯ ವಿಜಯವನ್ನು ಸಂಪಾದಿಸುವವಳಿರುತ್ತೇನೆ. ನನ್ನ ಪತಿಯ ಕೀರ್ತಿಯು ನಾಲ್ಕೂ ದಿಕ್ಕುಗಳಲ್ಲಿ ವ್ಯಾಪಿಸಿಕೊಂಡಿರುತ್ತದೆ. (ವೇದ) **''ಅವೀರಾಮಿವ ಮಾಮಯಂ ಶರಾರುರಭಿಮನ್ಯತೇ ಉತಾಹಮಸ್ಮಿ ವೀರಿಣೀ ಇಂದ್ರಪತ್ನೀ ಮರುತ್ಸಖಾ ವಿಶ್ವಸ್ಮಾದಿಂದ್ರ ಉತ್ತರ: ॥''** ಸ್ತ್ರೀಯರು ಅಬಲೆಯರೆಂದು ಪುರುಷರು ತಿಳಿದುಕೊಂಡಿರುತ್ತಾರೆ. ಆದರೆ ನಾನು ಶ್ರೇಷ್ಠ ಜ್ಞಾನಿಗಳಿಗೂ ವೀರಪುರುಷರಿಗೂ ಜನ್ಮ ಕೊಡುವವಳಿರುತ್ತೇನೆ. ನನ್ನ ಪತಿಯು ಜ್ಞಾನಿಯೂ ಸಬಲನೂ ಇರುತ್ತಾನೆ. ನಾನು ವೀರಪುರುಷನ ಪತ್ನಿ ಇರುತ್ತೇನೆ. ನನಗೆ ಸಹಾಯಕನು ವೀರ ಪುರುಷನೂ ಸುಜ್ಞಾನಿಯೂ ಇರುತ್ತಾನೆ. ನನ್ನಪತಿಯು ವೀರತ್ವದಲ್ಲಿ ನನಗೆ ಸರಿಸಮಾನನಿರುತ್ತಾನೆ. (ವೇದ) **''ಅನುವ್ರತ: ಪಿತು: ಪುತ್ರೋ ಮಾತಾ ಭವನು ಸಂಮನಾ ॥ ಜಾಯಾಪತ್ಯೇ ಮಧುಮತೀಂ ವಾಚಂ ವದತು ಶಾಂತಿವಾಂ ॥'' ''ಪುತ್ರೋ ಪಿತು: ಅನುವ್ರತ:''** ಮಗನು ತಾಯಿ ತಂದೆಯರ ವಚನಗಳನ್ನು ಅನುಸರಿಸುವವನಿರಬೇಕು. (ಮಾತ್ರಾಸಂಮನಾಭವತು) ತಾಯಿಯಲ್ಲಿ ಭಕ್ತಿ ಸ್ನೇಹ ಉಳ್ಳವನಿರಬೇಕು. ಶ್ರೇಷ್ಠ ಮನಸ್ಸುಳ್ಳವನಿರಬೇಕು. (ಜಾಯಾ ಪತ್ಯೇ ಮಧುಮತೀಂ) ಹೆಂಡತಿಯು ಪತಿಯೊಡನೆ ಸತ್ಯವಾದ ಮತ್ತು ಹಿತಕರವಾದ (ಪರಸ್ಪರ ವಿರೋಧವನ್ನುಂಟು ಮಾಡುವಂಥಾ ಮಾತುಗಳನ್ನಾಡಬಾರದು)

ಮಾತನ್ನು ಆಡಬೇಕು. ನಿಷ್ಕಪಟ ಪ್ರೇಮದಿಂದಿರಬೇಕು. (ವಾಚಂವದತು ಶಾಂತಿವಾಂ) ಎಲ್ಲಾ ಜನತೆಗೂ ಮತ್ತು ರಾಷ್ಟ್ರಕ್ಕೂ ಒಳಿತನ್ನುಂಟು ಮಾಡುವಂಥ ಮಾತನ್ನಾಡುತ್ತಿರಬೇಕು. (ಭಾವ) ಮಗನು ತಾಯಿ ತಂದೆಯರಲ್ಲಿ ಭಕ್ತಿ ಸ್ನೇಹ ಉಳ್ಳವನಿರಬೇಕು. ತಾಯಿಯಲ್ಲಿ ಪವಿತ್ರ ಭಾವನೆ ಇರಬೇಕು. ತಾಯಿ ತಂದೆಯರಲ್ಲಿ ಪವಿತ್ರ ಭಾವನೆ ಇರಬೇಕು. ಅತಿ ವಿನೀತನಾಗಿ ತಾಯಿತಂದೆಯರಲ್ಲಿ ನಡಕೊಳ್ಳಬೇಕು. ವಿಶಾಲ ಮನಸ್ಸುಳ್ಳವನಿರಬೇಕು. ಹೆಂಡತಿಯು ತನ್ನಪತಿಯಲ್ಲಿ ನಿಷ್ಕಪಟ ಪ್ರೇಮದಿಂದ ಇರಬೇಕು. ಎಲ್ಲಾ ಜನತೆಗೂ ಮತ್ತು ರಾಷ್ಟ್ರಕ್ಕೂ ಒಳಿತನ್ನುಂಟುಮಾಡುವಂಥಾ ಸತ್ಯವಚನವನ್ನು ಆಡುತ್ತಿರಬೇಕು. (ವಿವೇಚನೆ) ಗರ್ಭವಾಸ ಮೊದಲುಗೊಂಡು ಮಗುವು ತಾಯಿಯ ಸಾಮೀಪ್ಯದಲ್ಲಿ ಬಹುಕಾಲಗಳವರೆಗೂ ಇರಬೇಕಾಗುತ್ತದೆ. ತಾಯಿ ತಂದೆಯರ ಸಂಸ್ಕಾರವನ್ನು ಮಗುವು ಅತಿ ಸುಲಭವಾಗಿ ಪಡಕೊಳ್ಳುತ್ತದೆ. ಈ ಸಂಸ್ಕಾರವೇ ಆ ಮಗುವಿನ ಉತ್ತರೋತ್ತರ ಅಭಿವೃದ್ಧಿಗೂ ಮತ್ತು ಶ್ರೇಷ್ಠ ಜ್ಞಾನಾರ್ಜನೆಗೂ ಆತ್ಮೋನ್ನತಿಗೂ ಆಧಾರವಾಗುತ್ತದೆ. ಉದಾ. ವೀರ ಅಭಿಮನ್ಯುವು ತಾಯಿಯ ಗರ್ಭದಲ್ಲಿರುವಾಗಲೇ ಚಕ್ರವ್ಯೂಹವನ್ನು ಭೇದಿಸುವ ವಿಚಾರವನ್ನು ಶ್ರೀ ಕೃಷ್ಣನಿಂದ ಹೇಳಿದ್ದನ್ನು ತಿಳಿದುಕೊಂಡು ಮಹಾಯುದ್ಧದಲ್ಲಿ ಚಕ್ರವ್ಯೂಹವನ್ನು ಭೇದಿಸಿದ ವಿಷಯವು ಎಲ್ಲರೂ ತಿಳಿದ ವಿಷಯ. ನಮ್ಮ ಪೂರ್ವೇತಿಹಾಸವನ್ನು ಅವಲೋಕನ ಮಾಡಿದರೆ ನಮಗೆ ಅತಿ ಸುಲಭವಾಗಿ ತಿಳಿಯುತ್ತದೆ. ನಮ್ಮೆಲ್ಲರ ಪೂರ್ವಜರಾದ ಋಷಿಗಳು ಆಶ್ರಮದಲ್ಲಿ (ಋಷಿ ದಂಪತಿಗಳು) ವೇದಾಧ್ಯಯನ ವೇದೋಕ್ತ ಕರ್ಮಗಳನ್ನು ನಿತ್ಯದಲ್ಲಿಯೂ ಆಚರಿಸುತ್ತ ಶಿಷ್ಯರಿಗೆ ಅರ್ಥಜ್ಞಾನಪೂರ್ವಕ ವೇದಾಧ್ಯಯನ ವೇದೋಕ್ತ ಕರ್ಮಗಳನ್ನು ಬೋಧಿಸುತ್ತ ಶಿಷ್ಯರನ್ನು ಆಚಾರವಂತರನ್ನಾಗಿಯೂ ಸುಜ್ಞಾನಿಯನ್ನಾಗಿಯೂ ಮಾಡುತ್ತಿದ್ದರು. ಇದು ವಂಶ ಪರಂಪರಾಗತವಾಗಿ ಬಂದದ್ದು. ಅರ್ಥ ಜ್ಞಾನ ಪೂರ್ವಕ ವೇದಾಧ್ಯಯನ ಮತ್ತು ವೇದೋಕ್ತಕರ್ಮಗಳನ್ನು ಅತಿ ಸುಲಭವಾಗಿ ಶಿಷ್ಯರು ಪಡಕೊಳ್ಳುತ್ತಿದ್ದರು. ಇದರ ಫಲವಾಗಿ ಅನೇಕ ಋಷಿಕುಮಾರರೂ ಬ್ರಮ್ಹ ಜ್ಞಾನಿಯಾಗಿ ಸುಖ ಶಾಂತಿಯನ್ನು ಕೀರ್ತಿಯನ್ನೂ ಸಂಪಾದಿಸಿದರು. ಈ ಮೊದಲು ಹೇಳಿದ ಪ್ರಕಾರ ಅನೇಕ ಸ್ತ್ರೀಯರೂ ಮಂತ್ರದರ್ಶನ ಮಾಡಿದ್ದು ನಮಗೆ ಕಂಡುಬರುತ್ತದೆ.

ಆಸುರೀ ಪ್ರವೃತ್ತಿಗಳನ್ನು ಪ್ರೇರೇಪಿಸುವ ಜ್ಞಾನೇಂದ್ರಿಯ ಮನಸ್ಸು ಬುದ್ಧಿ ಇವುಗಳನ್ನು ಸ್ವೇಚ್ಛಾಚಾರಕ್ಕೆ ಬಿಟ್ಟರೆ ವಿಷಯ ರೂಪೀವ ಆಹಾರಗಳನ್ನು ತಿಂದು ವಿಷಯ ಚಿಂತನೆಯ ಮೂಲಕ ದುಷ್ಟ ಪ್ರವೃತ್ತಿಗಳು ಅಭಿವೃದ್ಧಿ ಹೊಂದಿ ಪ್ರಾಣ ವಿದ್ಯಾ ಬ್ರಮ್ಹವರ್ಚಸ್ಸೇ ಮೊದಲಾದವುಗಳನ್ನು ಪಡಕೊಳ್ಳಲಿಕ್ಕಾಗದೇ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಆದ ಕಾರಣ ನಮ್ಮ ಪೂರ್ವಜರಾದ ಶ್ರೇಷ್ಠ ಜ್ಞಾನಿಗಳು ಅನೇಕ ಸತ್ಕರ್ಮಗಳನ್ನು ನಮಗೆ ಬೋಧಿಸಿರುತ್ತಾರೆ. ಈ ಮೂಲಕವೇ ನಮ್ಮ ಮನುಷ್ಯ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಉದಾಹರಣೆ - ಯಾವ ಪ್ರಕಾರ ಉದ್ಯಾನ ಪಾಲಕನು ಉದ್ಯಾನ ಗಿಡಗಳು ಅಡ್ಡತಿಡ್ಡ ಹೋಗದಂತೇ ಕತ್ತರಿಸಿ ಸರಿಯಾಗಿ ಹೋಗುವಂತೇ ಮಾಡುತ್ತಾನೋ ಅಂತೆಯೇ ಶರೀರ ಕ್ಷೇತ್ರದಲ್ಲಿ ಕಾರ್ಯಮಾಡುವ ಜೀವಾತ್ಮನಾದ ಮಾಲಕನು ಈ ಶಾಖೆಗಳು ಅಡ್ಡತಿಡ್ಡ ಹೋಗದಂತೇ ಮಾಡಿ ಸುಜ್ಞಾನ ಮೂಲಕ ಮರ್ಯಾದಾ ಮಾರ್ಗದಲ್ಲೇ ಪ್ರವೃತ್ತನನ್ನಾಗಿ ಮಾಡುತ್ತಾನೆ.

ಭಾಗ -- ೪

ಸ್ತ್ರೀಯರಿಗೆ ಗಾಯತ್ರೀ ಮತ್ತು ವೇದಾಧಿಕಾರ ವಿಚಾರಗಳು

''ಪುರಾಕಲ್ಪೇ ಕುಮಾರೀಣಾಂ ಮೌಂಜೀಬಂಧನ ಮಿಷ್ಯತೇ ॥

ಅಧ್ಯಾಪನಂ ಚ ವೇದಾನಾಂ ಸಾವಿತ್ರೀವಾಚನಂ ತಥಾ॥ ''

ಅತ್ಯಂತ ಶ್ರೇಷ್ಠವಾದ ಮಂತ್ರದೃಷ್ಟಾರರಾದ ಋಷಿ ಪರಂಪರೆಯಲ್ಲಿ ಜನಿಸಿದ ಪ್ರತಿಯೊಂದು ಸ್ತ್ರೀ ಪುರುಷರಿಗೂ ಧರ್ಮಾರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡಕೊಳ್ಳಬೇಕೆನ್ನುವುದೇ ನಮ್ಮ ಮೂಲ ಉದ್ದೇಶ. ಆದ ಕಾರಣ ಪ್ರತಿಯೊಬ್ಬ ಸ್ತ್ರೀ ಪುರುಷರೂ ವೇದೋಕ್ತ ಸಂಸ್ಕಾರಗಳ ಮೂಲಕ ವೇದಾಧ್ಯಯನ ಶಾಸ್ತ್ರಾಧ್ಯಯನವ ಮಾಡಿಕೊಂಡು ಪ್ರತಿ ನಿತ್ಯದಲ್ಲೂ ಆಚರಿಸುತ್ತ ಈ ಭವಬಂಧನದಿಂದ ಬಿಡುಗಡೆ ಹೊಂದಿ ಅಮೃತತ್ವವನ್ನು (ಮೋಕ್ಷವನ್ನು) ಪಡಕೊಳ್ಳುವ ಉದ್ದೇಶದಿಂದಲೇ ಈ ವಿಧಾನಗಳನ್ನು ನಮ್ಮ ಪೂರ್ವಜರು ವಿಧಿಸಿರುತ್ತಾರೆ. ಅತಿ ಪ್ರಾಚೀನ ಕಾಲದಲ್ಲಿ ಸ್ತ್ರೀಯರಿಗೂ ಉಪನಯನ ಸಂಸ್ಕಾರ ವೇದಾಧ್ಯಯನ ಗಾಯತ್ರೀ ಉಪಾಸನೆ ಹೇಳಿರುವುದು ಈ ಸ್ಮೃತಿಕಾರರ ಉಕ್ತಿಯಿಂದ ಕಂಡುಬರುತ್ತದೆ. ಗಾಯತ್ರಿಯನ್ನು ವೇದಮಾತೆಯೆಂದು ಎಲ್ಲಾ ಋಷಿಗಳೂ ಗೌರವದಿಂದ ಸ್ತುತಿಸಿರುತ್ತಾರೆ.

ಸ್ತ್ರೀ ಪುರುಷರ ಮನಸ್ಸು ಪ್ರಾಣ ಸಮಾನ ಧರ್ಮಗಳನ್ನು ಹೊಂದಿವೆ. ಮಾತು ಮಂತ್ರ ಸಂಗೀತ ಸಾಹಿತ್ಯ ಕಲೆ ಬುದ್ಧಿ ಮುಂತಾದ ಅನೇಕ ಕ್ಷೇತ್ರಗಳಲ್ಲಿಯೂ ಸಮಾನರೇ ಅನೇಕ ಸ್ತ್ರೀಯರು ತಪಸ್ವಿಗಳೂ ಯೋಗಿಗಳೂ ಆದದ್ದು ಕಂಡುಬರುತ್ತದೆ. ಆತ್ಮಜ್ಞಾನ ಪಡಕೊಂಡರೂ ಇರುತ್ತಾರೆ. (ಋಗ್ವೇದ) **''ಗೋಧಾ ಘೋಷಾ ವಿಶ್ವವಾರಾ ಆಪಾಲೋಪ ನಿಷ ನ್ನಿಷತ್ ॥ ಬ್ರಮಜಾಯಾ ಜುಹೂರ್ನಾಮ ಅಗಸ್ತ್ಯಸ್ಯ ಸ್ವಸಾऽದಿಥಿಃ ॥ ಇಂದ್ರಾಣೀ ಚೇಂದ್ರಮಾತಾ ಚ ನರಥಾ ರೋಮಶೋರ್ವಶೀ ॥ ಲೋಪಾಮುದ್ರಾ ಚ ನದ್ಯಶ್ಚ ಯಮೀ ನಾರೀ ಚ ಶಶ್ವತೀ ॥ ಶ್ರೀರ್ಲಾಕ್ಷಾ ಸಾರ್ಪರಾಜ್ಞೀ ವಾಕ್ ಶ್ರದ್ಧಾ ಮೇಧಾ ಚ ದಕ್ಷಿಣಾ ॥ ರಾತ್ರೀ ಸೂರ್ಯಾ ಚ ಸಾವಿತ್ರೀ ಬ್ರಮ್ಹವಾದಿನ್ಯ ಈರಿತಾಃ ॥ ''** ಗೋಧಾಘೋಷಾ = ವಿಶ್ವವಾರಾ = ಆಪಾಲಾ = ಜಹು = ಅದಿತಿ = ಇಂದ್ರಾಣೀ = ಸರಮಾ = ರೋಮಶಾ = ಊರ್ವಶೀ = ಲೋಪಾಮುದ್ರಾ = ಯಮೀ = ಶಾಶ್ವತೀ = ಸೂರ್ಯಾ = ಸಾವಿತ್ರೀ = ವಾಗಾಂಭೃಣೀ = ಗಾರ್ಗಿ = ಮೈತ್ರೇಯಿ = ಸುಲಭಾ = ಉಪನಿಷತ್ = ಇಂದ್ರಮಾತಾ = ಶ್ರೀರ್ಲಾಕ್ಷಾ = ಸಾರ್ಪರಾಜ್ಞೀ = ಶ್ರದ್ಧಾ = ಮೇಧಾ = ಮೊದಲಾದ ಅನೇಕ ಸ್ತ್ರೀ ಋಷಿಗಳು ಮಂತ್ರದೃಷ್ಟಾರರಾಗಿದ್ದಾರೆ. (ಉಪನಿಷತ್) **''ಯಜ್ಞಾಯಾಯೈ ಕರೋತಿ ಗಾರ್ಹಪತ್ಯ ಏವಂ ತಜ್ಜುಹೋತಿ ॥ ''** ಗೃಹ್ಯಶ್ರೌತ ಸೂತ್ರಪ್ರಕಾರ ವೇದ ಮಂತ್ರ ಪುರಃಸರವಾಗಿಯೇ ಗಾರ್ಹಪತ್ಯಾಗ್ನಿಯಲ್ಲಿ ಸಾಯಂ ಪ್ರಾತರೌಪಾಸನವನ್ನು ಮಾಡಬೇಕು. (ಆ=ಗೃ=ಸೂ= **ಪಾಣಿಗ್ರಹಣಾದಿ ಗೃಹ್ಯಂ ಪರಿಚರೇತ್**) **''ಸ್ವಯಂ ಪತ್ನ್ಯಪಿ ವಾ ಪುತ್ರಃ ಕುಮಾರ್ಯಂತೇ ವಾಸೀವಾ॥''** ವಿವಾಹದಿಂದ ಆರಂಭಿಸಿ ಪ್ರತಿನಿತ್ಯವೂ ಗೃಹ್ಯಾಗ್ನಿಯಲ್ಲಿ ವಿಧಿಪೂರ್ವಕವಾಗಿ ಸಕಾಲದಲ್ಲಿ

ಸತಿಪತಿಯರು ಸಾಯಂಪ್ರಾತರೌಪಾಸನವನ್ನು ಆಚರಿಸಲೇಬೇಕು. ಬಿಡುವಂತಿಲ್ಲ. ಅನಿವಾರ್ಯದಲ್ಲಿ ಗಂಡ = ಹೆಂಡತಿ = ಮಗ = ಅಥವಾ ಮಗಳು = ಶಿಷ್ಯ ಇವರಿಂದಾದರೂ ಅನಿವಾರ್ಯದಲ್ಲಿ ಮಾಡಿಸಬೇಕು. **''ಪತ್ಯುರಭಿಪ್ರಾಯಾತ್ ಶಾಸ್ತ್ರ ಏಕದೇಶಂ ವಾ ಗೃಣ್ಹೀಯಾತ್''** ವಿವಾಹವಾದ ನಂತರ ವಧುವು ಪತಿಯ ಸಲಹೆ ಪಡೆದು ಶಾಸ್ತ್ರಾಧ್ಯಯನಮಾಡಿ ಇಡೀ ಜೀವನದ ಕೊನೆಯವರೆಗೂ ವೇದಾಧ್ಯಯನ ವೇದೋಕ್ತ ಕರ್ಮಗಳನ್ನು ಆಚರಿಸಬೇಕು. **''ವಧೂಃ ವರಪ್ರೇಷಿತಾ ಸತಿ ತಚ್ಚಕ್ಷುರ್ದೇವಹಿತಂ ಮಂತ್ರೇಣ ಸ್ವಯಂ ಪಠಿತೇನ ಸೂರ್ಯಂ ನಿರೀಕ್ಷೇತ॥''** ವರನಿಂದ ಪ್ರೇರೇಪಿತಳಾದ ವಧುವು ಮೇಲೆ ಹೇಳಿದ ಮಂತ್ರವನ್ನು ತಾನು ಪಠಿಸುತ್ತಾ ಸೂರ್ಯನನ್ನು ನೋಡುತ್ತಾಳೆ ಮತ್ತು ಆರಾಧಿಸುತ್ತಾಳೆ. (ವೇದ) **''ಪುಮಾಂಸೌ ಮಿತಾವರುಣೌ ಪುಮಾಂಸೌ ವಶ್ವಿನಾವುಭೌ ॥ ಪುಮಾನಿಂದ್ರಶ್ಚ ಸೂರ್ಯಶ್ಚ ಪುಮಾನ್ ಸಂವರ್ತತಾಂ ಮಯಿ ಪುನಃ॥''** (ಸ್ವಾಹಾ) ಯಾವ ಸ್ತ್ರೀಯು ಗರ್ಭೇಚ್ಛೆಯನ್ನು ಮಾಡುತ್ತಾಳೋ ಅವಳು ಈ ಮೇಲೆ ಹೇಳಿದ ಮಂತ್ರದಿಂದ ಅಗ್ನಿಯಲ್ಲಿ ಹವನೀಯ ದ್ರವ್ಯಗಳಿಂದ ಆಹುತಿ ಕೊಡಬೇಕು. (ಕರ್ಕಾಚಾರ್ಯರ ಮತ) **''ಪುಮಾಂಸೌ ಮಿತ್ರಾವರುಣೌ ಇತಿ ಪೂರ್ವಾಮಾಹುತಿಂ ಜುಹೋತಿ ಗರ್ಭಕಾಮೇತಿ ಸ್ತ್ರೀ ಪ್ರತ್ಯಯ ನಿರ್ದೇಶಾತ್ ಸ್ತ್ರೀ ಏವ ಜುಹೋತಿ ॥ ''** ಗರ್ಭೇಚ್ಛೆ ಮಾಡುವ ಸ್ತ್ರೀಯು ಸ್ವತಹ ತಾನೇ ಅಗ್ನಿಯಲ್ಲಿ ಹವನ ಮಾಡಬೇಕು. (ವೇದಾ) **''ಇಮಾಂತ್ವಮಿದ್ರ ಮೀಢ್ವಃ ಸುಪುತ್ರಾ ಸುಭಗಾಂಕೃಣೆ ॥ ದಶಾಸ್ಯಾಂಪುತ್ರಾನಾಧೇಹಿ ಪತಿಮೇಕಾದಶಂ ಕೃಧಿ ॥ ಸ್ವಾಹಾ॥ ''** ವಿವಾಹ ಹೋಮದಲ್ಲಿ ಬರುವ ಮಂತ್ರ. ಪತಿಪತ್ನಿಯರೀರ್ವರೂ ಈ ಮಂತ್ರವನ್ನು ಪಠಿಸುತ್ತಿದ್ದರೆ ದೀರ್ಘಾಯುಷಿಗಳಾಗುವರು. (ವೇದ) **''ಬ್ರಮ್ಹಚರ್ಯೇಣ ಕನ್ಯಾಯುವಾನಂವಿಂದತೇ ಪತಿಂ॥''** (ಕನ್ಯಾಅಕೃತವಿವಾಹ) ಲಗ್ನವಾಗದ ಹುಡುಗಿಯು (ಬ್ರಮ್ಹಚರ್ಯೇಣ) ಬ್ರಮ್ಹಚರ್ಯಾಶ್ರಮ ದಲ್ಲಿದ್ದು ಅಂದರೆ ವೇದಾಧ್ಯಯನ ಮತ್ತು ಶಾಸ್ತ್ರಗಳನ್ನು ಅಧ್ಯಯನ ಮಾಡಿ ತನ್ನ ತಾರುಣ್ಯಾವಸ್ಥೆಯಲ್ಲಿ ತನಗೆ ಅನುರೂಪನೂ ಜ್ಞಾನಿಯೂ ಆಚಾರವಂತನೂ ಆದ (ಯುವಾನಂ) ತರುಣ ಪುರುಷನನ್ನು (ವಿಂದತೇ) ವರಿಸಬೇಕು. ಆದ ಕಾರಣ ಸ್ತ್ರೀಯರೂ ಸಹ ಬ್ರಮ್ಹಚರ್ಯಾಶ್ರಮ ಮೂಲಕ ವೇದಾಧ್ಯಯನ ಮಾಡುವ ವಿಧಾನವು ಈ ಮೊದಲು ಇತ್ತು. (ಸಾಯಣಾಚಾರ್ಯರು) **''ಅತ್ರಾಪಿ ಬ್ರಮ್ಹಚರ್ಯಂ ಪ್ರಶಸ್ಯತೇ ॥ ಕನ್ಯಾ ಅಕೃತ ವಿವಾಹ ಸ್ತ್ರೀ ಬ್ರಮ್ಹಚರ್ಯ ಚರಂತಿ ತೇನ ಬ್ರಮ್ಹ ಚರ್ಯೇಣ ಯುವಾನಂ ಯುವತ್ವಗುಣೋಪೇತಂ ಉತ್ಕೃಷ್ಟಂ ಪತಿಂ ವಿಂದತೇ ಲಭತೇ''** (ವೇದ) **''ಯದಾ ಗಾರ್ಹಪತ್ಯಮಸಪರ್ಯೇತ ಪೂರ್ವಮಗ್ನಿಂ ವಧೂರಿಯಂ ಅಧಾ ಸರ್ಸ್ವತ್ಯೈ ನಾರಿ ಪಿತೃಭ್ಯಶ್ಚ ನಮಸ್ಕುರು''** (ಯದಾ) ಯಾವಾಗ (ಇಯಂ ವಧೂ) ಈ ನವವಧುವು (ಗಾರ್ಹಪತ್ಯಂ) ಗೃಹಸ್ಥಾಶ್ರಮವನ್ನು ಸ್ವೀಕರಿಸಿ (ಗಾರ್ಹಪತ್ಯ ಅಗ್ನಿ) ಗೃಹ್ಯಾಗ್ನಿಯನ್ನು (ಅಸಪರ್ಯೇತ) ಆರಾಧಿಸುತ್ತಿರುತ್ತಾಳೋ (ಅಧಾ) ಆಗಲೇ (ನಾರಿ) ವಧುವೇ (ನಾರಿಯೇ) ನೀನು (ಸರಸ್ವತ್ಯೈ) ಸ್ವಾರಸ್ಯ ಪೂರ್ಣವಾದ -ಅತ್ಯಂತ ಮಹತ್ತರವಾದ (ವೇದಗಳನ್ನು ಪಠಣ ಮಾಡು (ಮತ್ತು) ಪಿತೃಭ್ಯಶ್ಚ. ತಾಯಿ ತಂದೆಯರಿಗೂ ಗುರು ಹಿರಿಯರಿಗೂ (ನಮಸ್ಕರಿಸು) ಅತ್ಯಂತ ವಿನೀತನಾಗಿ ನಡೆದುಕೋ. (ಭಾವ) ಎಲೈ ವಧುವೇ ವಿವಾಹಿತಳಾದ ನೀನು

ಪ್ರತಿನಿತ್ಯದಲ್ಲೂ ಗಾರ್ಹಪತ್ಯಾಗ್ನಿಯಲ್ಲಿ ವಿಧ್ಯುಕ್ತವಾಗಿ ಸಾಯಂಪ್ರಾತರೌಪಾಸನಾಹುತಿಯನ್ನು ಕೊಡುತ್ತ ವೇದಾಧ್ಯಯನ ಮತ್ತು ವೇದೋಕ್ತ ಕರ್ಮಗಳನ್ನು ಆಚರಿಸು. ಮತ್ತು ತಾಯಿ ತಂದೆ ಪತಿ ಅತ್ತೆ ಮಾವ ಗುರು-ಹಿರಿಯರಲ್ಲಿ ವಿನೀತನಾಗಿ ನಡೆದುಕೊಳ್ಳುತ್ತ ಕೀರ್ತಿಯನ್ನೂ ಮತ್ತು ಅಮೃತತತ್ವವನ್ನೂ ಸಂಪಾದಿಸು. ''**ವಿಶುದ್ಧವೇದಾಂತ ರಹಸ್ಯ ವಿತ್ತಮಾಃ ಸಭಾಸು ಶಾಸ್ತ್ರಾರ್ಥ ವಿಧಾನ ಪಂಡಿತಾಃ ॥ ನಿರಂಜನ ಬ್ರಮ್ಹನಿಲೀನ ಮಾನಸಾಃ ಪುರಾಬಭೂವುಃ ಸುಲಭಾದಿ ಯೋಷಿತಾಃ ॥**'' ವೇದ ಶಾಸ್ತ್ರಾರ್ಥಗಳನ್ನು ತಿಳಿದ ಪಂಡಿತರೊಂದಿಗೆ ವಿದ್ವತ್ಸಭೆಗಳಲ್ಲಿ ಈ ಮೊದಲು ಹೇಳಿದ ಅನೇಕ ಸ್ತ್ರೀಯರು ವೇದ ಶಾಸ್ತ್ರಗಳನ್ನು ತಿಳಿದ ಪಂಡಿತರೊಂದಿಗೆ ವಿಚಾರ ವಿನಿಮಯವನ್ನು ಮಾಡುತ್ತಿದ್ದರು. ''**ಉಪದಿಷ್ಟಾಸ್ತ್ವಯಾ ದೇವ ಮಂತ್ರಾಃ ಸಪ್ರಣವಾಮತಃ ॥ ತತ್ರಾದ್ಯಾಶ್ರೋತುಮಿಚ್ಛಾಮಿ ಪ್ರಣವಾರ್ಥಂ ವಿನಿಶ್ಚಿತಮ್ ॥**'' ಪತಿದೇವನೇ ಪ್ರಣವ ಸಹಿತ ಮಂತ್ರೋಪದೇಶವನ್ನು ನನಗೆ ಮಾಡಿರುವಿ. ಆದ ಕಾರಣ ಪ್ರಣವದ ವಿವರಗಳನ್ನು ತಿಳಿಯಲು ಇಚ್ಛಿಸುತ್ತೇನೆ. ಇದರ ರಹಸ್ಯವನ್ನು ಹೇಳು. ಶ್ರೌ-ಸೂ ''**ವೇದಂ ಪತ್ನ್ಯೈ ಪ್ರದಾಯ ವಾಚಯೇತ್**'' ಮಂತ್ರಾನುಷ್ಠಾನವನ್ನು ಹೆಂಡತಿಗೆ ಉಪದೇಶ ಮಾಡಿ ಸತಿ ಪತಿಯರೀರ್ವರೂ ಪ್ರತಿನಿತ್ಯದಲ್ಲೂ ಅಧ್ಯಯನ ಮಾಡುತ್ತಿರಬೇಕು. ಶಂಕರಾಚಾರ್ಯರ ಚರಿತ್ರೆಯಲ್ಲಿ ಒಂದು ಸನ್ನಿವೇಶ ನಮಗೆ ಕಂಡುಬರುತ್ತದೆ. ಪ್ರಕಾಂಡ ಪಂಡಿತರೂ ಆಚಾರವಂತರೂ ಆದ ಮಂಡನಮಿಶ್ರರಿಗೂ ಶಂಕರಾಚಾರ್ಯರಿಗೂ ಪರಸ್ಪರ ವೇದ ಮತ್ತು ಶಾಸ್ತ್ರಗಳ ವಿಚಾರವಾಗಿ ಚರ್ಚೆ ನಡೆಯುವ ಸಂದರ್ಭದಲ್ಲಿ ಅಧ್ಯಕ್ಷರ ಆಯ್ಕೆ ಮಾಡುವ ಸಂದರ್ಭ ಒದಗಿ ಬಂತು. ಸ್ವತಹ ಅತ್ಯಂತ ಮೇಧಾವಿಯೂ ಶಾಸ್ತ್ರಜ್ಞಳೂ ವೇದೋಕ್ತ ಕರ್ಮಗಳನ್ನು ನಿಷ್ಠೆಯಿಂದ ಅನುಷ್ಠಾನ ಮಾಡುತ್ತಿರುವವಳೂ ಮಂಡನಮಿಶ್ರರ ಧರ್ಮಪತ್ನಿಯನ್ನೇ ಅಧ್ಯಕ್ಷರನ್ನಾಗಿ ಮಾಡಿದರು. (ಭಾರತೀದೇವಿ) ಇವರನ್ನು ಕೆಲವು ದಿವಸಗಳ ನಂತರ ಮಂಡನಮಿಶ್ರರು ಸೋಲನ್ನನುಭವಿಸಿದರು. ಶಂಕರಾಚಾರ್ಯರು ಗೆದ್ದರು. ತನ್ನ ಪತಿಯ ಸೋಲನ್ನು ಒಪ್ಪಿಕೊಂಡ ಭಾರತೀ ದೇವಿಯು ಶಂಕರಾಚಾರ್ಯರಿಗೆ ಒಂದು ಸವಾಲನ್ನು ಹಾಕುತ್ತಾಳೆ. ನಾನು ಅವರ ಧರ್ಮಪತ್ನಿಯೂ, ಅರ್ಧಾಂಗಿಯೂ ಆಗಿರುವ ಕಾರಣ ನನ್ನನ್ನು ನೀವು ಅರ್ಧ ಗೆದ್ದ ಹಾಗೆ. ಆದ ಕಾರಣ ನನ್ನನ್ನೂ ಗೆಲ್ಲಬೇಕು ಎನ್ನುತ್ತಾಳೆ. ಅನಂತರ ಭಾರತೀ ದೇವಿಗೂ ಮತ್ತು ಶಂಕರಾಚಾರ್ಯರಿಗೂ ವೇದ ವೇದಾಂತ ಶಾಸ್ತ್ರಗಳ ವಾಗ್ವಿವಾದಗಳು ನಡೆದ ನಂತರ ಶಂಕರಾಚಾರ್ಯರಿಗೆ ಒಂದು ಸವಾಲನ್ನು ಹಾಕುತ್ತಾಳೆ. (ಕಾಮಶಾಸ್ತ್ರ) ಆದರೆ ಶಂಕರ ಭಗವತ್ಪಾದರಿಗೆ ಈ ವಿಚಾರ ಗೊತ್ತೇ ಇಲ್ಲ. ಅನಂತರ ಆಚಾರ್ಯರು ಅವಕಾಶವನ್ನು ಅವಳಿಂದ ಪಡೆದು ಪರಕಾಯ ಪ್ರವೇಶ ಮೂಲಕ ತಿಳಿದು ಭಾರತೀ ದೇವಿಯನ್ನು ಸೋಲಿಸುತ್ತಾರೆ. ದಂಪತಿಗಳೀರ್ವರೂ ಸೋಲನ್ನಪ್ಪಿಕೊಂಡರು. ಆಚಾರ್ಯರು ವಿಜಯಶಾಲಿಯಾದರು. ಈ ಮೊದಲು ಸ್ತ್ರೀಯರೂ ಸಹ ವೇದ ವೇದಾಂಗ ಶಾಸ್ತ್ರ ಇವುಗಳ ಮೂಲಕ ಆಚಾರವಂತರು, ಸುಶೀಲರೂ ವೈದಿಕ ಧರ್ಮನಿರತರೂ ಇರುವುದು ನಮಗೆ ಕಂಡುಬರುತ್ತದೆ. (ಬೃಹದಾರಣ್ಯಕ ಉಪನಿಷತ್) ''**ಅಥಾಹ ಯಾಜ್ಞವಲ್ಕ್ಯಸ್ಯ ದ್ವೇಭಾರ್ಯೇ ಬಭೂವತುಃ ॥ ಮೈತ್ರೇಯೀ ಕಾತ್ಯಾಯನೀಚ ತಯೋಃ ಮೈತ್ರೇಯೀ ಬ್ರಮ್ಹವಾದಿನೀ ಬಭೂವ ॥**'' ಅಂದರೆ

ಯಾಜ್ಞವಲ್ಕ್ಯರಿಗೆ ಇಬ್ಬರು ಹೆಂಡತಿಯರು ಇದ್ದರು . ಮೈತ್ರೇಯಿ ಮತ್ತು ಕಾತ್ಯಾಯಿನೀ. ಅವರೀರ್ವರಲ್ಲಿ ಮೈತ್ರೇಯಿ ಇವಳು ಬ್ರಮ್ಹಜ್ಞಾನ ಪಡೆದವಳಾದಳು. ನಾನು ಈ ಮೊದಲು ಹೇಳಿದ ಅನೇಕ ಸ್ತ್ರೀಯರು ಮಂತ್ರದ್ರಷ್ಟಾರರು ಇರುತ್ತಾರೆ. (ಮನುಸ್ಮೃತಿ) ''**ಪ್ರಜನನಾರ್ಥಂ ಸ್ತ್ರಿಯಂ ಸೃಷ್ಟ್ವಾ ಸಂತಾನಾರ್ಥಂತು ಮಾನವಾಃ ॥ ತಸ್ಮಾತ್ ಸಾಧಾರಣೋಧರ್ಮಃ ಶ್ರುತೌ ಪತ್ನ್ಯಾಃ ಸಹೋದಿತಃ॥**'' ಪರಿಶುದ್ಧವಾದ ಮಕ್ಕಳನ್ನು ಪಡಕೊಳ್ಳುವುದಕ್ಕಾಗಿ ಬ್ರಮ್ಹದೇವನು ಸ್ತ್ರೀಯರನ್ನು ನಿರ್ಮಿಸಿದನು. ಮಾನವರು ಸ್ತ್ರೀಯರನ್ನು ವ್ಯವಸ್ಥಿತವಾಗಿ ರಕ್ಷಿಸಿಕೊಳ್ಳಬೇಕು. ಗೃಹಸ್ಥ ಧರ್ಮಸ್ವೀಕರಿಸಿದ ನಂತರ ಪ್ರತಿನಿತ್ಯವೂ ಸಾಯಂಪ್ರಾತರೌಪಾಸನವನ್ನೂ ಮತ್ತು ಪಂಚಮಹಾ ಯಜ್ಞವನ್ನು ಆಚರಿಸುತ್ತಿರಬೇಕು. (ವೇದ) ''**ತ್ವಮರ್ಯಮಾಭವಸಿಯತ್ಕನೀನಾಂ ನಾಮ ಸ್ವಧಾವನ್ ಗುಹ್ಯಂ ಬಿಭರ್ಷಿ ॥ ಅಂಜಂತಿ ಮಿತ್ರಂ ಸುಧಿತಂ ನಗೋಭಿರ್ಯತ್ ದಂಪತೀ ಸುಮನಸಾ ಕೃಣೋಷಿ॥**''(ಹೇಸ್ವಧಾವನ್ ಅಗ್ನೇ) ಅನ್ನದಾತನಾದ ಅಗ್ನಿ ದೇವನೇ (ಯತ್ ತ್ವಂ ಕನೀನಾಂ ಆರ್ಯಮಾ ಭವಸಿ) ಯಾವಾಗ್ಗೆ ನೀನು ಲಗ್ನವಾಗದೇ ಇರುವ ಹುಡುಗಿಯರ ಪತಿಯಾಗಿರುತ್ತೀಯೋ ಆಗ್ಗೆ ನೀನು (ಗುಹ್ಯಂ ನಾಮ ಬಿಭರ್ಷಿ) ಗುಪ್ತವಾದ ಹೆಸರುಗಳನ್ನು ಧಾರಣ ಮಾಡುತ್ತೀ (ಯತ್) ಯಾಕೆಂದರೆ (ತ್ವಂ) ನೀನು (ದಂಪತೀ ಸಮನಸಾ ಕೃಣೋಷಿ) ಪತಿಪತ್ನಿಯರಲ್ಲಿ ಸಮಾನ ಮನಸ್ಸುಳ್ಳವರನ್ನಾಗಿ ಮಾಡುತ್ತೀ. ಆದ ಕಾರಣ (ಸುಧಿತಂ ಮಿತ್ರಂ ನ) ನಮ್ಮೆಲ್ಲರಿಗೂ ಪ್ರಿಯ ಮಿತ್ರನಾದ ನಿನ್ನಲ್ಲಿ (ಗೋಭಿಃ ಅಂಜಂತಿ) ಆಕಳ ತುಪ್ಪದಿಂದ ಹವನ ಮಾಡುತ್ತೇವೆ. (ಭಾವ) ಅನ್ನದಾತನೂ ತೇಜೋಮಯನೂ ಆದ ಆಗ್ನಿದೇವನೇ ನೀನು ಲಗ್ನವಾಗದೇ ಇರುವ ಹೆಣ್ಣುಮಕ್ಕಳಿಗೆ ಪತಿ ಇರುತ್ತೀ . (ರಕ್ಷಕನಿರುತ್ತೀ) ಆಗ್ಗೆ ನೀನು ಅರ್ಯಮಾ ಎನ್ನುವ ಗುಪ್ತ ಹೆಸರಿನಿಂದ ಹೊಗಳಿಸಿಕೊಳ್ಳುತ್ತಿ. ಯಾಕೆಂದರೆ ನೀನು ಸತಿಪತಿಯರೀರ್ವರಲ್ಲೂ ಸಮಾನ ಮನಸ್ಸುಳ್ಳವರನ್ನಾಗಿ ಮಾಡುತ್ತೀ. ನಮ್ಮೆಲ್ಲರಿಗೂ ಪ್ರಿಯ ಮಿತ್ರನೂ ಸಂರಕ್ಷಕನೂ ಆದ ನಿನಗೋಸ್ಕರ ಆಕಳ ತುಪ್ಪದಿಂದ ಹವನ ಮಾಡುತ್ತೇವೆ. ಈ ದಂಪತಿಗಳನ್ನು ದೀರ್ಘಾಯುಷಿಯರನ್ನಾಗಿ ಮಾಡು (ಪಾತೀತಿ ಪತಿಃ) ಪಾಸಂರಕ್ಷಣೆ . ಕಾಪಾಡು . ಸಂರಕ್ಷಿಸು. (ಸ್ಮೃತಿ) ''**ಮನಸಾಭರ್ತುರತಿಚಾರೇ ತ್ರಿರಾತ್ರಂ ಯಾವಕಂ ಕ್ಷೀರಂ ಭುಜಾನಧಃಶಯಾನಾ ತ್ರಿರಾತ್ರಮಪ್ಸು ನಿಮ್ನಗಾಯಾಃ ಸಾವಿತ್ರ್ಯಷ್ಟ ಶತೇನ ಜುಹುಯಾತ್ ಪೂತಾಭವತೀತಿ ವಿಜ್ಞೇಯಮ್॥**'' ಯಾವ ಸ್ತ್ರೀಯು ತನ್ನ ಪತಿಯನ್ನು ಕಾಯಾ ವಾಚಾ ಮನಸಾ ಹಿಂಸಿಸುತ್ತಾಳೋ (ನಿಂದಿಸುತ್ತಾಳೋ) ಅವಳು ಪರಿಶುದ್ಧತೆಗಾಗಿ ಮೂರು ದಿವಸ ಗೋಧಿ ಆಹಾರ ಮತ್ತು ಹಾಲು ಇವುಗಳನ್ನು ಉಪಭೋಗ ಮಾಡಿ ಭೂಮಿಯ ಮೇಲೆ ಮಲಗುತ್ತಾ ಹಾಗೂ ತಣ್ಣೀರಿನಿಂದ ಸ್ನಾನ ಮಾಡಿ ಎಂಟು ನೂರು ಗಾಯತ್ರೀ ಮಂತ್ರವನ್ನು ಜಪಿಸುತ್ತಾ ಆಕಳ ತುಪ್ಪದಿಂದ ಹವನಿಸಿದರೆ ಈ ದೋಷದಿಂದ ಮುಕ್ತಳಾಗುತ್ತಾಳೆ. (ಸಾ.ಭಾ) ''**ವಿವಾಹ ಸಮಯೇ ಲಗ್ನೌಲಾಜಾದಿ ದ್ರವ್ಯ ಹೋಮೇಸತಿ ತಾಸಾಂ ಕನ್ಯಾತ್ವಂ ನಿವರ್ತತೇ ॥**'' ಗೃಹ್ಯಾಗ್ನಿಯಲ್ಲಿ ಲಾಜಾಹುತಿ (ಹೊದಲು) ಕೊಟ್ಟ ನಂತರ ಅವಳ ಕನ್ಯಾತ್ವವು ಸಮಾಸ್ತವಾಗುತ್ತದೆ. ಅನಂತರ ಪತ್ನೀತ್ವವು ಪ್ರಾಪ್ತವಾಗುತ್ತದೆ. (ವೇದ) ''**ಅಸ್ಥೂರಿಣೌಗಾರ್ಹಪತ್ಯಾನಿ ಸಂತು ಶತಂ ಹಿಮಾಃ॥ ಸೂರ್ಯಸ್ಯಾವೃತ ಮನ್ವಾವರ್ತೇ॥**'' (ಅಗ್ನೇ) ಅಗ್ನಿ ದೇವನೇ (ಗಾರ್ಹಪತ್ಯಾನಿ) ನಮ್ಮ ಗೃಹಸ್ಥ ಧರ್ಮದ ಕರ್ತವ್ಯ

ಕರ್ಮಗಳು (ಶತಂ ಹಿಮಾಃ) ನೂರು ವರುಷಗಳವರೆಗೂ (ಅಸ್ಥೂರಿ) ನಿರ್ವಿಘ್ನದಿಂದ ನಡೆಯುವಂತೆ ಅನುಗ್ರಹ ಮಾಡು (ಸೂರ್ಯಸ್ಯಾವೃತಂ) ಸೂರ್ಯನ ವ್ರತದಂತೇ (ಅನು ಆವರ್ತೇ) ನಾವು ವ್ರತಗಳನ್ನೂ ಮತ್ತು ನಿಯಮಗಳನ್ನು ಆಚರಿಸುತ್ತೇವೆ. (ಭಾವ) ನಮ್ಮ ಗೃಹಸ್ಥಧರ್ಮದ ಕರ್ತವ್ಯ ನಿಯಮಗಳು ನಿರ್ವಿಘ್ನದಿಂದ ನಡೆಯುತ್ತಿರುವಂತೆ ಅಗ್ನಿದೇವನೇ ನಮಗೆ ಅನುಗ್ರಹ ಮಾಡು. ನಾವು ಸೂರ್ಯನಂತೇ ತೇಜಸ್ವಿಗಳೂ ಮತ್ತು ನಿಯಮಬದ್ಧವಾಗಿ ನಮ್ಮ ಗೃಹಸ್ಥ ಧರ್ಮವನ್ನು ಆಚರಿಸುತ್ತಿರುತ್ತೇವೆ. ಹಾಗೂ ಬಹು ವರ್ಷಗಳವರೆಗೂ ಬದುಕುತ್ತಿರುವವರಾಗಿ ಆನಂದದಿಂದ ಗೃಹಸ್ಥಾಶ್ರಮ ಧರ್ಮವನ್ನು ನಡೆಸಿಕೊಂಡು ಹೋಗುತ್ತೇವೆ. ಇದಕ್ಕೆ ನಿನ್ನ ಕೃಪಾಕಟಾಕ್ಷವು ಸದಾ ನಮ್ಮ ಮೇಲೆ ಇರಲಿ ಎಂದು ನಮ್ಮ ಹೃತ್ಪೂರ್ವಕ ಪ್ರಾರ್ಥನೆ.

ತೈ - ೨-೩-೧೦ ರಲ್ಲಿ **''ತಂ ತ್ರಯೀ ವೇದಸ್ಯ ಸೃಜಂತ ಅಥಹ ಸೀತಾಂ ಸಾವಿತ್ರೀ ಸೋಮರಾಜಾ ನ ಚಕ್ರಮೇ - ತಸ್ಯಾ ಉ ಹ ತ್ರೀನ್ ವೇದಾನ್ ಪ್ರದದೌ॥''** ಸೋಮನು ಸೀತಾ ಸಾವಿತ್ರೀಯರಿಗೆ ಮೂರು ವೇದಗಳನ್ನು ಕೊಟ್ಟನೆಂಬುದರ ವಿವರಣೆ ಇದೆ. ಮನುವಿನ ಪುತ್ರೀ ಇಡಾಳನ್ನು ಯಜ್ಞತತ್ವ ಪ್ರಕಾಶನ ಸಮರ್ಥಾ ಎಂದು ಕರೆದಿದ್ದಾರೆ. ಈಕೆಯು ತಂದೆಗೆ ಯಜ್ಞ ಸಂಬಂಧವಾಗಿ ಸಲಹೆಗಳನ್ನು ಕೊಡುತ್ತಿದ್ದಳು. ಸ್ತ್ರೀಯರು ವೇದಾಧ್ಯಯನ ಸಂಪನ್ನರಾಗಿ ವೇದ ಪ್ರವಚನವನ್ನು ಮಾಡುತ್ತಿದ್ದರು. ಭರದ್ವಾಜ ಮಹರ್ಷಿಗಳ ಮಗಳು ಶೃತಾವತೀ ಬ್ರಮ್ಹಚಾರಿಣಿ ವೇದಾಧ್ಯಯನ ಸಂಪನ್ನೆ. ವೇದಾಧ್ಯಯನ ಸಂಪನ್ನಳಾದ ಬ್ರಮ್ಹಜ್ಞಾನಿಯು ಮೋಕ್ಷವನ್ನು ಪಡೆದಳು. (ಶ್ಲೋಕ) **''ಒಭೂವ ಶ್ರೀಮತೀ ರಾಜನ್ ಶಾಂಡಿಲ್ಯಸ್ಯ ಮಹಾತ್ಮನಃ ॥ ಸುತಾ ಧೃತವ್ರತಾ ಸಾಧ್ವೀ ನಿಯತಾ ಬ್ರಹ್ಮಚಾರಿಣೀ ॥ ಸಾಧುತಪ್ತ್ವಾ ತಪೋ ಘೋರೋ ದುಶ್ಚರಂ ಸ್ತ್ರೀ ಜನೇನ ಸಃ॥ ಗತಾ ಸ್ವರ್ಗಂ ಮಹಾಭಾಗಾ ದೇವ ಬ್ರಾಮ್ಹಣ ಪೂಜಿತಾ ॥''** ಶಾಂಡಿಲ್ಯನ ಮಗಳು ಶ್ರೀಮತಿಯು ಅನೇಕ ವ್ರತಗಳನ್ನಾಚರಿಸಿ ವೇದಾಧ್ಯಯನ ಮತ್ತು ವೇದೋಕ್ತ ಕರ್ಮಗಳನ್ನಾಚರಿಸುತ್ತಾ ಉಗ್ರ ತಪಶ್ಚರ್ಯೆಯಿಂದ ಪೂಜಿತಳಾಗಿ ಸ್ವರ್ಗವನ್ನು ಪಡೆದಳು. (ವೇದ) **''ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ ಸಹಚಿತ್ತಮೇಷಾಂ ಸಮಾನಂ ಮಂತ್ರ ಮಭಿಮಂತ್ರಯೇವಃ ಸಮಾನೇನವೋ ಹವಿಷಾ ಜುಹೋಮಿ॥''** ಬ್ರಮ್ಹದೇವನು ನಮ್ಮ ಮತ್ತು ನಿಮಗೆ ಮಂತ್ರಗಳನ್ನು ಸಮಾನ ರೂಪವಾಗಿ ಕೊಟ್ಟಿರುತ್ತಾನೆ. ನಿಮ್ಮ ಮತ್ತು ನಮ್ಮ ವಿಚಾರಗಳು ಸಮಾನವಾದವುಗಳಿರಬೇಕು. ನಮ್ಮ ಮತ್ತು ನಿಮ್ಮ ಸಭೆಗಳು ಸರ್ವರಿಗೂ ಸಮಾನ ಅವಕಾಶಗಳನ್ನು ಕೊಡಲೀ ನಮ್ಮ ಮತ್ತು ನಿಮ್ಮ ಮನಸ್ಸು ಸಮಾನವಾಗಿ ಸರ್ವರೂಪಗಳನ್ನು ಹೊಂದಿಕೊಂಡು ಸುಖವಾಗಿ ಬಾಳಲೀ. ನಿಮಗೂ ಸಮಾನವಾಗಿ ಮಂತ್ರೋಪದೇಶ ಮಾಡುತ್ತೇನೆ. ಆಧ್ಯಾತ್ಮಿಕ ಸಾಧನ ಪಥದಲ್ಲಿ ಸ್ತ್ರೀಯರೂ ಸಹ ಪ್ರಗತಿಯನ್ನು ಸಾಧಿಸಿ ಬ್ರಮ್ಹಜ್ಞಾನ ಮೂಲಕ ಅಮೃತತ್ವವನ್ನು ಪಡೆದರು ಎನ್ನುವುದು ಅನೇಕ ಕಡೆಗಳಲ್ಲಿ ಕಂಡುಬರುತ್ತದೆ.

ಗಾಯತ್ರೀ ಮಹಾಮಂತ್ರಾನುಷ್ಠಾನ ಮೂಲಕ ಸ್ತ್ರೀಯರು ಪಾಪಮುಕ್ತರಾಗಿ ಸುಪುತ್ರರಿಗೂ ಜನ್ಮ ಕೊಟ್ಟು ತಮ್ಮ ನಿತ್ಯ ಜೀವನವನ್ನು ವೇದೋಕ್ತ ಕರ್ಮಾನುಷ್ಠಾನ ಮೂಲಕ ಅಭ್ಯುದಯ ನಿಃಶ್ರೇಸ ಸಿದ್ಧಿಯನ್ನು ಪಡೆದು ಕೀರ್ತಿಯನ್ನು ಸಂಪಾದಿಸಿದರು. (ಇತಿ) (ವೇದ) **''ಇಯಮಗ್ನೇನಾರೀ**

ಪತಿಂ ವಿದೇಷ್ಟಿ ಸೋಮೋಹಿರಾಜಾ ಸುಭಗಾಂಕೃಣೋತು॥ ಸುವಾನಾ ಪುತ್ರಾನ್ ಮಹಿಷೀ ಭವಾತಿ ಗತ್ವಾ ಪತಿಂ ಸುಭಗಾ ವಿರಾಜತು॥'' ಲಗ್ನವಾಗದೇ ಇರುವ ಈ ಕನ್ಯೆಯು ಪತಿಯನ್ನು ಪಡೆಯಲಿ. ಸೋಮದೇವನು ಇವಳಿಗೆ ಸೌಭಾಗ್ಯಾಭಿವೃದ್ಧಿಯನ್ನು ಮಾಡಲಿ. ಅತ್ಯಂತ ಶ್ರೇಷ್ಠವಾದ ಜ್ಞಾನವಂತ ಮಕ್ಕಳನ್ನು ಪಡೆದು ನಮ್ಮ ವಂಶ ಪರಂಪರೆ (ಋಷಿ ಪರಂಪರೆ) ಯನ್ನು ಅಭಿವೃದ್ಧಿ ಮಾಡಲೀ. ಗೃಹಸ್ಥಾಶ್ರಮ ಸ್ವೀಕರಿಸಿದ ಇವಳು ಗೃಹರಾಜ್ಯಕ್ಕೆ (ಮನೆಗೆ) ಸಂಮ್ರಾಜ್ಞಿಯಾಗಲಿ.

ಮನುಷ್ಯರ ಮನಸ್ಸಿನಲ್ಲಿ ದೇವಶಕ್ತಿಯೂ ಮತ್ತು ದಾನವ ಶಕ್ತಿಯೂ ಇರುತ್ತದೆ. ಸತ್ ಮತ್ತು ಅಸತ್. ಇವು ತಮ್ಮ ಕಡೆಗೆ ಜಗ್ಗಾಡುತ್ತಿರುತ್ತವೆ. ಜೀವಾತ್ಮನನ್ನು ದುಷ್ಟಶಕ್ತಿಯು ತಮ್ಮ ವಶಪಡಿಸಿಕೊಂಡು ದುಷ್ಟ ಪ್ರವೃತ್ತಿಯ ಮೂಲಕ ಪಾಪಕರ್ಮಗಳನ್ನು ಜೀವಾತ್ಮನಿಂದ ಮಾಡಿಸಿ ಅಧೋಗತಿಗೆ ಹಾಕುತ್ತದೆ. ಇದು ಪಶು ಬಲದಿಂದ ಕೂಡಿದ್ದರಿಂದ ದೇವತೆಗಳಿಗೆ (ಸತ್ ಸಾಧನೆಗೆ) ತೊಡಕನ್ನುಂಟು ಮಾಡಿ ಸಕಲ ಪಾಪಗಳನ್ನು ಜೀವಾತ್ಮನ ಮೇಲೆ ಹೊರಿಸುತ್ತದೆ. ಈ ಪಶು ಬಲವೇ ದೇವತೆಗಳಿಗೆ ನಾನಾ ವಿಪತ್ತುಗಳನ್ನುಂಟು ಮಾಡಿದ್ದಿರುತ್ತದೆ. ನಾನಾ ಉಪಾಯಗಳಿಂದ ಸತ್ ಶಕ್ತಿಯನ್ನು ನಮ್ಮಲ್ಲಿ ಬೆಳೆಸಿಕೊಂಡು ಸತ್ ಸಾಧನೆಯ ಮೂಲಕ ನಾವು ದುಷ್ಟಶಕ್ತಿಯನ್ನು ದೂರ ಮಾಡಿ ನಮ್ಮ ಬದುಕನ್ನು ಸಫಲಗೊಳಿಸಿಕೊಳ್ಳಬೇಕು.

ಈ ಮೊದಲು ವಿವರಿಸಿದ ವೇದ ಮತ್ತು ಸ್ಮೃತಿಗಳ ಆಧಾರ ಪ್ರಕಾರ ಸ್ತ್ರೀಯರಿಗೆ ಉಪನಯನ ಸಂಸ್ಕಾರ ಗಾಯತ್ರೀ ಮಂತ್ರೋಪದೇಶ ಬ್ರಮ್ಹಚರ್ಯ ಪರಿಪಾಲನೆ ಇತ್ತು ಎನ್ನುವುದು ನಮಗೆ ಕಂಡುಬರುತ್ತದೆ. ಋಷಿಗಳ ಆಶ್ರಮದಲ್ಲಿ ವೇದಾಧ್ಯಯನ, ಶಾಸ್ತ್ರಾಧ್ಯಯನವನ್ನು ಕುಮಾರಿಯರು ಮಾಡುತ್ತಿದ್ದರು. ಆದರೆ ಮಧ್ಯಂತರದಲ್ಲಿ ನಮ್ಮಿಂದ ದೂರಾದದ್ದು ಇದು ಶೋಚನೀಯ ವಿಷಯ. ಈ ಪರಿಸ್ಥಿತಿ ಬಂದ ಕಾರಣಗಳ ಬಗ್ಗೆ ವಿಚಾರ ಮಾಡುವುದು ಅತ್ಯವಶ್ಯ. ಯಾಕೆಂದರೆ ಈ ಮೊದಲು ಇತ್ತು, ಈಗ ಇಲ್ಲ ವಿವೇಚನೆ. ನಮ್ಮ ಭಾರತ ದೇಶವನ್ನು ಕೆಲವು ವರುಷಗಳ ಹಿಂದೆ ಯವನರು ಮತ್ತು ಮ್ಲೇಚ್ಛರ ಆಳುವಿಕೆ ಬಂತು. ಇವರ ಆಳುವಿಕೆಯಲ್ಲಿ ವೇದ ವಿದ್ವಾಂಸರ (ಶ್ರೇಷ್ಠ ಜ್ಞಾನಿಗಳ)ನ್ನೂ ಸ್ತ್ರೀಯರನ್ನೂ ಅನೇಕ ಹೆಣ್ಣು ಮಕ್ಕಳ ಶಿರಚ್ಛೇದನ ಮಾಡಿಸಿದರು. ಅಂದರೆ ವೇದಾಧ್ಯಯನ ಮಾಡುವ ಎಲ್ಲಾ ಸ್ತ್ರೀ ಪುರುಷರೂ ನಾಶವಾದರು. ಇದರ ಪರಿಣಾಮವಾಗಿ ಜ್ಞಾನೀ ಜನರೇ (ಹವ್ಯಕರೇ) ನಾಶವಾಗುವ ಪರಿಸ್ಥಿತಿ ಒದಗಿ ಬಂತು. ಸ್ತ್ರೀ ಸಮಾಜವೇ ನಾಶವಾದರೆ ಸಂತಾನಗಳ ಉತ್ಪತ್ತಿಯೇ ಆಗುವುದಿಲ್ಲ ಮತ್ತು ಹವ್ಯಕರೇ ಉಳಿಯುವುದಿಲ್ಲ ಎನ್ನುವ ಭೀತಿಯ ಮೂಲಕ ಸ್ತ್ರೀಯರು ವೇದಾಧ್ಯಯನ ಮಾಡಬಾರದೆಂದು ಕಟ್ಟಪ್ಪಣೆ ಮಾಡಿದರು ಈ ಮೂಲಕವಾಗಿಯೇ ಸ್ತ್ರೀ ಸಮಾಜವನ್ನು ಸಂರಕ್ಷಿಸಿಕೊಂಡರು. ಅಂದರೆ ಆ ಕಟುಕರಿಂದ ಸಂರಕ್ಷಿಸಿಕೊಂಡರು. ಇದು ಸತ್ಯ ವಿಚಾರ. ಆದರೆ ಭಾರತೀಯರಾದ ನಾವು ಇಂದಿಗೂ ಈ ಪರಿಸ್ಥಿತಿಯನ್ನು ಅನುಭವಿಸುತ್ತಲೇ ಇದ್ದೇವೆ. (ವಿವೇಚನೆ) ನಮ್ಮದೇ ಆದ ಪಾಕ್ ಆಕ್ರಮಣ ಕಾಶ್ಮೀರದಲ್ಲಿರುವ ಶ್ರೇಷ್ಠ ಜ್ಞಾನಿಗಳನ್ನೂ ವೇದ ವಿದ್ವಾಂಸರನ್ನೂ ಕೊಲೆಗೈದರು. ಮತ್ತು ಕೆಲವು ವಿದ್ವಾಂಸರಿಗೆ ನಾನಾ ರೀತಿಯ ಹಿಂಸೆಯನ್ನು ಕೊಟ್ಟರು. ಇವರ ಉಪಟಳ ತಡೆಯಲಿಕ್ಕಾಗಿಯೇ ಅನೇಕ ವಿದ್ವಾಂಸರು ತಮ್ಮ ಆಸ್ತಿ ಮನೆ ಸಂಪತ್ತುಗಳನ್ನು ಬಿಟ್ಟು ದೂರ ಹೋದರು. ಅಲ್ಲಿ ಹಿಂದೂ

ಸಮಾಜವೇ ನಾಶದ ಅಂಚಿನಲ್ಲಿದೆ. ಆದ ಪ್ರಯುಕ್ತ ಇಂದಿಗೂ ಅವರಿಂದುಂಟಾಗುವ ಹಿಂಸೆಯನ್ನು ಅನುಭವಿಸುತ್ತಲೇ ಇದ್ದೇವೆ. ಇದು ಭಾರತೀಯರಾದ ನಮ್ಮ ದುರ್ಭಾಗ್ಯ.

(ವಿವೇಚನೆ) ಈ ಮೊದಲು ವಿವರಿಸಿದ ವೇದ ಮತ್ತು ಸ್ಮೃತಿಯ ಆಧಾರದ ಮೇಲೆ ಸ್ತ್ರೀಯರಿಗೂ ಸಹ ಉಪನಯನ, ಗಾಯತ್ರೀ ಅನುಷ್ಠಾನ ವೇದಾಧ್ಯಯನ ಅಧಿಕಾರವಿತ್ತೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಮಧ್ಯಂತರ ನಾನಾ ದುರಾಡಳಿತಗಳ ಮೂಲಕ ಸ್ತ್ರೀ ಸಮಾಜವನ್ನು ರಕ್ಷಿಸಿಕೊಳ್ಳುವುದು ಬಹುಕಷ್ಟಕರವಾಯಿತು. ಸ್ತ್ರೀಸಮಾಜವೇ ನಾಶವಾದ ಮೇಲೆ ಜ್ಞಾನ ಜನಾಂಗವೇ ಉಳಿಯುವುದಿಲ್ಲ. ಆದ ಕಾರಣ ಆ ಸಂದರ್ಭದಲ್ಲಿ ಅನಿವಾರ್ಯವಾಗಿ ಸ್ತ್ರೀ ಸಮಾಜಕ್ಕೇ ವೇದಾಧ್ಯಯನ, ಉಪನಯನ, ಗಾಯತ್ರೀ ಅನುಷ್ಠಾನವನ್ನು ಮಾಡಬಾರದೆಂಬುದನ್ನು ಆಚರಣೆಗೆ ತರಲೇಬೇಕಾಯಿತು. ಒಂದು ವೇಳೆ ಅವರಿಗೆ ಅಧಿಕಾರವೇ ಇಲ್ಲದಿದ್ದರೆ ಅವರು ಮೃತರಾದ ನಂತರ ಕರ್ಣ ಸೂತ್ರದಿಂದ ಸಪಿಂಡೀಕರಣದವರೆಗೂ ಅಮಂತ್ರಕವಾಗಿಯೇ ಮಾಡಬೇಕಿತ್ತು. ವೇದ ಮತ್ತು ಸ್ಮೃತಿಯ ಆಧಾರದ ಮೇಲೆ ಸಮಂತ್ರಕವಾಗಿಯೇ ಮಾಡಬೇಕೆಂದು ವಿಧಿಸಿರುತ್ತಾರೆ. ಅಂದಿನಿಂದ ಇಂದಿನವರೆಗೂ ವೇದೋಕ್ತವಾಗಿಯೇ ಈ ಸಂಸ್ಕಾರವನ್ನು ಆಚರಿಸುತ್ತಾರೆ. ಇದು ವಂಶ ಪರಂಪರಾಗತವಾಗಿ ನಡೆದು ಬಂದಿದೆ. ದೇವೀ ಪೂಜೆಗಳಲ್ಲಿ ಉಪವೀತಂ ಸಮರ್ಪಯಾಮಿ ಎಂದು ಷೋಡಶೋಪಚಾರ ಪೂಜೆಯಲ್ಲಿ ಹೇಳುತ್ತಾರೆ. **"ಬ್ರಮ್ಹಸೂತ್ರಮಿದಂದೇವಿ ತ್ರಿಗುಣಂ ತ್ರಿಗುಣೀ ಕೃತಮ್ ॥ ಆನೀತಂ ನೀಯತಾಂ ವಕ್ಷಸ್ಸ್ಥದೀಯಂ ವಿಶದಪ್ರಭಮ್ ॥ ದೇವ್ಯೈ ನಮಃ ಉಪವೀತಂ ಸಮರ್ಪಯಾಮಿ."**

★★★

........ಬದುಕು ಬೆಳಗಲು ಬದುಕಿನಿಂದಾಗಿ
ಬೆಳೆಯಲು ನಮಗೆ ಸಂಸ್ಕಾರಗಳು ಅನಿವಾರ್ಯ. ಬದುಕು
ಸಾರ್ಥಕವಾಗಲು ವ್ಯರ್ಥವಾದದ್ದು ಕಳೆಯಬೇಕು. ಯೋಗ್ಯವಾದದ್ದು
ಬೆಳೆಯಬೇಕು. ಅದಕ್ಕೆ ನಮ್ಮ ಪ್ರಾಚೀನ ಋಷಿಗಳು ತಿಳಿಸಿದ
ಸಂಸ್ಕಾರಗಳೆಂಬ ಕೃಷಿಕರ್ಮ ಅತ್ಯಗತ್ಯ. ಇದರಿಂದಾಗಿ ಬದುಕಿನ ಶುದ್ಧಿ
ಅಂತಿಮವಾಗಿ ಸಿದ್ಧಿ. ಇದೇ ಪೂರ್ಣತೆ.
ವೇದ ಮಂತ್ರಗಳ ಹಾಗೂ ಅನೇಕ ಶಾಸ್ತ್ರವಚನಗಳ ಹಿನ್ನೆಲೆಯೊಂದಿಗೆ
ರಚಿತವಾದ ಈ ಕೃತಿ ಶ್ರೀಯುತರು ಋಷಿ ಕೃತಿಗಳೊಂದಿಗೆ
ನಿರಂತರ ನಡೆಸುತ್ತಿರುವ ಅಧ್ಯಯನ ಅನುಸಂಧಾನ ಅನುಷ್ಠಾನಗಳ
ಕೃಷಿ ಕರ್ಮಕ್ಕೆ ಜ್ವಲಂತ ನಿದರ್ಶನ.
ಈ ಕೃತಿಯ ಓದಿನಿಂದ ಅಜ್ಞಾನದಿಂದಾಗಿಯೋ
ಅನ್ಯಥಾ ಜ್ಞಾನದಿಂದಾಗಿಯೋ ಅಥವಾ ಇನ್ನಿತರ
ಆಡಂಬರದಿಂದಾಗಿಯೋ ಸಂಸ್ಕಾರ ಕರ್ಮಗಳ ಆಚರಣೆಯಲ್ಲಿ
ಉಂಟಾಗಿರುವ ಬದಲಾವಣೆಯು ಸುಧಾರಣೆಯನ್ನು
ಕಂಡು ಮತ್ತೆ ಮೂಲ ರೂಪಕ್ಕೆ ಬರುವಂತಹದಾದರೆ
ಶ್ರೀಯುತರ ಈ ಪರಿಶ್ರಮ ಸಾರ್ಥಕ...........

- ಮುನ್ನುಡಿಯಿಂದ

(ಚೇತನಾ ಸಹಕಾರಿ ಆಫ್‌ಸೆಟ್ ಮುದ್ರಣ, ಶಿರಸಿ, ಫೋ. : 08384 - 227002)